ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು: ಕ. ರಾ. ಪುರೋಹಿತ

- ಬಲ್ಲವರ ನುಡಿಗಳು -

...ದು ಜನಾಂಗದ ಮುನ್ನಡೆಗೆ ಮಿತಿ-ಮೇರೆ ಹಾಕಬಲ್ಲವನಾರು?

—ಪಾರ್ನೆಲ

★

ಯುದ್ಧಗಳನ್ನುಂಟುಮಾಡುವ ಮಾನವ ಸ್ವಭಾವ ನದಿಯಂತಿದೆ. ಭೂಸ್ವರೂಪ ಹೇಗಿದ್ದಷ್ಟು ಕಾಲ ನದಿಯ ಸ್ವಭಾವವನ್ನು ಬದಲಿಸುವದು ಸಾಧ್ಯವೇ ಇಲ್ಲ. ಆದರೆ, ಅದು ಉಕ್ಕಿ ದಡಗಳನ್ನು ಹಾಯ್ದು ನಮ್ಮ ವಿತ್ತ ಜೀವಿತಗಳನ್ನು ಕೊಚ್ಚಿಕೊಂಡು ಹೋಗುವಾಗ ನಾವು ಕೈಚೆಲ್ಲಿ, "ನದಿಯ ಗತಿ ಬದಲಿಸಲು ನಮ್ಮಿಂದಾಗುವದಿಲ್ಲ, ...ಂದ ಮೇಲೆ ನಾವು ಮಾಡತಕ್ಕದ್ದೇನಿದೆ?" ಎಂದು ಸುಮ್ಮನಿರುವೆವೆ? ಇಲ್ಲ. ನಾವು ಒಡ್ಡು ಹಾಕಲು ಉದ್ಯುಕ್ತರಾಗುತ್ತೇವೆ.

—ಐನ್‌ಸ್ಟೀನ್



ದಿವಂಗತ ಶ್ರೀಮತಿ
ಸರೋಜಿನಿ ನಾಯುಡು

ಭಾರತದಲ್ಲಿ ಗವರ್ನರ ಪದಕ್ಕೆ ಬಂದ ಪ್ರಥಮ ಮಹಿಳೆಯಾದ ಯುಕ್ತ ಪ್ರಾಂತ ಗವರ್ನರ ಶ್ರೀಮತಿ ನಾಯುಡು ಅವರು ತಾ. ೨ ಬೆಳಿಗ್ಗೆ ೩-೩೦ ಗಂಟೆಗೆ ಹೃದಯ ವಿಕಾರದಿಂದ ಲಖನೋದಲ್ಲಿ ಮರಣಹೊಂದಿದರು. ಅವರ ೭೦ ವರ್ಷದ ಜೀವಮಾನವೆಲ್ಲ ದೇಶಸೇವೆಯಲ್ಲಿ ಸವೆದಿತ್ತು.

ನೇಪಾಳದ ಕಥೆ —ಪುಟ ೩

ಆಹಾರ ಉಳಿತಾಯದ ಉಪಾಯಗಳು

— ಕರಟೆ (ಪುಟ ೨)

KARMAVEER ... Illustrated Weekly ... HUBLI

ಆಹಾರ ಉಳಿತಾಯದ ಉತ್ತಮ ಉಪಾಯಗಳು

ಲೇಖಕರು: ಶ್ರೀ ಮಾಧವ ಕೌಜಲಗಿ

ಸದ್ಯದ ಪರಿಸ್ಥಿತಿಯಲ್ಲಿ ಆಹಾರವನ್ನು ಬೆಳೆಯುವದು ಎಷ್ಟು ಮಹತ್ವದ್ದಿದೆಯೋ ಅಷ್ಟೇ ಆಹಾರವನ್ನು ಉಳಿಸಿಕೊಳ್ಳುವದು ಅವಶ್ಯವಿದೆ. ಅದಕ್ಕಾಗಿಯೇ ಮೈಸೂರ ಸಂಸ್ಥಾನ ಸರಕಾರದವರು ಸಂಸ್ಥಾನದೊಳಗಿನ ಎಲ್ಲ ಹೊಟೆಲುಗಳ ಮೇಲೆ ನಿರ್ಬಂಧ ಹಾಕಿ, ಮಧ್ಯಾನ್ಹ ೧೦ ರಿಂದ ೩ ಘಂಟೆಯ ವರೆಗೆ ಹಾಗೂ ಸಂಜೆ ೬ ಘಂಟೆಯ ನಂತರ ಹಾಟೆಲಗಳು ಮುಚ್ಚಿರಬೇಕೆಂದು ಆಜ್ಞೆ ಹೊರಡಿಸಿದ್ದಾರೆ.

ಇದರಿಂದ ಎಷ್ಟು ಸಾವಿರ ಜನರ ಆಹಾರ ಉಳಿಸಿದಿರೆಂದು ಕೆಲವು ಹೊಟೆಲ ಮಾಲಿಕರು ಅಲ್ಲಿಯ ಆಹಾರ ಮಂತ್ರಿಗಳನ್ನು ಕೇಳಿದರಂತೆ. ಮಂತ್ರಿಗಳು "ಕ್ಷಣಶಃ ಕಣಶಶ್ಚೈವ ಆಹಾರ ಧಾನ್ಯಂಚ ಸಾಧಯೇತ್!" ಎಂಬ ನೀತಿ ವಾಕ್ಯವನ್ನು ಹೇಳಿ ತಮ್ಮ ಹುಕುಮುನ್ನು ಸಮರ್ಥಿಸಿಕೊಂಡರಂತೆ. ಆದರೆ ಆಹಾರ ಮಂತ್ರಿಗಳು ಇನ್ನೂ ಕೆಲವು ಮಹತ್ವದ ಅನ್ನ ಸಾಧನೆಯ ಹಾಗೂ ಉಳಿತಾಯದ ಮಾರ್ಗಗಳನ್ನು ಮರೆತಂತೆ ಕಾಣುತ್ತದೆ. ಸದ್ಯದ ದಾರುಣವಾದ ಅನ್ನಪರಿಸ್ಥಿತಿಯನ್ನು ಅನುಲಕ್ಷಿಸಿ ಮಾನ್ಯ ಆಹಾರ ಮಂತ್ರಿಗಳ ಸನ್ನಿಧಾನಕ್ಕೆ ಕೆಲವು ಉಪಯುಕ್ತ ಸೂಚನೆಗಳನ್ನು ಕಳಿಸಿರುತ್ತೇನೆ. ಆ ಸೂಚನೆಗಳು ಸ್ವೀಕೃತವಾದಲ್ಲಿ ಮಾನ್ಯ ಮಂತ್ರಿಗಳು ಅದನ್ನು ಜಾರಿಯಲ್ಲಿ ತರಲು ಏನಾದರೂ "ಕಮೀಟಿ"ಗಳನ್ನು ನೇಮಿಸುವದಿದ್ದರೆ, ನನ್ನನ್ನು ಮರೆಯಬಾರದೆಂದು ಹೇಳದಿರಲಾರೆ.

ಆಹಾರ ಉಳಿತಾಯದ ಉತ್ತಮ ಉಪಾಯಗಳು

೧) ಇಡೀ ದೇಶಕ್ಕೆ ವಿಶೇಷತಃ ಕರ್ನಾಟಕಕ್ಕೆ ಶನಿಕಾಟವು ಪ್ರಾರಂಭವಾದದ್ದರಿಂದ ಕರ್ನಾಟಕದೊಳಗಿನ ಆಬಾಲವೃದ್ಧರೆಲ್ಲರೂ ಶನಿವಾರ ವ್ರತವನ್ನು ಕೈಕೊಳ್ಳಬೇಕು. ಶನಿವಾರ ಮಧ್ಯಾನ್ಹ ಊಟದ ನಂತರ ಏನೂ ತಕ್ಕೊಳ್ಳಬಾರದು. ಸಂಜೆ ಎಲ್ಲರೂ ಶನಿಮಾಹಾತ್ಮ್ಯವನ್ನು ಪಠಿಸಬೇಕು.

೩) ಈ ವರ್ಷ ನವರಾತ್ರಿ, ಷಡ್ರಾತ್ರಿ, ದೀಪಾವಳಿ, ಪಕ್ಷಮಾಸ, ಶ್ರಾದ್ಧ, ಮುಂಜಿ ಮದುವೆ, ಹಬ್ಬ ಹುಣ್ಣಿವೆ, ಇತ್ಯಾದಿಗಳನ್ನು ಮಾಡಕೂಡದು. ತಮ್ಮ ಮನೆಯೊಳಗಿನ ಎಲ್ಲ ದೇವರ ಪೆಟ್ಟಿಗೆಗಳನ್ನು ಆಯಾ ಜಿಲ್ಹೆಯ ಕಲೆಕ್ಟರ ವಶಕ್ಕೆ ಒಪ್ಪಿಸಬೇಕು. ಅವರು ಎಲ್ಲ ದೇವರ ಪೂಜೆಗಳನ್ನೂ ಸಾಮೂಹಿಕವಾಗಿ ಮಾಡುವ ಮತ್ತು ಸಾಮೂಹಿಕ ನೈವೇದ್ಯದ ವ್ಯವಸ್ಥೆ ಮಾಡುವರು. ಅಂದರೆ ಈ ವರ್ಷದ ನವರಾತ್ರಿ, ಷಡ್ರಾತ್ರಿ, ಹಬ್ಬ ಹುಣ್ಣಿವೆಗಳ ಪೂಜೆಗಳನ್ನು ಒಟ್ಟಿಗೆ ಮಾಡಿ ಆಯಾ ದೇವರ ಮಾಲಕರಿಗೆ ಆ ಬಗ್ಗೆ ಒಂದು ಸರ್ಟಿಫಿಕೇಟ ಕೊಡುವರು. ಅಂದರೆ ಅವರಿಗೆ ಸ್ವರ್ಗದಲ್ಲಿ [illegible] ರಾತ್ರಿ ಉಪವಾಸ ಮಾಡುವವರಿಗೆ ಗವ್ಹರ್ನರರ ಸ್ವಹಸ್ತದಿಂದ ಅಂಕಿತ ಹಾಕಲ್ಪಟ್ಟ ಸರ್ಟಿಫಿಕೇಟ ಕೊಡಲಾಗುವದು.

೪) ಪ್ರಾಂತದ ಎಲ್ಲ ಆಸ್ಪತ್ರೆಗಳಿಗೆ ರೋಗಿಗಳನ್ನು ಬರೀ ನಿಸರ್ಗ ಚಿಕಿತ್ಸೆಯ ಆರೈಕೆಯಿಂದಲೇ ಗುಣಪಡಿಸಬೇಕೆಂದು ಹುಕುಮು ಕೊಡಬೇಕು. ಆಸ್ಪತ್ರಿಗಳ ತಲೆಬಾಗಿಲಿಗೆ "ಲಂಘನಂ ಪರಮೌಷಧಂ" ಎಂಬ ಹಲಗೆ ತೂಗಹಾಕಬೇಕು; ಮತ್ತು ಇಂಥ ಭಿತ್ತಿ ಪತ್ರಿಕೆಗಳನ್ನು ಮಾಡಿ ಮುಖ್ಯ ಬೀದಿಗಳಲ್ಲಿ ಹಚ್ಚಿಸಬೇಕು.

೫) ದೇವಾಲಯಗಳಿಗೆ ಧಾನ್ಯ ಒಯ್ಯುವದು, ಭಿಕ್ಷುಕರಿಗೆ ಧಾನ್ಯ ಕೊಡುವದು ಮತ್ತು ಚಿತ್ರಾಹುತಿ ಹಾಗೂ ವೈಶ್ವದೇವದಲ್ಲಿ ಅನ್ನದ ಅಥವಾ ಯಾವದೇ ಆಹಾರದ ಉಪಯೋಗ ಕೂಡದು.

೬) ಈ ಸಾರಿ ಬೆಳೆಗಳಿಗೆ ತೆನೆಯೊಡೆದ ಕೂಡಲೇ ಪಕ್ಷಿಪಕ್ಷಿಗಳಿಂದ ಆಹಾರ ನಾಶವಾಗಬಾರದೆಂದು ವೈಮಾನಿಕ ಪಕ್ಷಿ ಕಾಯುವವರನ್ನು ನೇಮಿಸಬೇಕು.

೭) ಯಾರಾದರೂ ಅಜೀರ್ಣದಿಂದ ಜಡ್ಡು ಬಿದ್ದರೆ ಅವರಿಗೆ ಅಥವಾ ಅವರ ಪಾಲಕರಿಗೆ ಸಕ್ತಮಶಿಕ್ಷೆ ವಿಧಿಸಲಾಗುವದು. ಅದಕ್ಕಾಗಿ, ಲಿವ್ಹರಬೇನೆಯ ಮೇಲೆ, ಅಥವಾ ಔಷಲೆಣ್ಣೆ, ಸುಖಸಾರಕ ಚೂರ್ಣ, ಅಥವಾ ಇತರ ರೇಚಕ ಔಷಧಿಗಳನ್ನು ಕೊಂಡುಕೊಳ್ಳುವವರ ಮೇಲೆ ಪೋಲೀಸ ಸಿ. ಆಯ. ಡಿ ಗಳು ಲಕ್ಷವಿಟ್ಟಿರಬೇಕು.

೮) ದೇಶದ ಅನ್ನನಾಶಕ್ಕೆ ಮುಖ್ಯವಾಗಿ ಬ್ರಾಹ್ಮಣರೇ ಕಾರಣರಾದದ್ದರಿಂದ ಅವರನ್ನು ಒಂದು ವರ್ಷದ ವರೆಗೆ ಹಿಂದುಸ್ತಾನ ಸಂರಕ್ಷಣೆಯ ಹುಕುಮಿನ ಅನ್ವಯ ಬಂಧನದಲ್ಲಿಡಬೇಕು.

೯) ದೇಶದಲ್ಲಿಯ ಕೋಟ್ಯಂತರ ರೂಪಾಯಿಗಳ ಆಹಾರ ನಾಶಕ್ಕೆ ಇಲಿಗಳೂ ಅಷ್ಟೇ ಕಾರಣವಾಗಿದ್ದರಿಂದ ಅವುಗಳ ನಾಶಕ್ಕೆ, ಬೆಕ್ಕುಗಳನ್ನೂ ಇಲಿಬಲೆಗಳನ್ನೂ ಮನೆ ಅಥವಾ ಓಣಿಗೊಬ್ಬ ಸಶಸ್ತ್ರ ಪೋಲೀಸನನ್ನೂ ಕೊಡಲಾಗುವದು. ಜನರೆಲ್ಲರೂ ಅವುಗಳ ಯೋಗ್ಯ ಉಪಯೋಗ ಮಾಡಿಕೊಳ್ಳಬೇಕು.


೧೦) ಆಹಾರ ಪರಿಸ್ಥಿತಿಯು ಹಿಡಿತದಲ್ಲಿ ಬರುವ ವರೆಗೆ, ಪ್ರಾಂತದಲ್ಲಿ ಎಲ್ಲ ಮಠಗಳ ಹಾಗೂ ಅನ್ನಛತ್ರಗಳ ಆಡಳಿತೆಯನ್ನು ಸರಕಾರವು ವಹಿಸಿಕೊಳ್ಳಬೇಕು.

೧೧) ಊಟಮಾಡಿದ ಎಲೆಯಲ್ಲಿ ಎಷ್ಟೋ ಜನರು ಅನ್ನವನ್ನು ಬಿಟ್ಟು ಹೋಗುತ್ತಾರೆ. ಅದರಿಂದ ಬಹಳ ಅನ್ನ ನಾಶವಾಗುತ್ತದೆ. ಅದಕ್ಕಾಗಿ, ಊಟ ಮಾಡಿದ ಅಥವಾ ಅಡಿಗೆ ಮಾಡಿದ ಪಾತ್ರೆಗಳನ್ನು ತಿಕ್ಕುವದಕ್ಕೆ ಮುಂಚೆ ಆ ಓಣಿಯ ಪೋಲೀಸನ ಅನುಮತಿಯನ್ನು ಪಡೆದುಕೊಳ್ಳಬೇಕು. ಮತ್ತು ಆ ಓಣಿಯ ಪೋಲೀಸರು ಯಾವಾಗಲೂ ಅನಿರೀಕ್ಷಿತ ತಪಾಸಣೆ ಮಾಡಿ ಈ ನಿಯಮದ ಉಲ್ಲಂಘನೆ ಮಾಡುವವರನ್ನು ಬೈಠಿಗೆಳೆದು ಅವರಿಗೆ ಯೋಗ್ಯ ಶಿಕ್ಷೆ ವಿಧಿಸಬೇಕು.

ಈ ರೀತಿಯ ಕೆಲವು ವ್ಯಾವಹಾರಿಕ ನಿರ್ಬಂಧಗಳನ್ನು ಜಾರಿಯಲ್ಲಿ ತಂದರೆ ಮಾತ್ರ ಸರಕಾರವು ನಮ್ಮನ್ನು ಈ ಆಹಾರದ ಬಿಕ್ಕಟ್ಟಿನಿಂದ ಪಾರು ಮಾಡಬಹುದು. ಈ ಸಾರೆಯ "ಲೆವ್ಹಿ" ನಿಯಮಗಳಲ್ಲಿ ಅನೇಕ ದೋಷಗಳಿದ್ದದ್ದರಿಂದ ಎಷ್ಟೋ ರೈತರು "ಲೆವ್ಹಿ" ಕೊಡದೆ ಉಳಿಯಬಹುದು. ಅದಲ್ಲದೆ ಕರ್ನಾಟಕದ ಕುಲಕರ್ಣಿಯರ ಇದೇ ಸಮಯಕ್ಕೆ ಸಂಪು ಹೂಡಿದ್ದರಿಂದ, ಈ ಸಾರೆ ಸರಕಾರವು ನಿರೀಕ್ಷಿಸಿದಷ್ಟು ಧಾನ್ಯ ವಸೂಲಿಯಾಗಲಿಕ್ಕಿಲ್ಲ. ಅದ್ದರಿಂದ ಸರಕಾರವು ಮೇಲಿನ ನನ್ನ ಸೂಚನೆಗಳನ್ನು ಯೋಗ್ಯ ರೀತಿಯಿಂದ ವಿಚಾರಮಾಡಿ ತಕ್ಕ ಕ್ರಮವನ್ನು ಕೈಕೊಳ್ಳುವದೆಂದು ನಂಬಿದ್ದೇನೆ.

ಫ್ಯಾಶನ್ ಬಹುಮಾನ

ಅಮೇರಿಕದಲ್ಲಿ ಮೊನ್ನೆ ಹ್ಯಾಟಿಕಾರ್ನಿ ಎಂಬವಳಿಗೆ ಫ್ಯಾಶನ್ನಿಗೆ ಬಹುಮಾನ ದೊರೆಕಿತು. ಆ ಬಹುಮಾನ [illegible]ದು ಮನೆಗೆ [illegible]ಗುವಾಗ ಆಕೆ ತನ್ನ ಗೆಳೆಯನ ಹತ್ತಿರ ಹೇಳಿದಳಂತೆ. ಇವರೆಲ್ಲ ಹುಚ್ಚರು; ಈ ಫ್ಯಾಶನ್ನಿನ ಬಟ್ಟೆಗಳನ್ನು ನಾನು ಎಷ್ಟೋ ಸಲ ಹಾಕಿಕೊಂಡಿದ್ದೆ. ನಮ್ಮ ಅಜ್ಜಿಯ ಕಾಲದಲ್ಲಿ ಅವಳು ಕೂಡ ಇದನ್ನು ಧರಿಸುತ್ತಿದ್ದಳು.



ಗೃಹೋದ್ಯಮ

ಗೆರಟೆಯ (ಹರಟೆ) ಆಭರಣಗಳು

ಲೇ- ಶ್ರೀ ಸಂಜೀವ ದೇವರಾವ ಕೇಳಕರ, ಗೋಕರ್ಣ

ನೀವು ಹಿಂದೆ ಹೇಳಿದಂತೆ ಗುಂಡಿಗಳನ್ನು ಮಾಡಿರಬಹುದು. ಅವುಗಳನ್ನು ಮಾಡಿದ್ದರಿಂದ ನಿಮಗೆ ಒಂದು ಬಗೆಯ ಉತ್ಸಾಹವೂ ಬಂದಿರಬಹುದು. ಹಿಂದೆ ಹೇಳಿರುವ ಉಪಕರಣಗಳ ಸಹಾಯದಿಂದಲೆ (ಅಂದರೆ ಸುತ್ತಿಗೆ ಆರ್‍ನೆ, ಚಾಕು, ತಾಮ್ರದ ತಂತಿ ಹಾಗೂ ಒಂದು ಮೊಳೆ) ನೀವು ಸುಂದರವಾದ ಕೊರಳಿನ ಸರಪಳಿ, ಗಡಿಯಾರದ ಸರಪಳಿ, ಕೈಗೆ ಹಾಕುವ ಸರಪಳಿ, ಬ್ರೋಚುಗಳು, ಕೂದಲಿನ ಕ್ಲಿಪ್ಪು (ಚಿತ್ರ ೫) ಮತ್ತು ಇನ್ನೂ ಇತರ ವಿವಿಧ ಉಪಯುಕ್ತ ವಸ್ತುಗಳನ್ನು ತಯಾರಿಸಬಹುದು.

ಕೊರಳಿನ, ಗಡಿಯಾರದ, ಕೈ ಸರಪಳಿಗಳನ್ನು ತಯಾರಿಸಲು, ಹಿಂದಿನ ಲೇಖದಲ್ಲಿ ಹೇಳಿದಂತೆ ನಿಮಗೆ ಸೇರುವಂಥ ಆಕಾರ ಮತ್ತು ಅಳತೆಗಳಿಗೆ ತಕ್ಕಂತೆ ಗೆರಟೆಯ ತುಂಡುಗಳನ್ನು ಕತ್ತರಿಸತಕ್ಕದ್ದು. (ಅರದಿಂದ ಅಥವಾ ಕರಗಸವಿದ್ದಲ್ಲಿ ಅದರಿಂದ). ಗೆರಟೆಯ ತುಂಡುಗಳು ಒಡೆಯುವ ಸಂಭವವಿರುವದರಿಂದ ಕೆಲವು ಹೆಚ್ಚು ತುಂಡುಗಳನ್ನು ಕತ್ತರಿಸಿದ ಪಕ್ಷದಲ್ಲಿ ನಿಮಗೆ ಆಗುವ ನಿರಾಶೆಯಿಂದ ದೂರಾಗುವಿರಿ. ಇದು ಆದ ಮೇಲೆ ಹಿಂದಿನ ಚಿತ್ರದಲ್ಲಿ ತೋರಿಸಿದಂತೆ (ಅಥವಾ ನಿಮಗೆ ಬೇಕಾದ ಸ್ಥಳದಲ್ಲಿ) ಚಾಕುಗಳಿಂದ (ಡ್ರಿಲ್, (Drill) ಇದ್ದ ಪಕ್ಷಕ್ಕೆ ಅತಿ ಸುಲಭದಿಂದ) ತೂತುಗಳನ್ನು ತೆಗೆಯತಕ್ಕದ್ದು. ನಂತರ ಉಪ್ಪಿನ ಕಾಗದಗಳಿಂದ (Sand paper, rough and fi[illegible]) [illegible] ವಸ್ತ್ರದ ಸಹಾಯದಿಂದ ಹೊಳಪು ಬರುವಂತೆ ಉಜ್ಜತಕ್ಕದ್ದು.

ಒಂದು ಮೊಳೆಯ ಸುತ್ತಲೂ ತಾಮ್ರದ ತಂತಿಯಿಂದ ಕೆಲವು ಸುತ್ತುಗಳನ್ನು ಸುತ್ತಿ ಸ್ಪ್ರಿಂಗಿನಂತೆ ಮಾಡಿ ಒಂದು ಪೂರ್ಣ ಸುತ್ತು ಬರುವಂತೆ ಕತ್ತರಿಸಿದರೆ ೧ ನೇ ಚಿತ್ರದಲ್ಲಿ ತೋರಿಸಿದಂತೆ ಉಂಗುರಗಳು ಸಿಗುವವು.

ನೀವು ವಿಚಾರಿಸಿದಂತೆ, ತಯಾರಿಸಿದ ಗೆರಟೆಯ ತುಂಡುಗಳನ್ನು ತೆಗೆದುಕೊಂಡು ಉಂಗುರದ ಬಾಯಿಯನ್ನು ಹರಮಾಡಿ ತೂತುಗಳಲ್ಲಿ ಸೇರಿಸಿ ಕೂಡಿಸತಕ್ಕದ್ದು. ಇದೇ ರೀತಿಯಿಂದ ಇನ್ನುಳಿದ ಗೆರಟೆಯ ತುಂಡುಗಳನ್ನು ಜೋಡಿಸತಕ್ಕದ್ದು. ಇದೋ ನಿಮ್ಮ ಸರಪಳಿಯು ತಯಾರಾಯಿತು. (ಯಾವದಾದರೂ ತುಂಡುಗಳನ್ನು ಬದಲಾಯಿಸುವ ಅವಶ್ಯಕತೆಯು ಕಂಡುಬಂದಲ್ಲಿ ಈಗಲೇ ಬದಲಾಯಿಸಿರಿ). ನಿಮಗೆ ಸರಿಯೆಂದು ತೋರಿದ ನಂತರ ಆ ಸರಪಳಿಯನ್ನು ಬೆಸಿಗೆ ಹಾಕುವವನ ಹತ್ತಿರ ಒಯ್ದು ಬೆಸಿಗೆಯನ್ನು ಹಾಕಿಕೊಳ್ಳಿರಿ. (ನೀವೇ ಬೆಸಿಗೆಯನ್ನು ಹಾಕಿದರೆ, ಅತಿ ಉತ್ತಮವೆನ್ನುವದರಲ್ಲಿ ಸಂಶಯವೆ?)

ಆ ಸರಪಳಿಯ ಮುಂಭಾಗವು ನಿಮಗೆ ತೋರುವಂತೆ, ಅದನ್ನು ನೆಲದ ಮೇಲಾಗಲಿ, ಮೇಜಿನ ಮೇಲಾಗಲಿ ಇಡತಕ್ಕದ್ದು. (ಅಂದರೆ ಸರಪಳಿಯ ಹಿಂಭಾಗ ನೆಲಕ್ಕೆ ಅಥವಾ ಮೇಜಿಗೆ ತಾಗುವಂತೆ.) ನಂತರ ಉಂಗುರಗಳ ನಷ್ಟೇ ತಿರುಗಿಸಿ, ಬೆಸಿಗೆಯ ಭಾಗವನ್ನು ಕೆಳಗೆ ತಂದು, ಸುತ್ತಿಗೆಯಿಂದ, ಮೆಲ್ಲಗಿನ ಏಟುಗಳನ್ನು ಕೊಟ್ಟು ಉಂಗುರಗಳನ್ನು ಚಪ್ಪಟೆಯಾಗಿ ಮಾಡಿದ ಪಕ್ಷದಲ್ಲಿ, ಉಂಗುರಗಳು ತಿರುಗದೇ ಇರುವದರಿಂದ, ಸರಪಳಿಯು ಚಂದ ಕಾಣುವದು.

ಕೊಂಡಿ ಇತ್ಯಾದಿ

[illegible]ದನವೆಂದರೆ, ಅಂಗಡಿಯಲ್ಲಿ ಸಿಗುವಂಥ ಕೊಂಡಿಗಳನ್ನು ನೀವು ತಯಾರಿಸಿದ ಸರಪಳಿಗೆ ಜೋಡಿಸತಕ್ಕದ್ದು.

ಗಡಿಯಾರದ ಸರಪಳಿಗಳನ್ನು ಕೂಡಿಸುವ ರೀತಿ ಹೀಗೆ-- ಸಾಧಾರಣವಾಗಿ ೩/೪ ಉದ್ದ ಮತ್ತು ನಿಮ್ಮ ಗಡಿಯಾರದ ಬ್ರಾಕೇಟಿನಷ್ಟು ಅಗಲವುಳ್ಳ ತಾಮ್ರದ ಎರಡು ತುಂಡುಗಳನ್ನು ತೆಗೆದುಕೊಂಡು, (ಬೇಕಾದ ಆಕೃತಿಯಲ್ಲಿ ತಕ್ಕಂತೆ) ಎರಡರಲ್ಲಿಯೂ ಒಂದೊಂದು ತೂತು ತೆಗೆದ ನಂತರ, ಮೊದಲು ಜೋಡಿಸಿದ ರೀತಿಯಿಂದ ಕೊಂಡಿಯನ್ನು ಸರಪಳಿಗೆ ಜೋಡಿಸಿರಿ. ತಾಮ್ರದ ತುಂಡುಗಳ ಇನ್ನೊಂದು ತುದಿಯನ್ನು ಬಗ್ಗಿಸತಕ್ಕದ್ದು. ಆಹಾ! ನಿಮ್ಮ ಗಡಿಯಾರದ ಸರಪಳಿಯೂ ಕೂಡ ತಯಾರಾಯಿತು.

ಹಿಂದೆ ಹೇಳಿದಂತೆ ಗೆರಟೆಯ ತುಂಡುಗಳ ಬದಲಾಗಿ ಕರೀಮರ[Ebony], ಸೀಸಮ [Rose wood,]ಗಂಧದ ಮರ ಇತ್ಯಾದಿ ಮರಗಳ ತುಂಡುಗಳನ್ನು ಉಪಯೋಗಿಸಲೂಬಹುದು. ಅದೂ ಅಲ್ಲದೆ ಹಲ್ಲು ತಿಕ್ಕುವ ಬ್ರಶ್ [Tooth brush] ಇದರ ಹಿಡಿಕೆಯಿಂದ ಅಥವಾ ಬಾಚಣಿಗೆಯ ಮೇಲ್ಭಾಗ (ಹಲ್ಲುಗಳಿಲ್ಲದಿರುವ)ದಿಂದಲೂ ಸುಂದರವಾದ ಆಭರಣದ ವಿವಿಧರೂಪದ ಮಣಿಗಳನ್ನು ತಯಾರಿಸಲೂಬಹುದು.

ಕಾನಡಾ ದೇಶವು ಈ ವರುಷ ೧೦೦ ರೇಲ್ವೆ ಇಂಜಿನ್ನುಗಳನ್ನು ಹಿಂದುಸ್ತಾನಕ್ಕೆ ನಿರ್ಯಾತ ಮಾಡುವದು. ಈ ಇಂಜಿನುಗಳು ಕಲಕತ್ತಾ ಮತ್ತು ಮುಂಬಯಿಗೆ ಕಳಿಸಲ್ಪಡುವವು.

ನಮ್ಮ ನೆರೆಯ ನೇಪಾಳಿಗಳು



ಷಳ್ಪ ಎಂಬ ಪ್ರದೇಶದ ಶರ್ಪಾಸ್ ಬಣದ ಜನರು

ನಾಡಿನ ಪ್ರಾಚೀನತೆ-ಆಡಳಿತೆಯ ಮಧ್ಯಯುಗೀನತೆ— ಗುರ್ಖರ ಪ್ರಾಮುಖ್ಯ— ಭಾರತದೊಡನೆ ಮೈತ್ರಿ— ಬಾಲ ಲಾಮನ ಅಬಾಲಚರಿತ— ಪರ್ವತ ಸೌಂದರ್ಯ

ಗುಡ್ಡಗಾಡು ಪ್ರದೇಶದ ಗುರ್ಖರ ನಾಡಾದ ನೇಪಾಳ ಬಹಳ ಪ್ರಾಚೀನ ಇತಿಹಾಸವುಳ್ಳದ್ದು. ಪಾರ್ವತೀಯರಾದ ಆ ಜನರು ಹೆಚ್ಚಾಗಿ ಸೈನಿಕವೃತ್ತಿಯಲ್ಲಿ ಹೆಸರಾದವರು. ಪರ್ವತಾವಳಿಗಳ ರಕ್ಷಣಾ ದಕ್ಷತೆಯ ದೆಸೆಯಿಂದ ಅವರು ಅನೇಕ ವರ್ಷಗಳಿಂದ ಸ್ವತಂತ್ರರಾಗಿ ಬಾಳುತ್ತ ಬಂದಿದ್ದಾರೆ. ಕೃಷಿ. ಕೈಗಾರಿಕೆಗಳಲ್ಲಿ, ನಾಡು ಹಿಂದುಳಿದಿದ್ದು, ಈಗೀಗ ಅವುಗಳ ಸುಧಾರಣೆಗೆ ಪ್ರಯತ್ನ ಮಾಡಲಾಗುತ್ತಿದೆ. ಭಾರತದ ಸಮರನೈತಿಕ ದೃಷ್ಟಿಯಿಂದ ನೇಪಾಳಕ್ಕೆ ಬಹಳ ಮಹತ್ವವಿದೆ.

ನೇಪಾಳವು ಪ್ರಾಚೀನ ವಿದೇಹವೆಂದು ಪಂಡಿತರೆನ್ನುತ್ತಾರೆ. ವಿದೇಹದ ಪ್ರಸಿದ್ಧಿ ಸ್ಪಷ್ಟವೇ ಇದೆ. ಭಾರತೀಯ ಮಹಿಳೆಯರಿಗ ಆದರ್ಶಳೆನಿಸಿದ ಸೀತೆ ವಿದೇಹದ ಒಕ್ಕಲಿಗ ಅರಸನಾದ ತತ್ವಜ್ಞಾನಿ ಜನಕನ ಮಗಳಲ್ಲವೆ? ಭಾರತದ ಒಂದು ಭಾಗವಾಗಿದ್ದು, ಇಲ್ಲಿಯ ಸುಪ್ರಸಿದ್ಧ ದೊರೆ ರಾಮಚಂದ್ರನೊಡನೆ ನೆಂಟಸ್ತಿಕೆ ಬೆಳೆಸಿದ ವಿದೇಹವಿಂದು ಭಾರತದ ಕ್ಷೇತ್ರದೊಳಗೆ ಬರದೆ ನೆರೆಯ ರಾಷ್ಟ್ರವಾಗಿ ಉಳಿದಿದೆ. ಬ್ರಿಟಿಶರು ಭಾರತದ ಎಲ್ಲ ಅರಸರನ್ನೂ ಪದಾಕ್ರಾಂತರನ್ನಾಗಿ ಮಾಡಿದರೂ ಹಿಮಾಲಯದ ಆಶ್ರಯದಲ್ಲಿರುವ ನೇಪಾಳವನ್ನು ಸ್ವಾಧೀನಪಡಿಸಿಕೊಳ್ಳಲಾರದಾದರು. ಆದರಿಂದ ಆ ದೇಶ ಇಂದಿಗೂ ಸ್ವತಂತ್ರ ರಾಜ್ಯವಾಗಿ ಉಳಿದಿದೆ.


ಸರಕಾರ

ನೇಪಾಳಕ್ಕೆ ಉತ್ತರದಲ್ಲಿ ಟಿಬೆಟ್, ಪೂರ್ವದಲ್ಲಿ ಸಿಕ್ಕಿಂ ಮತ್ತು ದಕ್ಷಿಣದಲ್ಲಿ ಭಾರತ ಇವು ಮೇರೆಗಳಾಗಿವೆ. ಮಹಾರಾಜಾಧಿರಾಜ ತ್ರಿಭುವನವೀರವಿಕ್ರಮ ಜಂಗ್ ಬಹಾದೂರ್ ಶಾ ಬಹಾದೂರ್ ಶಂಶೇರ್ ಜಂಗ್ ಅಲ್ಲಿಯ ಮಹಾರಾಜರು. ನೇಪಾಳೀ ಸರಕಾರವು ಶ್ರೀಮಂತರ ಸುಧಾರಿಸಿದ ಮಾದರಿಯ ಆಳಿಕೆಗೊಳಪಟ್ಟದ್ದು. ಘಟನೆಯಲ್ಲಿ ಅದು ಸೈನಿಕ ಪದ್ಧತಿಗೆ ಸೇರಿದ್ದು. ಎಲ್ಲ ಅಧಿಕಾರವೂ ಮುಖ್ಯಮಂತ್ರಿಯ ಕೈಯಲ್ಲಿದೆ ಅರಸೊತ್ತಿಗೆಯಂತೆ ಮುಖ್ಯಮಂತ್ರಿಪದವಾದರೂ ಆನುವಂಶಿಕವೇ ಇದೆ. ಮುಖ್ಯಮಂತ್ರಿಯಾಗುವವನು ಯಾವಾಗಲೂ ಅರಸುಮನೆತನಕ್ಕೆ ಸೇರಿದವನಿರಬೇಕು ಮತ್ತು ವಿಶೇಷ ನಿಯಮದ ಅನುಸಾರ ಆ ಪದಕ್ಕೆ ತಕ್ಕ ರಾಜವಂಶೀಯನನ್ನು ಆರಿಸಲಾಗುತ್ತದೆ. ಮುಖ್ಯಮಂತ್ರಿಪದದಲ್ಲಿ ಈಗ ಮಹಾರಾಜ ಪದ್ಮ ಶಂಶೇರ್ ಜಂಗ್ ಬಹಾದೂರ್ ರಾಣಾ ಎಂಬವನಿದ್ದಾನೆ. ಅವನೇ ರಾಜ್ಯದ ಮುಖ್ಯಸೇನಾಪತಿ. ರಾಜನೂ ಮಂತ್ರಿಯೂ ಹಿಂದೂ ರಾಜಪುತ್ರ ಕುಲದವರು.

ಮೂಲ ನಿವಾಸಿಗಳು ಹಿಂದು-ಮಂಗೋಲಿಯನ್ನರಿಂದ ಹುಟ್ಟಿದ ಮಿಶ್ರ ಜಾತಿಯವರು. ಮೊದಲು ಅವರು ಪಾಳೆಯಗಾರರಾಗಿ ದೇಶದ ಭಾಗಗಳನ್ನು ಆಳುತ್ತಿದ್ದರು ೧೭೬೮ ರಲ್ಲಿ ಅವರಲ್ಲಿ ಗುರ್ಖರೆಂಬವರು ಬಹಳ ಪ್ರಾಮುಖ್ಯಕ್ಕೆ ಬಂದು, ಈಗ ಆ ಹೆಸರು ಎಲ್ಲರಿಗೂ ಅನ್ವಯಿಸಲಾಗಿದೆ. ಇವರಲ್ಲದೆ ಅಲ್ಲಿ ತಾರ್ತರ, ಮಾಗರ, ಗುರುಂಗ ಮತ್ತು ಭೋಲೆಯ ಕುಲದ ನಿವಾಸಿಗಳಿದ್ದಾರೆ.

ಭಾರತದೊಡನೆ ಮಿತ್ರತ್ವ

೧೮೦೧ ರಲ್ಲಿ ಭಾರತಕ್ಕೂ ನೇಪಾಳಕ್ಕೂ ನಡುವೆ ಒಂದು ವಾಣಿಜ್ಯಸಂಧಿಯಾಯಿತು. ರಾಜಧಾನಿಯಾದ ಕಾಟಮಾಂಡುವಿನಲ್ಲಿ ಒಬ್ಬ ಬ್ರಿಟಿಶ್ ರೆಸಿಡೆಂಟನನ್ನು ನಿಯಮಿಸಲಾಯಿತು. ಆದರೆ ಎರಡೇ ವರ್ಷಗಳಲ್ಲಿ ಅವನನ್ನು ಹಿಂಕರೆಯಲಾಯಿತು. ೧೮೧೪ ರಲ್ಲಿ ಭಾರತಕ್ಕೂ ನೇಪಾಳಕ್ಕೂ ಘರ್ಷಣ ನಡೆದು ಮರುವರುಷ ಒಂದು ಒಪ್ಪಂದವಾಯಿತು. ಅಂದಿನಿಂದ ಈ ವರೆಗೆ ನೇಪಾಳವು ಭಾರತಕ್ಕೆ ಮಿತ್ರನಾಗಿ ಉಳಿದಿದೆ- ಟಿಬೆಟ್ಟಿನೊಡನೆಯೂ ಇದೇ ಪ್ರಕಾರ ೧೮೫೬ ರಲ್ಲಿ ಘರ್ಷಣೆಯುಂಟಾಗಿ ಬಳಿಕ ಸ್ನೇಹ ಸಂಬಂಧ ಬೆಳೆದು ಪುನಃ ವಾಣಿಜ್ಯ ವ್ಯವಹಾರಗಳು ಯಥಾವತ್ತಾಗಿ ಬೆಳೆಯುತ್ತ ಬಂದವು. ೧೯೨೩ ರ ಒಪ್ಪಂದ ಹಿಂದಿನ ಒಪ್ಪಂದಗಳನ್ನು ಸಮರ್ಥಿಸಿ ಕೊನೆಯದಾಗಿ ಭಾರತ ಮತ್ತು ನೇಪಾಳಗಳ ಪರಸ್ಪರ ಸ್ವಾತಂತ್ರ್ಯವನ್ನು ಮನ್ನಿಸಿತು.



ತ್ಯಾಂಗ್‌ಬೋಚೆಯ ಬೌದ್ಧ ವಿಹಾರದಲ್ಲಿ ನಿಂತುಕೊಂಡರೆ ಕಾಣಿಸುವ ಹಿಮಾಚ್ಛಾದಿತ ಧವಳ ಶೃಂಗಗಳು

ನೇಪಾಳದ ವಿಸ್ತಾರ ೫೪ ಸಾವಿರ ಚದುರ ಮೈಲು. ಜನಸಂಖ್ಯೆ ೬೦ ಲಕ್ಷ. ಒಟ್ಟು ಆದಾಯ ೧½ ಕೋಟಿ ರೂಪಾಯಿ ರಾಜಧಾನಿಯಾದ ಕಾಟಮಾಂಡವಿನಲ್ಲಿ ಸುಮಾರು ೧೦೮೮೦೫ ಜನರು ವಾಸವಾಗಿದ್ದಾರೆ. ಬಹುಸಂಖ್ಯರು ಹಿಂದು-ಸನಾತನಿಗಳು. ಹಿಂದುಧರ್ಮ ಪ್ರಾಚೀನ ಬೌದ್ಧ ಧರ್ಮದ ಮೇಲೆ ಕ್ರಮೇಣವಾದರೂ ಪ್ರಬಲವಾದ ವರ್ಚಸ್ಸನ್ನು ಬೀರಿ ಅದು ಮಸುಳುವಂತೆ ಮಾಡಿದೆ. ವಿದ್ಯಾಪ್ರಸಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದೆ. ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರಲು ಆಲೋಚಿಸಲಾಗುತ್ತಿದೆ. ನೇಪಾಳೀ ಸೈನ್ಯದಲ್ಲಿ ೪೫ ಸಾವಿರ ಯೋಧರಿದ್ದಾರೆ. ಅವರಲ್ಲಿ ಬಹುಸಂಖ್ಯರು ಕಾಲಾಳುಗಳು. ಅವರ ಶಸ್ತ್ರಬಲ ಸಾಮಾನ್ಯ ರೀತಿಯದಾಗಿದೆ.

ಆಯಾತ ನಿರ್ಯಾತಗಳು

ದನಕರುಗಳು, ಚರ್ಮ, ಅಫೀಮು ಮತ್ತು ಇತರ ಮದ್ದುಗಳು, ಅಗರು,ಅಂಟು, ಬಣ್ಣ, ಸಣಬು, ಗೋದಿ, ಜೋಳ, ಅಕ್ಕಿ ಮತ್ತು ಇತರ ಕಾಳುಗಳು, ತುಪ್ಪ, ಎಣ್ಣೆಯ ಕಾಳು, ಮಸಾಲೆ, ಹೊಗೆಸೊಪ್ಪು ಮತ್ತು ಕಟ್ಟಿಗೆ (ನಾಟ) ಇವು ನೇಪಾಳ ಹೊರಗೆ ಕಳಿಸುವ ಪ್ರಸಿದ್ಧ ಪದಾರ್ಥಗಳು. ಆಡು, ಕುರಿ, ದನಕರು, ಉಪ್ಪು ಮಸಾಲೆ, ಸಕ್ಕರೆ, ಹೊಗೆಸೊಪ್ಪು, ಮದ್ದು, ಪೆಟ್ರೋಲ್, ಚರ್ಮ, ಹಿತ್ತಾಳೆ, ಕಬ್ಬಿಣ, ತಾಮ್ರದ ಸಾಮಾನು, ಪ್ರಸಿದ್ಧ ಹತ್ತಿ, ನೂಲು, ಹುರಿ, ರೇಶಿಮೆ, ಟಾಕಿ ಜವಳಿ ಇವು ಆಯಾತದ ಪದಾರ್ಥಗಳು

ಪೃಥ್ವಿಯ ಮಾನದಂಡವೆಂದು ಕಾಳಿದಾಸ ವರ್ಣಿಸಿದ ಧವಳಭವ್ಯ ಉನ್ನತ ಹಿಮಾಲಯ ಪರ್ವತದ ತಪ್ಪಲಿನಲ್ಲಿರುವ ಈ ನಾಡು ಬಹಳ ರಮ್ಯವಾದ ಪ್ರದೇಶ. ಹಿಮಾಲಯದ ಯಾತ್ರಿಕರು ಇಲ್ಲಿಗೆ ಸದಾ ಬರುತ್ತಿರುತ್ತಾರೆ ಇಲ್ಲಿ ಸಮುದ್ರ ಮಟ್ಟದಿಂದ ೧೨॥ ಸಾವಿರ ಅಡಿಗಳ ಎತ್ತರದಲ್ಲಿ ಜೆಮಿಂಗ್ ಗುಂಫ ಎಂಬ ಸ್ಥಳದಲ್ಲಿ ಒಂದು ಬೌದ್ಧ ವಿಹಾರವಿದೆ ಅದರಲ್ಲಿ ಈಗ ಲಾಮನ ಅವತಾರ ಎನಿಸಿದ ೯ ವರ್ಷ ವಯಸ್ಸಿನ ಒಬ್ಬ ಹುಡುಗ ಮಠಾಧಿಪತ್ಯವನ್ನು ನಿರ್ವಹಿಸುತ್ತಿದ್ದಾನೆ ಆ ವಿಹಾರದಲ್ಲಿ ೨೦೦ ಜನ ಶಿಷ್ಯ ಶಿಷ್ಯೆಯರಿದ್ದಾರೆ. ಆ ಬಾಲ ಲಾಮನು ಭವಿಷ್ಯ ಹೇಳುವುದರಲ್ಲಿ ಪ್ರಸಿದ್ಧನು. ಅವನು ಹೇಳಿದ ಭವಿಷ್ಯಗಳಲ್ಲಿ ಹೈದರಾಬಾದಿನ ಸ್ಥಿತಿಗತಿಗೆ ಸಂಬಂಧಿಸಿದ್ದು ನಿಜವಾಗಿ ಪರಿಣಮಿಸಿದೆ. ಈ ಚಂದ್ರಹಾಸವದನನೂ ಬಾಲನಾದರೂ ಅಬಾಲಬುದ್ಧಿಯುವನೂ ಆಗಿರುವ ಯತಿಯನ್ನು ಕಂಡು ಯಾರಾದರೂ ನಿರ್ಮಲಾನಂದದಿಂದ ಕ್ಷಣ ಕಾಲ ಹೂವಾಗದಿರರು. ಮತ್ತೊಂದು ವಿಹಾರ ತ್ಯಾಂಗ್ ಬೋಚೆಯದು. ಅಲ್ಲಿಂದ ಭವ್ಯವಾದ ಅನೇಕಾನೇಕ ಸ್ಫಟಿಕಧವಳ ಪರ್ವತಶಿಖರಗಳನ್ನು ನೋಡಬಹುದು. ಆ ವಿಹಾರದಲ್ಲಿ 'ಗೌರೀಶಂಕರ' ಶಿಖರದ ಅಧಿದೇವತೆಯದೊಂದು ಟಿಬೆಟನ್ ಮೂರ್ತಿಯಿದೆ. ಅದು ಬಹಳ ಸುಂದರವಾಗಿದೆ. ಅದಕ್ಕೂ ಹಿಂದು ದೇವತೆಯಾದ ಶಿವನ ಮೂರ್ತಿಗೂ ಬಹುಮಟ್ಟಿಗೆ ಸಾದೃಶ್ಯವಿದೆ.

—ಅರ್ಜುನ



೮ ವರ್ಷದ ವಯಸ್ಸಿನ ಅಬಾಲತೇಜಸ್ವಿಯಾದ ಬಾಲ ಲಾಮ

ನಗೆಯ ನೊರೆ

ಭವಿಷ್ಯಾಟಂಬಾಂಬು

"ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅಪೇಕ್ಷಿಸಿದಷ್ಟಿಲ್ಲದಿದ್ದರೂ ಪ್ರತಿಷ್ಠೆ ಲಾಭಗಳು ಯಥೇಷ್ಟವಾಗಿ ಸಿಗುವವು."(ಒಂದು ನಿಯತಕಾಲಿಕೆಯಲ್ಲಿಯ ಭವಿಷ್ಯಾಟಂಬಾಂಬು).

ಇಂತಹ ಭವಿಷ್ಯವು ಎಂದಾದರೂ ಹುಸಿಯಾಗುವದುಂಟೆ?

× × ×

ಅಪ್ಪ-ಮಗ

"ಏನೋ, ಕತ್ತೆಮಗನೇ, ಕಣ್ಣಿಗೆ ಕಾಣ್ಸೋದಿಲ್ಲೇನೋ?" ಒಬ್ಬದಾರಿಹೋಕ ಗೃಹಸ್ಥ ಡಿಕ್ಕಿ ಹೊಡೆದ ಒಬ್ಬ ಕೂಲಿಯವನಿಗೆ.

"ಯೆಪ್ಪಾ, ಕಾಣ್ಸ್ಯತ್ರಿ!"

× × ×

"ಕೇಳಿದ್ರ್ಯಾ, ನಮ್ಮ ರಾಂಭಟ್ರ ವರ್ತಮಾನ?"

"ಏನು, ಏನಾಯ್ತು?"

"ನಿನ್ನೆ ಅವರು ಸ್ವರ್ಗಸೀಮೆಗೆ ಹೋದರು!"

"ಅಯ್ಯೋ!"

"ಸಿನೆಮಾ ಅಂದ್ರೆ ಕಿಡಿ ಕಿಡಿಯಾಗುವವರು-ತಾವೇ ಹೋದ್ರಲ್ಲಾಂತ!"

× × ×

ಹಿಂದಿನ ತಿಂಗಳ ಬಾಕಿಯನ್ನೆಲ್ಲಾ ಚುಕ್ತಾ ಮಾಡಿದ ದೊಡ್ಡ ಗಿರಾಕಿಗೆ ಮನಸೋತು ಕಿರಾಣಿಯವನು ಒಂದು ಸಿಂಗಲ್ ಕಷಾಯ ತರಿಸಿಕೊಟ್ಟ.

ಗಿರಾಕಿಯು ಕುಡಿದಾದ ಮೇಲೆ,

"ಹ್ಯಾಗಿದೆ, ಸ್ವಾಮಿ?" ಎಂತ ಕೇಳಿದ.

"ಒಳ್ಳೇ ಕಷಾಯ ಕೊಟ್ರಿ!" ಗಿರಾಕಿ ಸೊಟ್ಟಮೋರೆ ಮಾಡಿ ತನ್ನ ಜೇಬು ತಟ್ಟಿ ಅಂದ.

--ಸಾಬಣ್ಣ

ಬಿಳಿಬೆಕ್ಕುಗಳ ಪ್ರತಾಪ

ಎರಡನೆಯ ಮಹಾಯುದ್ಧದಲ್ಲಿ ಮಿತ್ರರು ಬಿಳಿ ಬೆಕ್ಕುಗಳಿಲ್ಲದಿದ್ದರೆ ಬ್ರಹ್ಮದೇಶವನ್ನು ಕಳೆದುಕೊಳ್ಳುತ್ತಿದ್ದರು ಎಂಬ ಮಾತು ಸಂಬಂಧವಾಗಿಲ್ಲ. ಆದರೆ ಯುದ್ಧಕಾಲದಲ್ಲಿ ಸ್ಥಳೀಯ ಮೋಟಾರು ಸಾರಥಿಗಳು ಬಿಳಿಯ ಬೆಕ್ಕುಗಳ ಚಿತ್ರ ತಗಲು ಹಾಕಿದ ಸಂಚಾರಿ ಅಂಕುಡೊಂಕಾದ ರಸ್ತೆಗಳಲ್ಲಿ ಮೋಟಾರು ನಡೆಸಲು ಒಪ್ಪಿದರು. ಅನೇಕರು ಬ್ರಹ್ಮದೇಶದ ಹಳೆಯ ಕತೆಯಿಂದ ಅರಿತರು, ಬಿಳಿಯ ಬೆಕ್ಕುಗಳು ಮನುಷ್ಯರಿಗೆ ಸಮಾನವಾದವು. ಪುನರ್ಜನ್ಮ ಮಾಲೆಯಲ್ಲಿ ಅವಕ್ಕೆ ಉನ್ನತ ಸ್ಥಾನವಿದೆ ಮತ್ತು ಅವೇ ಮೇರೆಗೆ ಅವು ನೇರವಾಗಿ ಬುದ್ಧಪಾದಾಂಬುಜವನ್ನು ಕೊನೆಯಲ್ಲಿ ಮುಟ್ಟುವವು! ಆದುದರಿಂದ ಅವು ಯಾವಾಗಲೂ ಶುಭೋದಯಕ್ಕೆ ಕಾರಣವಾಗಿವೆ!

ಭಾರತ ಸರಕಾರಕ್ಕೆ

೧೯೪೯-೫೦ ರಲ್ಲಿ ೧೫.೭೯ ಕೋಟಿ ರೂ. ಕೊರತೆ

ತುಂಬಿಕೊಳ್ಳಲು ಬಟ್ಟೆ, ಪೆಟ್ರೋಲ, ಸಕ್ಕರೆ ಕರಗಳ ಹೆಚ್ಚಳ

ಅಂಚೆ ಪಾಕೀಟಿಗೆ ೨ ಆಣೆ, ಕಾರ್ಡಿಗೆ ೩ ಬಿಲ್ಲಿ

ಡಾ. ಜಾನ ಮತ್ತಾಯರ ಮುಂಗಡಪತ್ರ

ತಾ. ೨೮ ಕ್ಕೆ ಹಿರಿಯೋಲಗದಲ್ಲಿ ಹಣಕಾಸಿನ ಮಂತ್ರಿ ಡಾ. ಜಾನ್ ಮ.ತ್ತಾಯ.ರು ಮಂಡಿಸಿದ ಮುಂಗಡ ಪತ್ರ ಉದ್ದಿಮೆಗಾರ—ಬಂಡವಳಗಾರರ ಅಭೀಷ್ಟವನ್ನು ಸ್ವಲ್ಪ ಮಟ್ಟಿಗಾದರೂ ಸಲ್ಲಿಸಿತೆನ್ನಲಡ್ಡಿಯಿಲ್ಲ. ಆದಾಯ ಕರದಲ್ಲಿ ಕೊಡಲಾದ ಸವಲತ್ತು, ಬಂಡವಳ ಲಾಭದ ಕರದ ರದ್ದತಿಗಳು ಬಂಡವಳಗಾರರ ಭಯವನ್ನು ನೀಗಿಸಿ ಅವರನ್ನು ಉತ್ಪಾದಕ ಚಟುವಟಿಕೆಗಳಲ್ಲಿ ಪ್ರೋತ್ಸಾಹಿಸಬಹುದೆಂಬ ಆಶೆಯಿಂದಲೇ ಯೋಜಿಸಲ್ಪಟ್ಟಿವೆ. ಮತ್ತಾವುದರಿಂದಲ್ಲದಿದ್ದರೂ ಬಟ್ಟೆ ಸುಂಕ ಮತ್ತು ಟಪಾಲು ದರಗಳ ಹೆಚ್ಚಳದ ಫಲವಾಗಿಯಾದರೂ ಬಡವನಿಗೆ ಹೊಸ ಮುಂಗಡ ಪತ್ರದ ಬಿಸಿ ಹತ್ತುವದು ಖಂಡಿತ.

೧೯೪೯—೫೦ ರ ಮುಂಗಡ ಪತ್ರ ೧೪ ಕೋಟಿ ೭೯ ಲಕ್ಷ ರೂಪಾಯಿ ಕೊರತೆಯನ್ನು ತೋರಿಸುತ್ತದೆ. ಆದರೂ ಮೇಲಿನ ಕರ ಸವಲತ್ತುಗಳನ್ನು ಕೊಡಲು ಅರ್ಥ ಮಂತ್ರಿಗಳು ಮುಂದಾಗಿದ್ದಾರೆ. ಹೊಸ ಪ್ರತ್ಯಕ್ಷಾಪ್ರತ್ಯಕ್ಷ ಕರಗಳಿಂದ ಅದನ್ನು ತುಂಬಿಕೊಳ್ಳಬೇಕೆಂದು ಅವರ ಸೂಚನೆಯಿದೆ.

ಈಗಿರುವ ಕರಗಳ ಮೇಲಿಂದ ಮುಂದಿನ ವರ್ಷ (೧೯೪೯—೫೦) ೩೦೭.೬೪ ಕೋಟಿ ರೂಪಾಯಿ ಉತ್ಪನ್ನ, ೩೨೨.೫೩ ಕೋಟಿ ವೆಚ್ಚ ಬರುವದು. ಹೊಸ ಕರಗಳಿಗೆ ಸಭೆ ಸಮ್ಮತಿಸಿದರೆ, ಆದಾಯ ೩೨೨.೯೮ ಕೋಟಿಗೇರಿ ಒಟ್ಟು ೪೫ ಲಕ್ಷ ರೂ. ಉಳಿತಾಯವಾಗುವದು.

೧೯೪೮—೪೯ ರ ತಿದ್ದಿದ ಅಂದಾಜು

ನಡೆಯುತಿರುವ ವರ್ಷದ ಆಯವ್ಯಯಗಳೆರಡೂ ಮುಂಗಡ ಪತ್ರದ ಅಂದಾಜಿಗಿಂತ ಬಹಳ ವ್ಯತ್ಯಾಸಗೊಂಡ ಅಂಶವನ್ನು ಅರ್ಥ ಮಂತ್ರಿಗಳು ಹೊರಗೆಡಹಿದರು. ಆಯ ೨೫೫.೨೮ ಕೋಟಿ ಮತ್ತು ವ್ಯಯವೂ ಅಷ್ಟೆ ಎಂದು ಅಂದಾಜು ಮಾಡಲಾಗಿತ್ತು. ಆದರೆ ಅವೆರಡೂ ಕ್ರಮವಾಗಿ ೩೩೮.೩೨ ಕೋಟಿ ಮತ್ತು ೩೩೯.೮೭ ಕೋಟಿಯಾಗಬಹುದೆಂದು ಹತ್ತು ತಿಂಗಳ ಅನುಭವದಿಂದ ಕಂಡುಬಂದಿದೆ.

ಕೊರತೆಯ ಮುಂಗಡ ಪತ್ರಿಕೆಯನ್ನು ಹಾಗೆಯೇ ಬಿಡುವದು ಇಂದಿನ ಅತಿಪ್ರಸರಣ ಪರಿಸ್ಥಿತಿಯಲ್ಲಿ ಯೋಗ್ಯವೆನಿಸದು. ಅದರಿಂದ ಕೆಲವು ಕರಗಳನ್ನು ಏರಿಸುವದಲ್ಲದೆ ಹಿಂದಿನ ಅನುಭವದಿಂದ ಕೆಲ ಕರಗಳಲ್ಲಿ ಬದಲಾವಣೆ ಮಾಡಬೇಕೆಂದು ಅರ್ಥ ಮಂತ್ರಿಗಳು ಹೇಳಿದರು. ಅವರು ಸೂಚಿಸಿದ ಬದಲಾವಣೆಗಳನ್ನು ಹೀಗೆ ಸಂಗ್ರಹಿಸಬಹುದು:

ಕರಗಳ ಇಳಿಕೆ

● ಮೂಲ ಬಂಡವಳ ಲಾಭದ ಮೇಲಿನ ಕರವನ್ನು ರದ್ದುಗೊಳಿಸುವದು. ಇದರಿಂದಾಗುವ ಹಾನಿ ೧ ಕೋಟಿ ರೂಪಾಯಿ.

● ಪಂಚ್ಚಸಾವಿರ ರೂಪಾಯಿವರೆಗಿನ ಉತ್ಪನ್ನದ ಕರವನ್ನು ಒಂದು ಬಿಲ್ಲೆ ಇಳಿಸುವದು. ಅಂದರೆ ಮೊದಲನೆಯ ಶ್ರೇಣಿ (ಸ್ಲ್ಯಾಬ್) ಯ ಕರವನ್ನು ರೂಪಾಯಿಗೆ ಒಂದಾಣೆಯಿಂದ ೩ ಬಿಲ್ಲೆಗೂ ಎರಡನೆ ಶ್ರೇಣಿಯದನ್ನು ರೂಪಾಯಿಗೆ ಎರಡಾಣೆಯಿಂದ ೭ ದುಡ್ಡು ಮುಕ್ಕಾಲಾಣೆಗೂ ಇಳಿಸುವದು. ಇದರಿಂದಾಗುವ ಹಾನಿ ರೂ ೩ ಕೋಟಿ.

● ಅರ್ಜಿತ (ದುಡಿದುಗಳಿಸಿದ) ಅನಾರ್ಜಿತ (ದುಡಿಯದೆ ಅಂದರೆ ಬಂಡವಳ ಮೊದಲಾದವುಗಳಿಂದ ಗಳಿಸಿದ) ಉತ್ಪನ್ನದ ಮೇಲಿನ ಆದಾಯಕರ ಮತ್ತು ಅಧಿಕಕರದ ಮೇಲೆ ಸವಲತ್ತು ಕೊಡುವದು. ಅಂದರೆ ೧೫ ಲಕ್ಷ ಮೇಲ್ಪಟ್ಟ ಅನಾರ್ಜಿತ ಉತ್ಪನ್ನದ ಮೇಲಿನ ಕರವನ್ನು ಅರ್ಧಾಣೆ ಇಳಿಸಿ ರೂಪಾಯಿಗೆ ೧೦ ಆಣೆಗೂ ಅರ್ಜಿತ ಉತ್ಪನ್ನದ ಮೇಲಿನ ಕರವನ್ನು ೦—೧—೬ ಇಳಿಸಿ ಇನ್‌ಕಂ ಮತ್ತು ಸೂಪರ್‌ಟ್ಯಾಕ್ಸ್ ಸೇರಿ ೯೪ ಆಣೆಗೆ ಇಳಿಸುವದು ಇದರಿಂದಾಗುವ ಹಾನಿ ೬ ಕೋಟಿ. ೧೦ ಲಕ್ಷ. ಅದರಲ್ಲಿ ೩ ಕೋಟಿ ಪ್ರಾಂತಗಳ ಪಾಲಿನದಿರುವದರಿಂದ ನಿಜ್ಜ ಹಾನಿ ೩ ಕೋಟಿ ೧೦ ಲಕ್ಷ.

● ನಿರ್ಯಾತಕ್ಕೆ ಉತ್ತೇಜನ ಕೊಡಲು ಎಣ್ಣೆ ಕಾಳಿನ ನಿರ್ಯಾತ ಸುಂಕವನ್ನು ರದ್ದುಗೊಳಿಸುವದು. ಇದರಿಂದಾಗುವ ಹಾನಿ ರೂ. ೧ ಕೋಟಿ ೫೦ ಲಕ್ಷ.

● ವಿಮಾನದ ಎಣ್ಣೆಯ ಮೇಲಿನ ಕರವನ್ನು ಅರ್ಧಕ್ಕಿಳಿಸುವದು. ಹಾನಿ ೪೦ ಲಕ್ಷ.

ಕರಗಳ ಏರಿಕೆ

● ವಿಮಾನ ಟಪಾಲಿನ ಮೇಲಿನ ಸರಚಾರ್ಜನ್ನು ತೆಗೆದು ಹಾಕಿ ಅಂಚೆ ಪಾಕಿಟಿನ ಬೆಲೆಯನ್ನು ೦-೧-೬ ಯಿಂದ ೨ ಆಣೆಗೂ ಕಾರ್ಡಿನ ಬೆಲೆಯನ್ನು ೦-೦-೬ ಯಿಂದ ೦-೦-೯ ಗೂ ಏರಿಸುವದು. ಇದರಿಂದಾಗುವ ಹೆಚ್ಚಿನ ಆದಾಯ ೨ ಕೋಟಿ ೪೪ ಲಕ್ಷ.

● ಕೃತ್ರಿಮ ರೇಶ್ಮೆ, ನೂಲು, ದಾರ, ಮಣ್ಣಿನ ಪಾತ್ರೆಗಳು, ವೃತ್ತಪತ್ರ ಕಾಗದವಲ್ಲದ ಇತರ ಕಾಗದಗಳು, ಕಾಜಿನ ಸಾಮುಗ್ರಿಗಳು, ಲೋಹದ ಆಸನಗಳು, ಕಟ್ಟಿಗೆ ಮೊದಲಾದವುಗಳ ಸುಂಕವನ್ನೇರಿಸುವದು.

● ಸಕ್ಕರೆಯ ಮೇಲಿನ ಅಬಕಾರಿ ಸುಂಕವನ್ನು ಹಂಡ್ರಡವೇಟಗೆ ೩ ರೂ. ಯಿಂದ ೩-೧೨-೦ ಗೇರಿಸುವದು. ಇದರಿಂದ ಹೆಚ್ಚಿನ ಆದಾಯ ೧ ಕೋಟಿ ೫೦ ಲಕ್ಷ.

● ಅಡಿಕೆಯ ಆಯಾತ ಸುಂಕವನ್ನು ಪೌಂಡಿಗೆ ೫ ಆಣೆಯಿಂದ ೭॥ ಆಣೆಗೇರಿಸುವದು. ಇದರಿಂದ ಆದಾಯ ೧ ಕೋಟಿ.

● ಪೆಟ್ರೋಲ ಮೊದಲಾದ ಮೋಟರೆಣ್ಣೆಗಳ ಸುಂಕವನ್ನು ಗ್ಯಾಲನ್ನಿಗೆ ೧೨ ಆಣೆಯಿಂದ ೧೫ ಆಣೆಗೇರಿಸುವದು.

● ಗಿರಣಿಯ ಜಿನುಗು ಬಟ್ಟೆಗಳ ಮೇಲಿನ ಕರವನ್ನು ರೂಪಾಯಿಗೆ ೧ ಆಣೆಯಂತೆಯೂ (ಈಗ ರೂಪಾಯಿಗೆ ೪ ಆಣೆ ಇದ್ದುದನ್ನು ೫ ಆಣೆಗೆ) ಮಧ್ಯಮ ತರಗತಿಯ ಹಾಗು ಒರಟು ಬಟ್ಟೆಗಳ ಮೇಲಿನ ಕರವನ್ನು ಗಜಕ್ಕೆ ಅರ್ಧಾಣೆಯಂತೆಯೂ ಏರಿಸುವದು. ಇದರಿಂದ ೯ ಕೋಟಿ ಆದಾಯ.

● ಮೋಟಾರು ಟಾಯರುಗಳ ಮೇಲಿನ ಆಯಾತ ಸುಂಕವನ್ನು ನೂರಕ್ಕೆ ೧೫ ರಿಂದ ೩೦ಕ್ಕೇರಿಸಲಾಗುವದು. ಆದಾಯ ೬೦ ಲಕ್ಷ.

● ಸಿಗರೇಟುಗಳ ಮೇಲಿನ ನಿರ್ಯಾತ ಸುಂಕವನ್ನು (ನೂರಕ್ಕೆ ೧೫) ಹೇರಿದ್ದರಿಂದ ಆದಾಯ ೬೦ ಲಕ್ಷ.

ಈ ಕರ ಇಳಿಕೆ ಮತ್ತು ಏರಿಕೆಗಳ ಪರಿಣಾಮವಾಗಿ ಕೊರತೆ ಹೋಗಲಾಗಿ ಒಟ್ಟು ೪೫ ಲಕ್ಷ ರೂಪಾಯಿ ಉಳಿತಾಯವಾಗುವದೆಂದು ಊಹಿಸಲ್ಪಟ್ಟಿದೆ.

ಅರ್ಥಮಂತ್ರಿಗಳ ಸ್ಪಷ್ಟೀಕರಣ

ತಮ್ಮೀ ಸೂಚನೆಗಳನ್ನು ಮಂಡಿಸುತ್ತ ಡಾ. ಜಾನ ಮತ್ತಾಯರು ಕರಗಳನ್ನು ಕಡಿಮೆ ಮಾಡಿದುದನ್ನು ಸಮರ್ಥಿಸಿದರು. ವಿದೇಶಿ ಮತ್ತು ದೇಶಿ ಬಂಡವಲದಾರರಲ್ಲಿ ಕರಭಾರದ ಅಧಿಕ್ಯದ ಬಗೆಗೆ ಉಂಟಾದ ಚಿಂತೆ ಹಾಗು ಭಯವನ್ನು ನಿವಾರಿಸದಿದ್ದರೆ ದೇಶದ ಔದ್ಯಮಿಕ ಅಭಿವೃದ್ಧಿಯೂ ಸಂಪದಭಿವೃದ್ಧಿಯೂ ಆಗಲಾರದು. ಅದರಿಂದ ಉಚ್ಚ ವರ್ಗದ ಉತ್ಪನ್ನದ ಮೇಲಿನ ಕರವನ್ನು ಇಳಿಸಲಾಗಿದೆ. ಇದರಿಂದ ಹಣ ಉಳಿಸಿ ಅದನ್ನು ಪುನಃ ರಾಷ್ಟ್ರನಿರ್ಮಾಣ ಕಾರ್ಯಗಳಲ್ಲಿ ತೊಡಗಿಸುವ ಪ್ರವೃತ್ತಿ ಬೆಳೆಯುವದೆಂದು ಆಶಿಸಲಾಗಿದೆ. ಬಂಡವಳ ಲಾಭದ ಮೇಲೆ ಹಿಂದೆ ಹೇರಿರುವ ಕರದಿಂದ ನಿರೀಕ್ಷಿಸಿದಷ್ಟು ಉತ್ಪತ್ತಿ ಹುಟ್ಟದೆ ದುಷ್ಪರಿಣಾಮ ಮಾತ್ರ ಆಗಿರುವದರಿಂದ ಅದನ್ನೂ ರದ್ದುಗೊಳಿಸಲಾಗಿದೆ.

ಇನ್ನು ಮಧ್ಯಮ ತರಗತಿಯವರ ಮೇಲೆ ಬೆಲೆಗಳ ಏರಿಕೆಯಿಂದ ಬಹಳ ಆಘಾತವಾಗಿರುವ ಕಾರಣ ೨೫೦೦ ರಿಂದ ೧೦೦೦೦ ವರೆಗಿನ ಉತ್ಪನ್ನಗಳ ಮೇಲಿನ ಕರದಲ್ಲಿ ಒಂದು ಬಿಲ್ಲೆಯಂತೆ ಕಡಿಮೆ ಮಾಡಲಾಗಿದೆ.

೨೫೦೦೦ ಮತ್ತು ಕಡಿಮೆ ಉತ್ಪನ್ನ ಇರುವ ಕಂಪನಿಗಳ ಮೇಲಿನ ಆದಾಯ ಕರವನ್ನು ಅರ್ಧದಷ್ಟು ಕಡಿಮೆ ಮಾಡಲಾಗುವದು. ಆದರೆ ಪ್ರಾಂತಗಳ ಮೇಲೆ ಇದರ ಧಕ್ಕೆ ತಾಗ್ರದಂತೆ ಕಾರ್ಪೊರೇಶನ್ ಕರದಲ್ಲಿಯೇ ಈ ಸವಲತ್ತನ್ನು ವಜಾ ಮಾಡಲಾಗುವದು. ವಿದೇಶಗಳಲ್ಲಿ ಸ್ಥಾಪಿತವಾದ ಕಂಪನಿಗಳ ಮೇಲೆ ವ್ಯಕ್ತಿಗಳ ದರದಲ್ಲಿ ಕರ ಹೇರುತಿದ್ದುದನ್ನು ಬದಲಿಸಿ ಕಂಪನಿಗಳ ಮೇಲಿನ ದರದಿಂದಲೇ ಹೇರಲಾಗುವದಲ್ಲದೆ ಒಂದಾಣೆಯಂತೆ ಅಧಿಕ ಕರವನ್ನೂ ಹೇರಲಾಗುವದು.

ಪ್ರತ್ಯಕ್ಷಾಪ್ರತ್ಯಕ್ಷ ಕರಗಳ ಹೆಚ್ಚಳದ ಬಗ್ಗೆ ಮಾತಾಡುತ್ತ ಟಪಾಲನ್ನು ಆದಷ್ಟು ಮಟ್ಟಿಗೆ ವಿಮಾನದಲ್ಲೇ ಸಾಗಿಸುವ ವ್ಯವಸ್ಥೆ ಮಾಡಲಾಗುವದೆಂದು ಮಂತ್ರಿಗಳು ಟಪಾಲ ದರಗಳ ಹೆಚ್ಚಳವನ್ನು ಸಮರ್ಥಿಸಿದರು. ಬಟ್ಟೆಗಳ ಮೇಲಿನ ಕರ ಹೆಚ್ಚಿಸಿದ್ದನ್ನು ಸಮರ್ಥಿಸಲು ಉಪ್ಪಿನ ಕರ ಹೋದುದರಿಂದಾದ ಹಾನಿಯನ್ನು ಸರಿದೂಗಿಸಲು ಅಷ್ಟೇ ಸ್ಥಿರವಾದ ಇನ್ನೊಂದು ಕರ ಬೇಕಾಗಿದೆಯೆಂದರು. ಮೇಲಾಗಿ ಅದರಿಂದ ಕೈಮಗ್ಗಗಳಿಗೆ ಧಕ್ಕೆಯಾಗುವದಿಲ್ಲ.

ಅಂತೂ ೧೯೪೯-೫೦ ನೆ ವರ್ಷದ ಆದಾಯದ ವಿವರಗಳ ಅಂದಾಜು ಇಂತಿದೆ:

ಸುಂಕ	೧೦೭.೨೫	ಕೋಟಿ
ಅಬಕಾರಿ	೫೭.೭೫	,,
ಆದಾಯುಕರ	೧೫೫.೦	,,
ಟಂಕಸಾಲೆ, ನಾಣ್ಯ	೯.೭	,,
ರೇಲ್ವೆ	೪.೭೨	,,
ಅಂಚೆ ತಂತಿ	೩೦.೨೬	,,

ಕೆಲ ವಿವರಗಳು

ಅರ್ಥ ಮಂತ್ರಿಗಳ ಭಾಷಣದ ಪ್ರಾಮುಖ್ಯಾಂಶಗಳನ್ನು ಹೀಗೆ ಸಂಗ್ರಹಿಸಬಹುದು:

ಅತಿಪ್ರಸರಣವನ್ನು ತಡೆಯುವದೇ ಸರಕಾರದ ಮುಂದಿರುವ ಪ್ರಾಥಮಿಕ ಸಮಸ್ಯೆಯಾಗಿದ್ದು ಆ ಬಗ್ಗೆ ಅನೇಕ ಉಪಾಯಗಳನ್ನು ಕೈಕೊಂಡಿದೆ.

ಆಹಾರ ಪರಿಸ್ಥಿತಿ ಇನ್ನೂ ಚಿಂತಾಜನಕವಾಗಿದ್ದು ೪೦ ಲಕ್ಷ ಟನ್ ಧಾನ್ಯಗಳನ್ನು ಹೊರಗಿನಿಂದ ತರಿಸಬೇಕಾಯಿತು.

ವಿದೇಶಗಳೊಡನೆ ಹಣಕಾಸಿನ ವ್ಯವಹಾರ ಸಾಮಾನ್ಯವಾಗಿ ಉತ್ತಮವಾಗಿದ್ದರೂ ದುಷ್ಕರ ಚಲಾವಣೆಯ (ಡಾಲರ) ಪ್ರದೇಶಗಳಿಂದಲೇ ನಾವು ಆಹಾರ ತರಿಸುವದರಿಂದ ಪರಿಸ್ಥಿತಿ ಬಿಗಿಯಾಗಿದೆ. ಸ್ಟರ್ಲಿಂಗ್ ಶಿಲ್ಕು ಕೂಡ ವಿಭಜನೆ, ಆಯಾತ ಮೊದಲಾದವುಗಳ ಕಾರಣದಿಂದ ೧೯೪೬ ರಲ್ಲಿ ೧೬೩೩ ಕೋಟಿ ಇದ್ದುದು ೯೪೯ ಕೋಟಿಗಿಳಿದಿದೆ.

ಸದ್ಯದ ವರ್ಷದ (೧೯೪೮-೪೯) ಉತ್ಪನ್ನ ನಿರೀಕ್ಷೆಗಿಂತ ಹೆಚ್ಚಾಗಿದ್ದರೂ ಕಾಶ್ಮೀರ ಯುದ್ಧ, ಆಹಾರ ಆಯಾತ ಮೊದಲಾದ ಕಾರಣಗಳಿಂದ ವೆಚ್ಚವೂ ಹೆಚ್ಚಿದ್ದರಿಂದ ಒಟ್ಟು ೧.೫೫ ಕೋಟಿ ಕೊರತೆಯಲ್ಲಿ ಪರಿಣಮಿಸಬಹುದು. ಹೀಗೆ ವೆಚ್ಚ ಹೆಚ್ಚಲು ೨೪.೩೫ ಕೋಟಿಯಷ್ಟು ಸಂರಕ್ಷಣ ವೆಚ್ಚ ಹೆಚ್ಚಿದ್ದೂ ೪೮.೧೪ ಕೋಟಿಯಷ್ಟು ನಾಗರಿಕ ವೆಚ್ಚದ್ದೂ ಕಾರಣವಾಯಿತು.

೧೯೪೯-೫೦ ರಲ್ಲಿ ಅಂದಾಜು ಮಾಡಲ್ಪಟ್ಟ ೩೨೨.೫೩ ಕೋಟಿ ವೆಚ್ಚದಲ್ಲಿ ಸಂರಕ್ಷಣ ವೆಚ್ಚ ೧೫೫.೨೭ ಕೋಟಿಯಾಗಬಹುದು. ಸದ್ಯ ವರ್ಷದ ಸುರಕ್ಷಣ ವೆಚ್ಚ ೧೫೫.೪೩ ಕೋಟಿ.

೧೯೪೯-೫೦ ರಲ್ಲಿ ನಿರಾಶ್ರಿತರ ಪುನರ್ನಿವೇಶನಕ್ಕಾಗಿ ೯.೮೫ ಕೋಟಿ ರೂಪಾಯಿಗಳ ಮಾಡಿಕೊಡಲಾಗಿದೆ; ಅದಲ್ಲದೆ ನಿರಾಶ್ರಿತರಿಗೆ ಸಾಲ ಮತ್ತು ಇತರ ಮೂಲಧನ ಸ್ವರೂಪದ ಸಹಾಯಕ್ಕಾಗಿ ೨೩.೨೭ ಕೋಟಿ ತೆಗೆದಿಡಲ್ಪಟ್ಟಿದೆ. ಸದ್ಯ ವರ್ಷದಲ್ಲಿ ಅದು ಅಂದಾಜಿನ ೧೦.೯೪ ಕೋಟಿಯನ್ನು ಮೀರಿ ೪೫ ಕೋಟಿಯಷ್ಟಾಗಿತ್ತು.

ಆಹಾರದ ಮೇಲೆ ಸಹಾಯಧನನೀಯಲು ೪೯ ೫೦ ರಲ್ಲಿ ೩೨.೯೭ ಕೋಟಿ ವೆಚ್ಚವಾಗಬಹುದು. ೧೯೪೮-೧೯೪೯ ರಲ್ಲಿ ಅದು ೩೭.೯೬ ಕೋಟಿಯಷ್ಟಾಗಿದೆ.

ರಾಷ್ಟ್ರ ನಿರ್ಮಾಣದ ಯೋಜನೆಗಳಿಗಾಗಿ ಧಾರಾಳ ಹಣವನ್ನು ತೆಗೆದಿಡಲಾಗಿದೆ.

೧೯೪೯-೫೦ ರಲ್ಲಿ ೪೫ ಕೋಟಿ ರೂಪಾಯಿ ಸಾಲ ತೆಗೆಯಬೇಕೆಂದಿದೆ.

ಭಾರತ ಸರಕಾರದ ಸಾಲ ಪರಿಸ್ಥಿತಿ

(೩೧-೩-೪೯ ಕ್ಕೆ)

ಭಾರತದಲ್ಲಿ

ಸಾಲ	೧೪೭೮೩೯	ಲಕ್ಷ ರೂ.
ಟ್ರೆಜರಿ ಹುಂಡಿ ಇತ್ಯಾದಿ	೩೬೯೩೩	,,
ಟ್ರೆಜರಿ ಠೇವು	೪೦೦	,,
ವಿಶೇಷ ಸಾಲ	೧೩೩೫೮	,,
ಅವಧಿ ಮೀರಿದ ಸಾಲ	೫೮೪	,,
ಒಟ್ಟು	೧೯೯೦೭೪	ಲಕ್ಷ ರೂ.

ಇಂಗ್ಲಂಡಿನಲ್ಲಿ

ಸಾಲ	೩೩೯	ಲಕ್ಷ ರೂ.
ಯುದ್ಧಕ್ಕೆ ವರ್ಗಣಿ	೨೦೬೨	,,
ರೇಲ್ವೆ ವರ್ಷಾಶನಗಳ ಬಂಡವಳ ಭಾಗ	೧೫೫೩	,,
ಅವಧಿ ಮೀರಿದ ಸಾಲ	೫	,,
ಒಟ್ಟು	೩೯೫೯	ಲಕ್ಷ ರೂ.
ಎರಡರ ಒಟ್ಟು	೨೦೩೦೩೩	ಲಕ್ಷ ರೂ.

● ಭಾರತದ ಹಿರಿಯೋಲಗದಲ್ಲಿ ಹಿಂದೂ ಕೋಡಿನ ಚರ್ಚೆ ನಡೆದಿದೆ. ಈ ಕೋಡು ಹಿಂದೂ ಧರ್ಮವನ್ನೇ ಅಳಿದು ಬಿಡುವದೆಂದು ಪಂಡಿತ ಮೈತ್ರ ಮೊದಲಾದವರು ಅಭಿಪ್ರಾಯಪಟ್ಟರೆ ಶ್ರೀ ಗಾಡಗೀಳ ಮೊದಲಾದವರು ಕೋಡನ್ನು ಕೊಂಡಾಡಿ ಸ್ವಾಗತಿಸಿದ್ದಾರೆ.

ಮುಂಬಯಿ ಪ್ರಾಂತದಲ್ಲಿ ಮತ್ತೆ ಹೊಸ ಕರಗಳು

ಮುಂಗಡ ಪತ್ರದ ಕೊರತೆ ತುಂಬಿಕೊಳ್ಳಲು

ಫೆಬ್ರುವರಿ ತಾ. ೨೪ ನೆ ದಿನ ಮುಂಬಯಿ ಶಾಸನ ಸಭೆಯಲ್ಲಿ ಅರ್ಥಮಂತ್ರಿ ಶ್ರೀ ವೈಕುಂಠಲಾಲ ಮೆಹತಾ ಅವರು ಮಂಡಿಸಿದ ೧೯೪೯—೫೦ ರ ಮುಂಗಡ ಪತ್ರಿಕೆಯಲ್ಲಿ ೬೭೮ ಲಕ್ಷ ರೂಪಾಯಿ ಕೊರತೆ ಕಂಡುಬಂದಿದೆ. ಅದಕ್ಕಾಗಿ ಹೊಸ ಕರಗಳನ್ನು ಹೊರಿಸಬೇಕೆಂದು ಅವರು ಸೂಚಿಸಿದ್ದು ಅವಕ್ಕೆ ಸಭೆಯ ಅನುಮತಿ ದೊರೆತರೆ ಅವುಗಳಿಂದ ೪೭೦ ಲಕ್ಷ ರೂಪಾಯಿ ಉತ್ಪನ್ನ ಹೆಚ್ಚಿ ೧೧½ ಲಕ್ಷ ರೂಪಾಯಿಯ ಉಳಿತಾಯವಾಗುವದೆಂದು ಹೇಳಲಾಯಿತು.

ಕೊರತೆಯನ್ನು ಬಾಯ್ಮುಚ್ಚಿಸುವ ಸಲುವಾಗಿ ಮಂತ್ರಿಗಳು ಸೂಚಿಸಿದ ಉಪಾಯಗಳಲ್ಲಿ ಹೊಸ ಕರಗಳೂ ಹಳೆಯ ಕರಗಳ ವಿಸ್ತರಣವೂ ಸೇರಿವೆ. ಮುಂಬಯಿ ನಗರದಿಂದ ಆಗುವ ನಿರ್ಯಾತಗಳ ಮೇಲೆ ರೂಪಾಯಿಗೆ ಒಂದು ಬಿಲ್ಲೆಯಂತೆ ಹಾಕುವ ನಿರ್ಯಾತ ಕರದಿಂದ ೩೭೫ ಲಕ್ಷ ರೂಪಾಯಿ, ಚಿನ್ನ ಬೆಳ್ಳಿ ವ್ಯಾಪಾರದ ಕಾಗದ ಪತ್ರಗಳ ಮೇಲೆ ಸ್ಟ್ಯಾಂಪ್ ಕರದಿಂದ ೧೫ ಲಕ್ಷ ರೂಪಾಯಿ, ಔದ್ಯೋಗಿಕ ಕಾರ್ಯಗಳಿಗಾಗಿ ಉಪಯೋಗಿಸಲ್ಪಡುವ—ಫ್ಯಾನ್ ಮತ್ತು ದೀಪಕ್ಕೆ ಹೊರತು—ವಿದ್ಯುತ್ತಿನ ಮೇಲಿನ ಕರದಿಂದ ೧೦ ಲಕ್ಷ ರೂಪಾಯಿ, ಪತ್ರಿಕೆಗಳ ಜಾಹೀರಾತಿನ ಮೇಲೆ ರೂಪಾಯಿಗೊಂದಾಣೆಯಂತೆ ಕರವೆತ್ತಿದ್ದರಿಂದ ೧೦ ಲಕ್ಷ ರೂಪಾಯಿ ಮತ್ತು ಈ ವರೆಗೆ ಕರ ಮುಕ್ತವಾಗಿದ್ದ ಅನೇಕ ವಸ್ತುಗಳಿಗೆ ಮಾರಾಟಕರವನ್ನು ಅನ್ವಯಿಸುವದಲ್ಲದೆ ಹೊಸ ವಸ್ತುಗಳಿಗೆ ಮಾರಾಟಕರ ಹೇರುವ ಮೂಲಕ ೫೦ ಲಕ್ಷ ರೂಪಾಯಿ ಉತ್ಪನ್ನ ಹೆಚ್ಚುವದೆಂದು ಅರ್ಥಮಂತ್ರಿಗಳು ನಿರೀಕ್ಷಿಸಿದ್ದಾರೆ.

ಹೀಗೆ ಬೆನ್ನುಬೆನ್ನಿಗೆ ಎರಡು ವರ್ಷಗಳಲ್ಲಿಯೂ ಹೊಸ ಕರಗಳನ್ನು ಹೇರಬೇಕಾಗಿ ಬಂದ ಕಾರಣಗಳನ್ನು ವಿವರಿಸುತ್ತ ಅರ್ಥಮಂತ್ರಿಗಳು ಸರಕಾರದ ಮೇಲೆ ಅನಿರೀಕ್ಷಿತವಾಗಿ ಬಿದ್ದ ಭಾರಗಳ ಕಡೆ ಬೊಟ್ಟು ಮಾಡಿದರು. ದೇಶದಲ್ಲಿ ಹೆಚ್ಚುತ್ತಿರುವ ಅತಿಪ್ರಸರಣಾವಸ್ಥೆಯನ್ನು ನೋಡಿ ಸರಕಾರ ತನ್ನ ಕಾದಿಟ್ಟ ನಿಧಿಗಳಿಂದ ಕೊರತೆಯನ್ನು ತುಂಬಿಕೊಳ್ಳುವದು ತಪ್ಪಾಗುವದೆಂದು ಬಗೆದುದಾಗಿ ಅವರು ಹೇಳಿದರು. ಕಾಶ್ಮೀರ ಹೈದರಾಬಾದುಗಳ ಯುದ್ಧದಿಂದಾಗಿ ಸ್ಥಿತಿಗತಿ ಕೆಟ್ಟಿತು. ದೇಶ ವಿಭಜನೆಯ ಪರಿಣಾಮವಾಗಿ ಪಾಕಿಸ್ತಾನದಿಂದ ೧೯೪೮ ಕೊನೆಯವರೆಗೂ ಮುಖ್ಯವಾಗಿ ಸಿಂಧಿ ನಿರಾಶ್ರಿತರು ಮುಂಬಯಿ ಪ್ರಾಂತದಲ್ಲಿ ಬಂದು ಮುಕುರಿದರು. ಇವರ ಸಂಖ್ಯೆ ಸುಮಾರು ೩ ಲಕ್ಷವಾಗಿದ್ದು ಅವರಲ್ಲಿ ೨ ಲಕ್ಷಕ್ಕಿಂತಲೂ ಹೆಚ್ಚು ಜನರನ್ನು ಸರಕಾರದ ಶಿಬಿರಗಳಲ್ಲಿ ನೆಲೆಗೊಳಿಸಬೇಕಾಯಿತು. ಇದಲ್ಲದೆ, ಬಿರುಗಾಳಿಯ ಅನಾಹುತದಿಂದಲೂ ಗುಜರಾಥದ ಬರಗಾಲದಿಂದಲೂ ಕರ್ನಾಟಕದ ಕೆಲಭಾಗಗಳಲ್ಲಿ ಉಂಟಾದ ವಿಶೇಷ ಕೊರತೆಯಿಂದಲೂ ಸರಕಾರದ ಮೇಲೆ ಹೆಚ್ಚಿನ ಭಾರ ಬಿತ್ತು. ಸೀದಾವನ್ನು ರದ್ದುಗೊಳಿಸಿ ಅಗ್ಗದರದಂಗಡಿಗಳನ್ನು ತೆರೆದುದೂ ಹಾನಿಗೆ ಕಾರಣವಾಯಿತು. ಈ ಸ್ಥಿತಿಯಲ್ಲಿ ವೆಚ್ಚಗಳ ಮೇಲೆ ಕಣ್ಣಿಡಲು ಒಂದು ಸಮಿತಿಯನ್ನೇರ್ಪಡಿಸಿ ಪ್ರಶಸ್ತಿಯ ಪದ್ಧತಿಯಿಂದ ವೆಚ್ಚಮಾಡುವ ವಿಚಾರಕ್ಕೆ ಬರಬೇಕಾಯಿತು.

೧೯೪೮-೪೯ ರ ಸಿಂಹಾವಲೋಕನ

ಹೀಗಾಗಿ ೧೯೪೮-೪೯ ರ ವೆಚ್ಚ ೪೪.೦೨ ಕೋಟಿಯೆಂದು ಮುಂಗಡ ಪತ್ರಿಕೆಯಲ್ಲಿ ಊಹಿಸಿದುದು ತಪ್ಪಿ ಅದು ೫೧.೯೧ ಕೋಟಿಗೇರಿತು. ಪ್ರಾಂತದಲ್ಲಿರುವ ಆಹಾರಕೊರತೆಯನ್ನು ಅನುಲಕ್ಷಿಸಿ ಕೇಂದ್ರ ಸರಕಾರದ ಸೂಚನೆಗಿಂತಲೂ ಹೆಚ್ಚಾಗಿ ಎಂದರೆ ನೂರಕ್ಕೆ ೫೦ ರಷ್ಟು ಲೆವ್ಹಿ ಧಾನ್ಯಗಳ ದರ ಏರಿಸಿದ್ದರಿಂದ ೧೯೪೮-೪೯ ರಲ್ಲಿ ೫ ಕೋಟಿ ಹಾಗು ೧೯೪೯-೫೦ ರಲ್ಲಿ ೪ ಕೋಟಿಯ ಹಾನಿಯನ್ನು ಪ್ರಾಂತವೇ ಹೊರಬೇಕಾಗುವದು. ಈ ಕಾರಣದಿಂದಲೇ ಮುಖ್ಯವಾಗಿ "ಸಂಕೀರ್ಣ ವೆಚ್ಚಗಳು" ೨.೧೯ ಕೋಟಿಯ ಅಂದಾಜು ಮೀರಿ ೬.೧೨ ಕೋಟಿಗೇರಿದವು. ಆಡಳತೆ ವೆಚ್ಚ ೧.೯೫ ಕೋಟಿಯಿಂದ ೨.೬೯ ಕೋಟಿಗೇರಿದರೆ ಪೋಲೀಸು ವೆಚ್ಚ ೯೨.೧೬ ಲಕ್ಷದಷ್ಟು ಹೆಚ್ಚಿ ಒಟ್ಟು ಉತ್ಪನ್ನದ ನೂರಕ್ಕೆ ೧೩.೫ ರಷ್ಟಾಯಿತು. ಇಷ್ಟು ಹೆಚ್ಚು ಪೋಲೀಸುವೆಚ್ಚ ಅತಿಯೆಂದು ಕಾಣಿಸಿದರೂ ದೇಶದಲ್ಲಿ ತಲೆಯೆತ್ತುತ್ತಿರುವ ಸಮಾಜವೈರಿ. ಸತ್ವಗಳಿಂದ ಶಾಂತಿವ್ಯವಸ್ಥೆಗಳನ್ನು ಕಾಪಾಡಲು ಇದು ಅವಶ್ಯವೇ ಆಯಿತು.

ಆದರೆ ಕೇಂದ್ರದಿಂದ ಆದಾಯ ಕರದಲ್ಲಿ ನಮಗೆ ಸಿಕ್ಕಿದ ಹೆಚ್ಚಿನ ಪಾಲು ಮತ್ತು ಮಾರಾಟ ಕರದ ಹೆಚ್ಚಳದ ಕಾರಣದಿಂದ ಉತ್ಪನ್ನವೂ ಅಂದಾಜಿಗಿನ ೪೪.೦೮ ಕೋಟಿಯ ಬದಲು ೫೦.೯೪ ಕೋಟಿಯಷ್ಟಾದುದರಿಂದ ಒಟ್ಟು ಕೊರತೆ ೯೭.೪೭ ಲಕ್ಷ ಮಾತ್ರ ಬರಬಹುದು.

ಪಾನನಿರೋಧದಿಂದಬೂ ಉತ್ಪನ್ನಕ್ಕೆ ಬಹಳ ಧಕ್ಕೆ ಬರುವದು ನಿಶ್ಚಿತವಾಗಿದ್ದರೂ ಅದನ್ನು ತಡೆಯದೆ ಮುಂದೊತ್ತಬೇಕೆಂದು ನಿರ್ಧರಿಸಲಾಗಿದೆ. ಈ ಬಗ್ಗೆ ಕೇಂದ್ರದಿಂದ ಸಹಾಯಧನ ಕೇಳುವ ವಿಚಾರವೂ ಸರಕಾರಕ್ಕಿಲ್ಲ.

೧೯೪೯—೫೦ ರ ಮುನ್ನೋಟ

ಹೊಸ ವರ್ಷದ ಮುನ್ನೋಟ ಮಾಡುತ್ತ ವೈಕುಂಠಲಾಲ ಮೆಹತಾ ಅವರು ಸಂಸ್ಥಾನಗಳ ಲೀನೀಕರಣದಿಂದ ಪ್ರಾಂತದ ವಿಸ್ತಾರ ೩೩,೬೪೩ ಚ. ಮೈಲು ಮತ್ತು ಜನಸಂಖ್ಯೆ ೪೪ ಲಕ್ಷ ಹೆಚ್ಚಿದ್ದರಿಂದ ಪ್ರಾಂತದ ಆರ್ಥಿಕ ಸ್ಥಿತಿಯ ಮೇಲೆ ಏನು ಪರಿಣಾಮವಾಗಬಹುದೆಂದು ಈಗಲೆಹೇಳುವದು ಅಸಾಧ್ಯವೆಂದರು. ಮುಂದಿನ ವರ್ಷ ಪೋಲೀಸು ವೆಚ್ಚ ೭.೦೨ ಕೋಟಿಗೇರಿ ಉತ್ಪನ್ನದ ಶೇಕಡಾ ೧೪.೪ ರಷ್ಟಕ್ಕೆ ಮುಟ್ಟುವದು. ಮುಂದಿನ ವರ್ಷದ ಇನ್ನು ಕೆಲ ರಾಷ್ಟ್ರನಿರ್ಮಾಪಕ ಕಾರ್ಯಗಳ ವೆಚ್ಚಗಳ ವಿವರಗಳನ್ನು ಅವರು ಉಲ್ಲೇಖಿಸಿದ್ದು ಇಂತಿದೆ:

- ೧೯೪೮-೪೯ ರಲ್ಲಿ ವಸತಿ ನಿರ್ಮಾಣ ಯೋಜನೆಗಳಿಗಾಗಿ ೨ ಕೋಟಿ ವೆಚ್ಚ ಮಾಡಿದ್ದು ಈ ಬಾರಿ (೧೯೪೯ ೫೦) ೨.೩೭ ಕೋಟಿಯಷ್ಟು ವೆಚ್ಚದ ಅವಕಾಶ ಏರ್ಪಡಿಸಿದೆ. ಹೊಸ ವರ್ಷದಿಂದ ಸರಕಾರದ ನಿತ್ಯ ಹಸ್ತಕ್ಷೇಪದಿಂದ ಮುಕ್ತವಾದ ವಸತಿನಿರ್ಮಾಣ ಮಂಡಲಕ್ಕೇ ಈ ಕಾರ್ಯವನ್ನು ಒಪ್ಪಿಸಲಾಗುವದು.
- ಆಹಾರ ಹಾಗು ಬಟ್ಟೆಯ ವಿನಿಯಂತ್ರಣ ಧೋರಣವು ವರ್ತಕರ ಅಯೋಗ್ಯ ವರ್ತನೆಯಿಂದ ಅಯಶಸ್ವಿಯಾದ ಕಾರಣ ಸಹಕಾರಿ ಸಂಘಗಳ ಮುಖಾಂತರ ಅವುಗಳ ಹಂಚುವಿಕೆಗಾಗಿ ೩ ಕೋಟಿಯಷ್ಟು ಹಣ ಒದಗಿಸಬೇಕಾಗುವದು. ವಿದೇಶಗಳಿಂದ ತರಿಸಿದಆಹಾರದ ಬೆಲೆಯನ್ನು ಇಲ್ಲಿ ಮಾರುವ ಬೆಲೆಗಳಿಗಿಂತ ನೂರಕ್ಕೆ ೫೦ ರಷ್ಟು ಏರಿಸಲಾಗಿದೆ. ಈ ಸ್ಥಿತಿಯಲ್ಲಿ ಆಹಾರ ಧಾನ್ಯದ ಲೆವ್ಹಿಗೆ ವಿಘ್ನತರಬಯಸುವವರು ಸಮಾಜದ್ರೋಹಿಗಳೇ ಸರಿಯೆಂದು ಮಂತ್ರಿಗಳು ಹೇಳಿದರು.
- ಪ್ರಾಂತದ ಆಹಾರ ಕೊರತೆಯನ್ನು ಯಥಾವತ್ ಉಳಿಸುವದರ ಗಂಡಾಂತರವನ್ನು ಮನಗಂಡು ಎಲ್ಲ ಬಗೆಯ ನೀರಾವರಿ ಕಾಮಗಾರಿಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ನಿರ್ಧರಿಸಲಾಗಿದೆ. ಕೈಕೊಳ್ಳಲ್ಪಟ್ಟಿರುವ ಹಿರಿ ಯೋಜನೆಗಳಲ್ಲಿ ಗುಜರಾಥದಲ್ಲಿ ಮಾಹಿ ಮತ್ತು ಮೇಶ್ವಾ ಯೋಜನೆಗಳು, ಮಹಾರಾಷ್ಟ್ರದಲ್ಲಿ ಗಂಗಾಪುರ ಯೋಜನೆ, ಕರ್ನಾಟಕದಲ್ಲಿ ಘಟಪ್ರಭಾ ಯೋಜನೆಗಳಿವೆ. ಕೋಯಿನಾ, ತಾಪಿ, ನರ್ಮದಾ ಯೋಜನೆಗಳ ಪರಿಶೀಲನೆ ನಡೆದಿದೆ. ಬಾವಿ ಮೊದಲ್ಗೊಂಡು ಚಿಕ್ಕ ದೊಡ್ಡ ನೀರಾವರಿಗಳ ಬಗ್ಗೆ ೧೯೪೮ ೪೯ ರಲ್ಲಿ ರೂ. ೩೮೫ ಲಕ್ಷದ ವ್ಯವಸ್ಥೆ ಮಾಡಲಾಗಿದೆ.
- ಗೊಬ್ಬರದ (ಮುಖ್ಯವಾಗಿ ಕೃತಕ ಗೊಬ್ಬರದ) ಬಗ್ಗೆ ಒಂದು ಕೋಟಿ ರೂಪಾಯಿ ಕಾಣಿಸಲಾಗಿದೆ. ಟ್ರ್ಯಾಕ್ಟರುಗಳ ಬಲವನ್ನು ಹೆಚ್ಚಿಸಲು ೩೨.೬೨ ಲಕ್ಷ ರೂಪಾಯಿಗಳ ನ್ನೊದಗಿಸಲಾಗುವದಲ್ಲದೆ ೩ ಲಕ್ಷ ಎಕರೆ ಪಡಭೂಮಿ ಹಾಗು ೮ ಲಕ್ಷ ಎಕರೆ ಕಳೆ ಬೆಳೆದ ಭೂಮಿಗಳನ್ನು ಸಾಗುವಳಿಗೆ ತರಲು ೮.೫೮ ಕೋಟಿಯ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದು ಅದಕ್ಕೆ ಮನ್ನಣೆ ದೊರೆತರೆ ಪ್ರಾಂತದ ನೆನೆಗುದಿಗೆ ಬಿದ್ದ ಆಹಾರ ಕೊರತೆ ತಕ್ಕಮಟ್ಟಿಗೆ ಸುಧಾರಿಸುವ ಹಕೆಯಿದೆ.
- ಕೈಮಗ್ಗದೇ ಮೊದಲಾದ ಗ್ರಾಮೋದ್ಯಮಗಳಿಗೂ ಚಿಕ್ಕ ಚಿಕ್ಕ ಉದ್ಯಮಗಳಿಗೂ ಹಾಲಿನ ಕಂಪನಿಗಳಿಗೂ ಸಹಾಯ ನೀಡಲಾಗುವ ವಿಚಾರವನ್ನೂ ಮಂತ್ರಿಗಳು ಉಲ್ಲೇಖಿಸಿದರು.

ಸಾರಿಗೆಯ ರಾಷ್ಟ್ರೀಕರಣ

ಪ್ರವಾಸಿಕರ ಮೋಟಾರ ಸಾರಿಗೆಯನ್ನು ಮೂರು ವರ್ಷದ ಅವಧಿಯಲ್ಲಿ ಪೂರ್ಣ ರಾಷ್ಟ್ರೀಕರಣ ಮಾಡುವ ನಿರ್ಣಯವಾಗಿದ್ದು ಅದಕ್ಕಾಗಿ ಈ ವರ್ಷದ ಮುಂಗಡ ಪತ್ರಿಕೆಯಲ್ಲಿ ೨ ಕೋಟಿ ಮತ್ತು ಮುಂದಿನವದರಲ್ಲಿ ೨.೨೭ ಕೋಟಿ ರೂಪಾಯಿಯನ್ನು ಗುರುತು ಹಾಕಲಾಗಿದೆ. ಸಾರಿಗೆ ರಾಷ್ಟ್ರೀಕರಣಕ್ಕೆ ಒಟ್ಟು ೬ ಕೋಟಿ ರೂಪಾಯಿ ಹಿಡಿಯುವದು.

- ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೂರೈಕೆ ಬಗ್ಗೆ ೩೧೬೫ ಬಾವಿಗಳನ್ನು ಯೋಜಿಸಿದ್ದು ಆ ಪೈಕಿ ೩೨ ಲಕ್ಷ ರೂ. ವೆಚ್ಚದಿಂದ ೫೩೪ ಈಗಾಗಲೆ ಮುಗಿದಿದೆ. ಹುಬ್ಬಳ್ಳಿ ಧಾರವಾಡಗಳಿಗಾಗಿ ನೀರಸಾಗರ ಯೋಜನೆ ೧.೪೨ ಕೋಟಿ ವೆಚ್ಚದಲ್ಲಿ ಕೈಕೊಳ್ಳಲ್ಪಟ್ಟಿದೆ. ವೈದ್ಯಕೀಯ ಶಿಕ್ಷಣಕ್ಕಾಗಿ ೨೦ ೧೫ ಲಕ್ಷ, ಸಾಮಾನ್ಯ ಶಿಕ್ಷಣಕ್ಕಾಗಿ ೯೪೪.೨೫ ಲಕ್ಷ ತೆಗೆದಿಡಲ್ಪಟ್ಟಿದ್ದು ಆಯುರ್ವೇದ ಯುನಾನಿ ವೈದ್ಯರ ತರಬೇತಿಯ ವ್ಯವಸ್ಥೆಯನ್ನೂ ವಿಸ್ತರಿಸಲಾಗಿದೆ.

ಆಡಳತೆಯ ವೆಚ್ಚ

ಆಡಳತೆಯ ವೆಚ್ಚದ ಪ್ರಶ್ನೆಯನ್ನೆತ್ತಿ ಅರ್ಥಮಂತ್ರಿಗಳು ಈಗ ಪ್ರಾಂತದ ಸಂಬಳದ ಯಾದಿ ತುಂಬಿ ಛತ್ತಿ ಸೇರಿ ೧೫ ಕೋಟಿಗೆ ಮುಟ್ಟಿದ್ದು ಕೇಂದ್ರ ಸರಕಾರದವರು ಕೆಳದರ್ಜೆಯ ನೌಕರರಿಗೆ ತಿಂಗಳಿಗೆ ೧೦ ರೂಪಾಯಿ ಹೆಚ್ಚಿಸಿದಂತೆ ನಾವೂ ಕಲ್ಪಿಸಲು ಮತ್ತು ಕೆಲವು ಸವಲತ್ತು ಮಾಡಬೇಕಾಗುವದೆಂದರು. ಹೀಗಾದರೆ [illegible] ಸರಕಾರದ ವೆಚ್ಚವನ್ನು [illegible] ಹೆಚ್ಚಿಸುವ [illegible] ಕೊರತೆ [illegible] ಹಾಕಿದರು.

ಆದಾಯ ತೆರಿಗೆಯಲ್ಲಿ ಕೇಂದ್ರದಿಂದ ಮುಂಬಯಿ ಪ್ರಾಂತಕ್ಕೆ ದೊರೆಯುವ ಪಾಲು [illegible] ಪ್ರಾಂತಗಳಿಗಿಂತ [illegible] ಕಡಿಮೆಯೆಂದು ಅರ್ಥಮಂತ್ರಿಗಳು [illegible] ಕೆಂದು ಅದನ್ನು ಹೆಚ್ಚಿಸಬೇಕೆಂದರು.

ಒಟ್ಟಿನ ಮೇಲೆ ಮುಂಗಡ ಪತ್ರಿಕೆಯ ಸ್ಥಿತಿ ಹೀಗಿದೆ (೧೯೪೯-೫೦):

ಆದಾಯ	೪೪,೮೦.೬೬ ಲಕ್ಷ
ವೆಚ್ಚ	೫೩,೩೦.೮೪ ಲಕ್ಷ
ಸಂಸ್ಥಾನ ಲೀನೀಕರಣದಿಂದ ಬಂದ ಕೊರತೆ	೩೩.೫೬ ಲಕ್ಷ
ಒಟ್ಟು ವೆಚ್ಚ	೫೩,೬೫.೩೯ ಲಕ್ಷ

ಹೀಗೆ ಕೊರತೆ ಸುಮಾರು ನಾಲ್ಕು ಕೋಟಿ ಆಗುವದು. ಸುಮಾರು ೯ ಕೋಟಿ ರೂಪಾಯಿಯಷ್ಟು ಬಂಡವಳದೊಳಗಿನ ವೆಚ್ಚ ಬರುವದಿದ್ದು ಆ ಬಗ್ಗೆ ಕೇಂದ್ರದಿಂದ ಇಲ್ಲವೆ ಪೇಟೆಯಿಂದ ಸಾಲ ಎತ್ತುವ ವಿಚಾರ ಇಟ್ಟುಕೊಳ್ಳಲಾಗಿದೆ. ಕೊರತೆಯನ್ನು ತುಂಬಲು ಮೇಲೆ ಹೇಳಿದಂತೆ ಕರವನ್ನು ವಿಸ್ತರಿಸಬೇಕೆಂದು ಸೂಚಿಸಲಾಗಿದೆ.

ಕೊನೆಯಲ್ಲಿ ಮಂತ್ರಿಗಳು ಕೊರತೆಯನ್ನು ಹಾಗೆಯೆ ಮುಂದುವರಿಸದೆ ಕರ ಹೆಚ್ಚಿಸುವ ಮೂಲಕ ತುಂಬಿಕೊಳ್ಳುವ ತಮ್ಮ ಧೋರಣವನ್ನು ಸಮರ್ಥಿಸಿಕೊಂಡು ಅತಿಪ್ರಸರಣವನ್ನು ಹಿಡಿತಕ್ಕೆ ತರಲು ಇದು ಅವಶ್ಯವಾಗಿದೆಯೆಂದರು. ಈ ಮುಂಗಡ ಪತ್ರದಲ್ಲಿ ಒಣ ಆಡಂಬರದ ಯೋಜನೆಗಳಿಲ್ಲ. ನಮ್ಮ ಪೂರ್ವೇತಿಹಾಸದ ಗೌರವಕ್ಕೆ ತಕ್ಕಂತೆ ಹಾಗು ಭಾವೀ ಏಳಿಗೆಯ ದೃಷ್ಟಿಯಿಂದ ಇಷ್ಟು ವೆಚ್ಚ ಮಾಡುವದು ಅತ್ಯವಶ್ಯವೇ ಆಗಿದೆಯೆಂದೂ ಅವರು ಹೇಳಿದರು.

ಮೈಸೂರು ಕರ್ನಾಟಕದಲ್ಲಿ ಲೀನವಾಗಬೇಕು

ಸರದಾರ ಪಟೇಲರಲ್ಲಿ ಶಿಷ್ಟಮಂಡಳ

ಕರ್ನಾಟಕ ಪ್ರಾಂತವನ್ನು ಬೇಗನೆ ರಚಿಸಬೇಕೆಂಬ ಕನ್ನಡಿಗರ ತೀವ್ರ ಭಾವನೆಯನ್ನು ತಿಳಿಸುವುದಕ್ಕಾಗಿ ಶ್ರೀ. ನಿಜಲಿಂಗಪ್ಪನವರ ನೇತೃತ್ವದಲ್ಲಿ ಪ್ರಾಂತೀಯ ಕಾಂಗ್ರೆಸ ಸಮಿತಿಯ ಮತ್ತು ಏಕೀಕರಣ ಮಹಾಸಮಿತಿಯ ಪ್ರತಿನಿಧಿಗಳ ಶಿಷ್ಟಮಂಡವು ಸರದಾರ ವಲ್ಲಭಭಾಯಿ ಪಟೇಲರನ್ನು ಮದ್ರಾಸಿನಲ್ಲಿ ಮತ್ತು ಬೆಂಗಳೂರಿನಲ್ಲಿ ಕಂಡಿತು. ಈ ಶಿಷ್ಟಮಂಡಳದಲ್ಲಿ ಶ್ರೀ ಎಸ್. ನಿಜಲಿಂಗಪ್ಪಾ, ಬಳವಂತರಾವ ದಾತಾರ, ವೆಂಕಟೇಶ ಮಾಗಡಿ, ಶ್ರೀನಿವಾಸರಾವ ಮಂಗಳವೇಢೆ, ಕೆ. ಆರ್. ಕಾರಂತ, ಟೇಕೂರು ಸುಬ್ರಹ್ಮಣ್ಯಂ ಇವರು ಇದ್ದರು.

ಶಿಷ್ಟಮಂಡಳದವರು ಕನ್ನಡಿಗರ ತೀವ್ರ ಭಾವನೆಯನ್ನು ತಿಳಿಸಿದ ನಂತರ ಬಡೋದೆ ಮತ್ತು ಕೊಲ್ಹಾಪುರ ಸಂಸ್ಥಾನಗಳು ವಿಲೀನ ಹೊಂದುವ ಮೊದಲಿನ ಮತ್ತು ವಿಲೀನ ಹೊಂದಿದ ನಂತರದ ಪರಿಸ್ಥಿತಿಯ ಚರ್ಚೆಯಾಯಿತು. ಮೈಸೂರು ಮಹಾರಾಜರು ಘಟನಾತ್ಮಕ ಅರಸರಾಗಿ ಉಳಿಯಬೇಕೆಂದು ಕರಿಸರದಲ್ಲಿ ಪ್ರಾಂತೀಯ ಕಾಂಗ್ರೆಸ ಸಮಿತಿಯು ನಿರ್ಣಯಿಸಿದ್ದೇಕೆ ಎಂದು ಸರದಾರರು ಕೇಳಿದರು. ಶಿಷ್ಟಮಂಡಳದವರು ಅದಕ್ಕೆ ಉತ್ತರ ಕೊಡುತ್ತ ಮೈಸೂರು ಸಂಸ್ಥಾನದ ಬಗ್ಗೆ ಕೆಲವೊಂದು ಜನರನ್ನು ಸಂತೋಷಗೊಳಿಸುವದೇ ಈ ಗೊತ್ತುವಳಿಯ ಉದ್ದೇಶವಾಗಿತ್ತು. ಮೈಸೂರಿಗಿಂತ ಸ್ಥಾನಗಳಲ್ಲಿ ಹೆಚ್ಚಿನದಾದ ಬರೋಡೆ ಸಂಸ್ಥಾನವು ವಿಲೀನ ಹೊಂದಿದ್ದರಿಂದ ಮೈಸೂರು ಸಂಸ್ಥಾನವೂ ವಿಲೀನ ಹೊಂದಬೇಕೆಂದೇ ನಮ್ಮ ಆಗ್ರಹವಿದೆ ಎಂದು ಶಿಷ್ಟಮಂಡಳದವರು ಅಭಿಪ್ರಾಯಪಟ್ಟರು. ಅಲ್ಲದೆ ಮೈಸೂರು ಸಂಸ್ಥಾನವೂ ಲೀನ ಹೊಂದುವಂತೆ ಸರದಾರ ಪಟೇಲರು ತಮ್ಮ ವರ್ಚಸ್ಸನ್ನು ಉಪಯೋಗಿಸಬೇಕೆಂದೂ ವಿನ್ನವಿಸಿಕೊಳ್ಳಲಾಯಿತು. ಮೈಸೂರು ಕಾಂಗ್ರೆಸ್ಸು ಅ. ಭಾ. ಕಾಂ. ಸಮಿತಿಯಿಂದ ಪ್ರತ್ಯೇಕವಾಗಿ ಸ್ವತಂತ್ರ ಪ್ರಾಂತಿಕ ಕಾಂಗ್ರೆಸ ಸಮಿತಿಯ ಬೇಡಿಕೆಯನ್ನು ಮೈಸೂರು ಕಾಂಗ್ರೆಸ್ಸು ಮಂಡಿಸಿದ್ದುದು ಏಕೀಕರಣದ ಬಗ್ಗೆ ಸ್ವೀಕರಿಸಿದ ಗೊತ್ತುವಳಿಗೆ ವಿಸಂಗತವಾದುದು ಎಂದೂ ಸರದಾರ ವಲ್ಲಭಭಾಯರಿಗೆ ಹೇಳಲಾಯಿತು. ಕೊಡಗಿನ ಪ್ರಶ್ನೆಯ ಬಗ್ಗೆಯೂ ಚರ್ಚೆ ಮಾಡಲಾಯಿತು.

ಬೆಂಗಳೂರಿನಲ್ಲಿ ಸರದಾರರನ್ನು ಕಂಡಾಗ ಅನೇಕ ಮೈಸೂರು ಧುರೀಣರೂ ಇದ್ದರು. ಮೈಸೂರು ಮತ್ತು ಉತ್ತರ ಕರ್ನಾಟಕದ ಧುರೀಣರು ಕೂಡಿ ಒಂದು ಒಪ್ಪಂದ ಮಾಡಿಕೊಂಡು ತ್ರಿಮೂರ್ತಿ ಸಮಿತಿಯ ಮುಂದೆ ಅದನ್ನು ಮಂಡಿಸಲಾಗುವದೆಂದು ತಿಳಿಯುತ್ತದೆ. ತಮ್ಮ ಪ್ರಯತ್ನಕ್ಕೆ ಆಶೀರ್ವಾದ ಕೊಡಬೇಕೆಂದು ಸರದಾರರನ್ನು ಬಿನ್ನವಿಸಲಾಯಿತು. ಎಲ್ಲ ರೀತಿಯಿಂದ ಸಹಾಯ ಮಾಡಲು ತಾವು ಸಿದ್ಧರಿರುವದಾಗಿ ಸರದಾರರು ಉತ್ತರಿಸಿದರಲ್ಲದೆ ಸಾಮೋಪಾಯಗಳಿಂದ ಎಲ್ಲ ಪ್ರಶ್ನೆಗಳನ್ನೂ ಬಗೆಹರಿಸಿಕೊಳ್ಳಬೇಕೆಂದು ಸಲಹೆಯಿತ್ತರು. ಸಂಧಾನ ಸಮಿತಿಗಳ ಸಭೆ ಮಾರ್ಚದಲ್ಲಿ ಕೂಡುವದು. ಅಷ್ಟರಲ್ಲಿ ಮೈಸೂರು ಸಮಿತಿಯು ಕರ್ನಾಟಕದಲ್ಲೆಲ್ಲ ಸಂಚರಿಸಿ ಬರುವದು. ಇದರಿಂದ ಎಲ್ಲರಿಗೂ ಒಪ್ಪಿತವಾಗುವ ಬೇಡಿಕೆ ಸಿದ್ಧವಾಗಬಹುದೆಂದು ನಿರೀಕ್ಷಿಸಲಾಗಿದೆ.

ಶ್ರೀ ಕೃಷ್ಣಕುಮಾರ ಕಲ್ಲೂರ ಮತ್ತು ಪಾಟೀಲ ಪುಟ್ಟಪ್ಪನವರು ಮೈಸೂರು ಲಲಿತ ಮಹಾಲಿನಲ್ಲಿ ಸಂಯುಕ್ತ ಕರ್ನಾಟಕದ ಹಲವು ಸಮಸ್ಯೆಗಳನ್ನು ಭಿನ್ನ ಭಿನ್ನ ದೃಷ್ಟಿಯಿಂದ ತಿಳಿಸಲು ಹಲವು ನಕ್ಷೆಗಳ ಮತ್ತು ವಸ್ತುಗಳ ಪ್ರದರ್ಶನವನ್ನೇರ್ಪಡಿಸಿದ್ದರು. ಸರದಾರ ಪಟೇಲರು ಒಳ್ಳೆ ಆಸಕ್ತಿಯಿಂದ ಈ ಪ್ರದರ್ಶನವನ್ನು ಬಹಳ ಹೊತ್ತಿನವರೆಗೆ ನೋಡಿ ತಿಳಿದುಕೊಳ್ಳಬೇಕಾದ ಎಲ್ಲ ವಿಷಯಗಳನ್ನು ತಿಳಿದುಕೊಂಡರು ಮತ್ತು ಇದನ್ನು ಸಿದ್ಧಪಡಿಸಿ ಪ್ರದರ್ಶನವನ್ನೇರ್ಪಡಿಸಿದ್ದಕ್ಕೆ ಧನ್ಯವಾದಗಳನ್ನರ್ಪಿಸಿದರು.

ಸಂಬಳ ಸಮಿತಿಯ ಶಿಫಾರಸುಗಳನ್ನು ಕೆಲತಿದ್ದುಪಡಿಗಳೊಂದಿಗೆ [illegible] ಗಳನ್ನು [illegible] ಹಿಂದುಸ್ತಾನ ಸರಕಾರದವರು ನಿರ್ಧರಿಸಿದ್ದಾರೆ. ಈ ಬಗೆಯ ಒಂದು ಪತ್ರವು ಅ. ಭಾ. ರೇಲ್ವೆ ಕೆಲಸಗಾರರ ಮಹಾಮಂಡಳದ ಕಾರ್ಯದರ್ಶಿಗಳಾದ ಶ್ರೀ ಎಸ್. ಗುರುಸ್ವಾಮಿಯವರಿಗೆ ತಿಳಿಸಿರುವರು.

ಮುಖಚಿಕಿತ್ಸೆಯಿಂದ ಯೌವನದ ಪುನರುಜ್ಜೀವನ

ಪ್ಲಾಸ್ಟಿಕ್ ಶಸ್ತ್ರಕ್ರಿಯೆಯ ಅದ್ಭುತಗಳು!

ಹೆಂಗಸರಿಗೆ ಬೇಗನೆ ಮುಪ್ಪು ಬರುವದೆಂಬುದು ಸಾಮಾನ್ಯ ಅನುಭವ. ಹೆರಿಯುವದೇ ಮೊದಲಾದುದು ಅದಕ್ಕೆ ಕಾರಣವೆಂದು ತಿಳಿಯಲಿ. ಬೇಗಬೇಗನೆ ಗರ್ಭಧರಿಸುವ ಹೆಣ್ಣು ಮಕ್ಕಳು ಮೂವತ್ತು ವರ್ಷಗಳಲ್ಲೇ ಮುದುಕಿಯರಾಗಿಬಿಡುತ್ತಾರೆ. ಅವರ ಮುಖದ ಮೇಲಿನ ತೊಗಲು ಜೋಲಿಬಿದ್ದು ನಿರಿಗಳು ಕಾಣಿಸಿಕೊಳ್ಳುತ್ತವೆ. ಮತ್ತು ಸಾಮಾನ್ಯವಾಗಿ ಇನ್ನೂ ತಾರುಣ್ಯಾವಸ್ಥೆಯಲ್ಲಿ ಇರುವ ತಮ್ಮ ಗಂಡಂದಿರ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿರುವಂತೆ ಅವರಿಗೆ ಭಾಸವಾಗುತ್ತದೆ. ಹರೆಯ ಸ್ತ್ರೀಯರು, ವೃದ್ಧ ಮುಖ- ಈ ವಿಪರ್ಯಾಸದಲ್ಲಿ ಅವರ ಜೀವನ ನಿರಾಶಾಮಯವಾಗುವದುಂಟು. ದಾಂಪತ್ಯದಲ್ಲಿ ತಿಕ್ಕಾಟ, ತಪ್ಪು ತಿಳುವಳಿಕೆಗಳೆದ್ದು ಮತ್ಸರ, ಜಗಳಗಳು ಹೆಚ್ಚುವದುಂಟು.

ಆದರೆ ಇಂಥ ಮಹಿಳೆಯರಿಗೆ ಈ ನಿರಾಶಾಮಯ ಜೀವನದಿಂದ ಪಾರಾಗುವ ಆಶೆ ಈಗ ಹತ್ತಿರ ಬರುತಿದೆ. "ಮುಖ ಶಲ್ಯತಂತ್ರ"ದ ಮೂಲಕ ಅಂದರೆ ಈಚೆಗೆ "ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ"ಯೆಂದು ಪ್ರಸಿದ್ಧವಾದ ಪದ್ಧತಿಯಿಂದ ನೀವು ನಿಮ್ಮ ಮುಖವನ್ನು ೧೫-೨೦ ವರ್ಷ ಯೌವನಸ್ಥವಾಗಿ ಮಾಡಬಹುದು. ಅಂದರೆ ನೀವು ೪೦-೪೫ ವರ್ಷದವರಾಗಿದ್ದರೆ ೨೦-೩೦ ವರ್ಷದವರಂತೆ ನಿಮ್ಮ ಮುಖವನ್ನು ಮಾರ್ಪಡಿಸಬಹುದು. ಆಗ ನಿಮ್ಮ ಮುಖದ ನಿರಿಗಳು ಮಾಯವಾಗಿ, "ಏಂಬೆ ಹಣ್ಣಿನಂತೆ" ಹೊಳೆಯುವ ಕಾಂತಿಯುಕ್ತವಾದ "ಚರ್ಮ" ಯುಳ್ಳವರಾಗುವಿರಿ. ಆದರಿಂದ ನಿಮ್ಮ ಮುಖ ಲಕ್ಷಣ ಬದಲಾಗುವದೂ ಇಲ್ಲ. ತಜ್ಞ ಡಾಕ್ಟರರ ಕೈಯಲ್ಲಿ ಈ ಮುಖಚಿಕಿತ್ಸೆ ಒಂದು ಚಿಲ್ಲರೆ ಶಸ್ತ್ರಕ್ರಿಯೆಯೆನಿಸುವದು. ಬರಿ ಹದಿನೈದು ದಿನಗಳಲ್ಲಿ ನೀವು "ಯುವತಿ"ಯರಾಗಿ ಆಸ್ಪತ್ರೆಯಿಂದ ಹೊರಬರುವಿರಿ.

ಚಿಕಿತ್ಸಾ ವಿಧಾನ

ಇದು ಹೇಗೆ ಸಾಧಿಸಲ್ಪಡುವದೆಂಬ ಬಗ್ಗೆ ನಾಲ್ಕು ಮಾತು ಹೇಳಿದರೆ ನೀವು ಬೇಸರಗೊಳ್ಳಲಿಕ್ಕಿಲ್ಲವೆಂದು ನಂಬಿಕೆ. ಒಂದು ದಿನ ನೀವು ನಿಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವಿರಿ. ಆಗ ವೃದ್ಧ ದಶರಥನು ತನ್ನ ಕಿವಿ ಬಳಿ ಕೂದಲು ನರೆತುದನ್ನು ಕಂಡು ಬೆಚ್ಚಿದಂತೆ ನೀವೂ ಬೆಚ್ಚುವಿರಿ. ನಿಮ್ಮ ತುಟಿಯ ಕೆಂಪು ಹಾರಿಹೋಗಿದೆ, ಮುಖದಲ್ಲಿ ನಿರಿಗಳು ಬಿದ್ದಿವೆ. ಚಿಂತೆ, ಜೀವನದಲ್ಲಿ ಜುಗುಪ್ಸೆ ಮತ್ತೂ ಇನ್ನೂ ಅನೇಕ ಭಾವನೆಗಳು ನಿಮ್ಮ ಮನಸ್ಸನ್ನು ಆವರಿಸುತ್ತವೆ. ಜೀವನದ ಸುಖದ ದಿನಗಳು ಮುಗಿದವೆಂದು ಚಿಂತಿಸಿ ಕೊರಗತೊಡಗುವಿರಿ....

ಆಗ ನಿಮಗೆ ಯಾರೋ ಹೇಳುವರು—ಈ ಪ್ಲಾಸ್ಟಿಕ್ ಸರ್ಜನ್ನರ ಕೈವಾಡದ ಮಹಿಮೆಯನ್ನು. ನೀವು ಒಬ್ಬ ತಜ್ಞನ ಕಡೆ ಹೋಗುವಿರಿ.

ಅವನು ನಿಮ್ಮನ್ನು ತನ್ನ ಶಲ್ಯತಂತ್ರಾಲಯಕ್ಕೆ ಕರೆದೊಯ್ಯುವ. ದಾದಿ ನಿಮಗೊಂದು ಇಂಜಕ್ಷನ್ ಮತ್ತು ನುಂಗುವ ಒಂದೆರಡು ಗುಳಿಗೆಗಳನ್ನು ಕೊಡುವಳು.

ಆ ಮೇಲೆ ಎಲ್ಲವೂ ನಿಮಗೆ ಸುಖಸ್ವಪ್ನದಂತೆ ಭಾಸವಾಗುವದು. ಎಲ್ಲವೂ ಕಣ್ಮುಂದೆಯೆ ನಡೆಯುತಿದ್ದರೂ ಮತ್ತು ನಿಮಗೆ ಅದು ತಿಳಿಯುತಿದ್ದರೂ ಯಾವ ಬಗೆಯ ನೋವೂ ನಿಮಗೆ ಅನಿಸುವದಿಲ್ಲ. ಅದು ಆ ಇಂಜಕ್ಷನ್ ಮಹಿಮೆ. ಶಸ್ತ್ರ ಚಿಕಿತ್ಸೆಯ ಕಾಲಕ್ಕೆ ನಿಮ್ಮ ಪಾಲಿಗೆ ಕಾಲಪ್ರವಾಹವೇ ನಿಂತು ಹೋಗಿರುತ್ತದೆ.

ಎರಡೂವರೆ ತಾಸುಗಳ ನಂತರ ನೀವು ಮುಖದಲ್ಲಿ ಪಟ್ಟಿ ಬ್ಯಾಂಡೇಜುಗಳ ಸಹಿತ ಎಚ್ಚರಿಗೆ ಬರುವಿರಿ. ಮರುದಿನ ಮನೆಗೆ ಹೋಗುವಿರಿ. ನಾಲ್ಕು ದಿನಗಳ ನಂತರ ತಿರುಗಿ ಬಂದು ಬ್ಯಾಂಡೇಜುಗಳಿಂದ ಮುಕ್ತರಾಗುವಿರಿ. ಮತ್ತೆ ನಾಲ್ಕು ದಿನಗಳಲ್ಲಿ ಕೆಲ ಹೊಲಿಗೆಗಳನ್ನು ಬಿಚ್ಚುವರು. ಹದಿನಾಲ್ಕು ದಿನಗಳೊಳಗೆ ಎಲ್ಲ ಹೊಲಿಗೆಗಳನ್ನು ಬಿಚ್ಚಿಬಿಡುವರು. ಮುಖದ ಬಾವೆಲ್ಲವೂ ಪೂರ್ತಿ ಇಳಿದುಹೋಗಿರುವದು. ಆ ಮೇಲೆ ನಿಮ್ಮ ಎರಡೂ ತುಟಿಗಳನ್ನು ಆಪರೇಶನ್ ಮಾಡಲಾಗುವದು.

ಮತ್ತೊಂದು ವಾರದಲ್ಲಿ ನೀವು ನಿಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವಿರಿ. ಆಗ ನೀವೇ ನಿಮ್ಮ ಕಣ್ಣುಗಳನ್ನು ನಂಬಲಾರಿರಿ. ಹತ್ತಿಪ್ಪತ್ತು ವರ್ಷಗಳ ಹಿಂದೆ ನವವಧುವಾಗಿ ನೀವು ನಿಮ್ಮ ಪತಿಯೊಡನೆ ಬಂದು ನೆಲಸಿದಾಗಿನ ದಿನಗಳು ನೆನಪಿಗೆ ಬರುವವು....

ಚರ್ಮ ಸಾಲಿಯುವರು!

ನಿಮ್ಮ "ಸ್ವಪ್ನ ಕಾಲ"ದಲ್ಲಿ ಏನು ನಡೆಯಿತು? ನಿಮ್ಮ ಕಿವಿಯ ಮೇಲ್ಭಾಗದಲ್ಲಿ-ಕೂದಲ ಪರಿಧಿಯ ಒಳಗಡೆ ಡಾಕ್ಟರರು ತಮ್ಮ ಚೂರಿಯಿಂದ ಒಂದು ಗುರುತು ಮಾಡುವರು. ಅಲ್ಲಿಂದ ನಿಮ್ಮ ಕಿವಿಯ ಮುಂದೆ ಅರ್ಧ ಚಂದ್ರಾಕೃತಿಯಲ್ಲಿ ಹಣೆಯ ಮೇಲ್ಭಾಗದಲ್ಲಿ ಕೂದಲ ಪರಿಧಿಯೊಳಗಿಂದಲೆ ಚರ್ಮವನ್ನು ಸೀಳುತ್ತ ಇನ್ನೊಂದು ಕಿವಿಯ ವರೆಗೂ ಹೋಗುವರು. ಬಳಿಕ ಇನ್ನೊಂದು ಆಯುಧದಿಂದ ಸುತ್ತಲೂ ಚರ್ಮವನ್ನು ಆ ಗುರುತಿನ ಗುಂಟ ಸ್ವಲ್ಪ ಸ್ವಲ್ಪ ಸುಲಿಯುತ್ತ ಹೋಗುವರು. ಆ ಮೇಲೆ ಚರ್ಮವನ್ನು ಕಿವಿಯ ಕಡೆ ಮತ್ತು ತಲೆಬುರುಡೆಯ ಕಡೆ ಸ್ವಲ್ಪ ಸ್ವಲ್ಪ ಎಳೆದು, ಅಲ್ಲಲ್ಲಿ ಒಂದೊಂದು ಹೊಲಿಗೆ ಹಾಕುವರು. ಕೋಟನ್ನು ಮೈಗೆ ನೀಟಾಗಿ ಹಿಡಿಯುವಂತೆ ಮಾಡಲು ಸಿಂಪಿಗನು ಕ್ಲಿಪ್ಪುಗಳನ್ನು ಹಾಕಿ ನೋಡಿ ನೋಡಿ ಓರಣಗೊಳಿಸುವಂತೆ ಚರ್ಮ ಸುಗಮವಾಗಿಯೂ ಮುಖಲಕ್ಷಣ ಮಾಟವಾಗಿಯೂ ಆಗುವವರೆಗೆ ತಾತ್ಪೂರ್ತಿಕ ಹೊಲಿಗೆಗಳನ್ನು ಹಾಕುವರು. ಆ ಮೇಲೆ ಹೆಚ್ಚಾದ ಚರ್ಮದ ತುಣುಕುಗಳನ್ನು ಕತ್ತರಿಸಿ ತೆಗೆದು ಯೋಗ್ಯ ಸ್ಥಾನದಲ್ಲಿ ಚರ್ಮವನ್ನು ಜಾಗರೂಕತೆಯಿಂದ ಹೊಲಿದು ಬ್ಯಾಂಡೇಜ ಕಟ್ಟುವರು. ಈ ಹೊಲಿಗೆಗಳೆಲ್ಲವೂ ಕೂದಲಂಚಿನ ಒಳಗಡೆಗೇ ಇರುವದರಿಂದ, ಯಾವ ಗಾಯದ ಕಲೆಗಳೂ ಕಾಣಿಸುವದಿಲ್ಲ. ಗಾಯ ಮಾಯ್ದು, ಅದರ ಮೇಲೆ ಕೂದಲು ಬೆಳೆಯಿತೆಂದರೆ ಮತ್ತೆ ನಿಮ್ಮ ಈ ಮುಖ ಚಿಕಿತ್ಸೆಯ ಸುಳಿವೇ ಯಾರಿಗೂ ಹತ್ತುವದಿಲ್ಲ.

ಹೀಗೆ ಪುನರುಜ್ಜೀವಿತ ಯೌವನವಾದ ನಿಮ್ಮ ಮುಖವು ಕಾಲ ಕಳೆಯುತ್ತ ತಿರುಗಿ ಮುದಿಯಾಗತೊಡಗುವದಂಬದೇನೊ ನಿಜ. ಆದರೂ ಒಂದೇ ವ್ಯಕ್ತಿ ಎರಡು ಮೂರು ಬಾರಿ ಚಿಕಿತ್ಸೆ ಮಾಡಿಸಿಕೊಳ್ಳಲು ಯಾವ ಆತಂಕವೂ ಇಲ್ಲ.

ಸದ್ಯಕ್ಕೆ ಇಂಥ ಶಸ್ತ್ರಚಿಕಿತ್ಸೆ ಮಾಡಬಲ್ಲ ತಜ್ಞರು ಯುರೋಪು ಅಮೇರಿಕೆಗಳಂಥ ಮುಂದುವರಿದ ದೇಶಗಳಲ್ಲೂ ಕಡಿಮೆ ಜನರೇ ಇದ್ದಾರೆ. ಭಾರತದಲ್ಲಂತೂ ಇಲ್ಲವೇ ಇಲ್ಲವೆಂದರೂ ಸಲ್ಲುವದು. ಆದರೆ ಕಾಲಾಂತರದಲ್ಲಿ ಇಲ್ಲಿಯ ಯೌವನಾಕಾಂಕ್ಷಿಗಳ ಮುಖಗಳಿಗೂ "ಕಾಯಕಲ್ಪ"ದ ಲಾಭ ದೊರಕಿಯೇ ದೊರಕುವದೆಂಬುದು ಖಂಡಿತ.

ಬ್ರಹ್ಮದೇಶದಲ್ಲಿ ಕಳೆದ ವರ್ಷ ನಡೆದ ದುರಂತದಲ್ಲಿ ೩೦ ಸಾವಿರ ಜನ ಕೊಲ್ಲಲ್ಪಟ್ಟರು. ೨೫ ಕೋಟಿ ರೂಪಾಯಿಗಳ ಸರಕು ನಾಶವಾಯಿತು ಎಂದು ಅಲ್ಲಿಯ ಮುಖ್ಯಮಂತ್ರಿಗಳು ಹೇಳಿದರು.

ಸಿಗರೇಟಿಗೆ ಆಹುತಿ

ಅಮೇರಿಕೆಯ ಜನರು ದಿನಕ್ಕೆ ೧೦೦ ಕೋಟಿ ಸಿಗರೇಟು ಸೇದುವರೆಂದು ಹಿಂದೊಮ್ಮೆ ತಿಳಿಸಲಾಗಿತ್ತು. ಈಗ ಈ ಸಿಗರೇಟುಗಳ ಸಂಬಂಧದಲ್ಲಿ ಎರಿಕ್ ಹಟನ್‌ರೆಂಬವರು ಹೊಸದಾಗಿ ಕೆಲ ಅಂಕೆ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಸಿಗರೇಟುಗಳ ದೆಸೆಯಿಂದ ದಿನವೊಂದಕ್ಕೆ ೩೩ ಜನ ಅಮೇರಿಕನ್ನರು ಸಾಯುತ್ತಾರೆ ಮತ್ತು ಮತ್ತೆ ೭೦ ಜನರು ಅಂಗಹೀನರಾಗುತ್ತಾರೆ. ಸಿಗರೇಟು ಸೇದುವದರಿಂದಾಗುವ ದುಷ್ಪರಿಣಾಮಗಳಿಂದ ಸಾಯುವವರ ಸಂಖ್ಯೆ ಇದರಲ್ಲಿ ಸೇರಿಲ್ಲ. ಕೇವಲ ಸಿಗರೇಟಿನಿಂದಾಗುವ ಅಪಘಾತಗಳು ತೆಗೆದುಕೊಳ್ಳುವ ಆಹುತಿ ಇಷ್ಟು. ಸಿಗರೇಟು ಸೇದುವವರು ನಿರ್ಲಕ್ಷ್ಯದಿಂದ ಅದರ ಕೊನೆಯ ತುಣುಕನ್ನು ಬೆಂಕಿ ಸಹಿತವಾಗಿ ಕಂಡಕಂಡಲ್ಲಿ ಒಗೆಯುವ ಮೂಲಕ ಉಂಟಾಗುವ ಬೆಂಕಿ ಅನರ್ಥಗಳಲ್ಲಿ ಇಷ್ಟು ಜನರಿಗೆ ಪ್ರಾಣ ಅಂಗ ಹಾನಿಯಾಗುತ್ತದೆ. ಇದಕ್ಕೆ ಸಿಗರೇಟು ಸೇದುವವರ ದುರ್ಲಕ್ಷ್ಯವೂ ಸಿಗರೇಟು ಕಂಪನಿಯವರ ದುರ್ಬುದ್ಧಿಯೂ ಕಾರಣವೆಂದು ಹಟನ್ನರ ಹೇಳಿಕೆ.

ಕೃಷ್ಣವಸ್ತು

ರಾಯಲ್ ಏರ್‌ಫೋರ್ಸಿನ ಅಧಿಕಾರಿಗಳು ಆಫ್ರಿಕದ ಮೊಂಬಾಸಾ ಬಂದರಿನ ಹತ್ತಿರ ಒಂದು ನೀರೆತ್ತನ್ನು ಕಂಡರು. ಅದಕ್ಕೆ ಎತ್ತಿನಂಥ ತಲೆಯಿದೆ. ಬಣ್ಣ ಅಮಾವಾಸ್ಯೆಯ ಚಂದ್ರನದು, ಆಕಾರ ಘಟೋತ್ಕಚನಂತೆ. ಅದನ್ನು ಹಿಡಿಯಲು ಅಧಿಕಾರಿಗಳು ಕೆಲ ದೂರ ಅಟ್ಟಿ ಓದಿಸಿಕೊಂಡು ಹೋದರು; ಆದರೆ ಸಫಲಪ್ರಯತ್ನರಾಗಲಿಲ್ಲ. ಆಫ್ರಿಕನ್ನರಿಗೆ ಅದು ಚಿರಪರಿಚಿತ ಜಲಚರ-ಅದರ ಹೆಸರು ಕಿತುನ್ಯಾಸಿ-ಅಂದರೆ ಕೃಷ್ಣವಸ್ತು ಎಂದು.

ಹಾವುಗಳ ಉಪಯೋಗ

ಆಸ್ಟ್ರೇಲಿಯದಲ್ಲಿ ಹಾವುಗಳಿಗೆ ಬಹಳ ಬೇಡಿಕೆಯಿದೆ. ಅವುಗಳನ್ನು ಇಲಿ ಹಿಡಿಯಲು ಅಲ್ಲಿಯವರು ಬಾಡಿಗೆಗೆ ಒಯ್ದು ಮೂಷಕನಾಶ ಮುಗಿದ ಬಳಿಕ ಮಾಲಿಕನಿಗೆ ತಿರುಗಿ ಕೊಡುತ್ತಾರೆ. ಹೊಟೇಲು ಸಿನೆಮ ಮುಂತಾದ್ದಲ್ಲಿ ಕೆಲವರು ಅವನ್ನು ಕಾಯಂ ಬಳಕೆಗೆಂದು ಕೊಂಡಿಟ್ಟಿರುವರಂತೆ!

ಕ್ಷಯರೋಗ ನಿವಾರಣೋಪಾಯ


ಬಿ. ಸಿ. ಜಿ. ವ್ಯೆಲಿ ಚುಚ್ಚುವದಕ್ಕೆ ದೊರೆತ ಯಶ

ಬಡತನದ ಬಳುವಳಿಯಾದ ಕ್ಷಯರೋಗ ಭಾರತದಲ್ಲಿ ವೇಗವಾಗಿ ಹಬ್ಬುತಿರುವ ಸಂಗತಿ ಎಲ್ಲರಿಗೂ ಗೊತ್ತಿದೆ. ಸೋಂಕುರೋಗವಾದ ಇದನ್ನು ಪರಿಹರಿಸಲು ನಾನಾ ವಿಧವಾದ ಔಷಧೋಪಚಾರಗಳು ಉಪಯೋಗಿಸಲ್ಪಡುತಿದ್ದರೂ ಒಮ್ಮೆ ಅದು ನಾಟಿತೆಂದರೆ ಮನುಷ್ಯ ಮತ್ತೆ ಆಜೀವನ ಸಂಶಯಚಿತ್ತನಾಗಿ ಬಾಳಬೇಕಾಗುವದು. ಇದನ್ನು ಅಂಟುವ ಮೊದಲೇ ದೂರದಿಂದ ನಿವಾರಿಸಲು ಬಿ. ಸಿ. ಜಿ. ಎಂಬ ಮದ್ದನ್ನು ಚುಚ್ಚುವದು ತುಂಬ ಪ್ರಯೋಜನಕಾರಿಯಾಗಿದೆಯೆಂದೂ ಈ ವ್ಯೆಲಿ ಚುಚ್ಚುವದರಿಂದ ದೇಹಕ್ಕೆ ಯಾವ ಬಗೆಯ ಹಾನಿಯೂ ಒದಗುವದಿಲ್ಲೆಂದೂ ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಡಾ. ಬಿ. ಸಿ. ರಾಯರೇ ಮೊದಲಾದ ಹನ್ನೆರಡು ಪ್ರಮುಖ ಭಾರತೀಯ ಡಾಕ್ಟರರು ಒಂದು ಹೇಳಿಕೆ ಹೊರಡಿಸಿದ್ದು ಭಾರತ ಸರಕಾರದ ಆರೋಗ್ಯ ಖಾತೆಯ ಪ್ರಮುಖರು ಕೂಡ ಅದೇ ಅಭಿಪ್ರಾಯದವರಾಗಿದ್ದಾರೆ.

ಈ ಬಿ. ಸಿ. ಜಿ. ವ್ಯೆಲಿ ಮದ್ದು (ಬ್ಯಾಸಿಲಸ್ ಕಲ್ಮೆಟ ಗೆರಿನ್) ಸಿಡುಬಿನ ವ್ಯೆಲಿ ಮದ್ದಿನಂಥದೇ ಒಂದು ಔಷಧ. ಅದು ಪ್ಯಾರೀಸಿನ ಪಾಶ್ಚರ ಸಂಸ್ಥೆಯ ಕಾಲ್ಮೆಟರೆಂಬವರಿಂದ ಕಂಡುಹಿಡಿಯಲ್ಪಟ್ಟಿತು. ೧೩ ವರ್ಷಗಳ ಶ್ರಮದ ನಂತರ ೧೯೨೧ ರಲ್ಲಿ ಮೊದಲನೆ ಬಾರಿ ಮನುಷ್ಯನ ಮೇಲೆ ಪ್ರಯೋಗಿಸಲ್ಪಟ್ಟ ಇದು ಯುರೋಪಿನ ಡೆನ್ಮಾರ್ಕ, ನಾರ್ವೇ, ಸ್ವೀಡನ್ ದೇಶಗಳಲ್ಲಿ ೧೦ ಲಕ್ಷ ಜನರಿಗೆ ಚುಚ್ಚಲ್ಪಟ್ಟದಲ್ಲದೆ ಅಮೇರಿಕೆ, ಕೆನಡಾ, ರಶಿಯಾ ಮೊದಲಾದೆಡೆಗಳಲ್ಲಿಯೂ ಈಗ ಪ್ರಚುರಗೊಂಡು ತನ್ನ ಪರಿಣಾಮಕಾರಿತ್ವವನ್ನು ಸಿದ್ಧಗೊಳಿಸಿದೆ. ಜಗತ್ತಿನಲ್ಲಿ ಈಗ ಕನಿಷ್ಠ ೧ ಕೋಟಿ ಜನರು ಈ ವ್ಯೆಲಿಯನ್ನು ಚುಚ್ಚಿಸಿಕೊಂಡವರಿದ್ದಾರೆ.

ಎಷ್ಟೋ ವಿರೋಧಾಭಿಪ್ರಾಯವಿದ್ದರೂ ಸಿಡುಬು ಮೊದಲಾದ ಸೋಂಕು ರೋಗಗಳು ವ್ಯೆಲಿ ಚುಚ್ಚುವ ಮೂಲಕ ಹಿಡಿತಕ್ಕೆ ಬಂದಂತೆ, ಈ ಬಿ. ಸಿ. ಜಿ. ಚುಚ್ಚು ಮದ್ದಿನ ವಿಸ್ತೃತವಾದ ಚುಚ್ಚುವಿಕೆಯಿಂದ ಕ್ಷಯ ರೋಗವನ್ನು ಹಿಡಿತಕ್ಕೆ ತರಲು ಎಷ್ಟೋ ಸಹಾಯವಾಗುವದೆಂದು ಮೇಲೆ ಹೇಳಿದ ಡಾಕ್ಟರವರ್ಯರ ಅಭಿಪ್ರಾಯ. ಆದುದರಿಂದ ಸಿಡುಬಿನ ವಿರುದ್ಧ ವ್ಯೆಲಿ ಚುಚ್ಚುವಂತೆ ಈ ಕ್ಷಯ ಪ್ರತಿರೋಧಕ ಚುಚ್ಚುಮದ್ದನ್ನೂ ವಿಶಾಲ ಪ್ರಮಾಣದಲ್ಲಿ ದೇಶದಲ್ಲೆಲ್ಲ ಹಂಚುವ ಬಗ್ಗೆ ಭಾರತ ಸರಕಾರದವರು ಯೋಜನೆಗಳನ್ನು ಮಾಡುವವರಿದ್ದಾರೆ.

ಆದರೆ ಸಾಧಕವೂ ಅಬಾಧಕವೂ ಆದ ಈ ಚುಚ್ಚುಮದ್ದಿನ ಪ್ರಯೋಗವೊಂದರಿಂದಲೇ ಕ್ಷಯರೋಗವನ್ನು ನಾಮಶೇಷ ಮಾಡುವದು ಸಾಧ್ಯವಿಲ್ಲೆಂದು ಸರಕಾರವೂ ಡಾಕ್ಟರರೂ ಒಪ್ಪಿಕೊಳ್ಳುತ್ತಾರೆ. ಮದ್ದು ಚುಚ್ಚಿಸಿಕೊಂಡವನನ್ನು ಉಳಿದವರಿಂದ ದೂರ ಇಡುವ ಅವಶ್ಯಕತೆ ಕೂಡ ಇಲ್ಲವಾದರೂ ಇದು ನಿವಾರಕ ಅಥವಾ ಪ್ರತಿರೋಧಕ ಎಂದರೆ ರೋಗ ಸೋಂಕುವ ಪೂರ್ವದಲ್ಲೆ ಕೈಕೊಳ್ಳಲ್ಪಡಬೇಕಾದ ಉಪಾಯವೆಂಬದನ್ನು ಗಮನದಲ್ಲಿಡಬೇಕು. ಕ್ಷಯರೋಗವನ್ನು ಪೂರ್ತಿ ಓಡಿಸಬೇಕಾದರೆ ಉತ್ತಮ ಆಹಾರ, ಹವೆಯೇ ಮೊದಲಾದ ಆದರ್ಶ ಜೀವನ ಪರಿಸ್ಥಿತಿಗಳೇ ಅತ್ಯವಶ್ಯ. ಆದರೂ ರೋಗದ ಹಬ್ಬುಗೆಯನ್ನು ತಡೆಯಲು ಸಮರ್ಥವಾದ ಔಷಧವೆಂದು ಸಿಡುಬಿನ ವ್ಯೆಲಿ ಚುಚ್ಚುವದು ಹೇಗೆ ಇಂದು ರೂಢಿಬಿದ್ದು ಹೋಗಿದೆಯೋ ಹಾಗೆಯೇ ಇದೂ ಪ್ರಚಾರಕ್ಕೆ ಬಂದರೆ ಹಿತವೆಂದು ಭಾವಿಸಲಾಗಿದೆ.



ಅವರೊ ಅನ್ಸನ್ ಅಂಬೀಕ ವಿಮಾನಗಳು. ಭಾರತದಲ್ಲಿ ವೈಮಾನಿಕರ ತರಬೇತಿಗಾಗಿ ಬ್ರಿಟನ್ನಿನ ಹನ್ನೆರಡು ಅವರೊ ಅನ್ಸನ್ ಟ್ರೇನರು ವಿಮಾನಗಳಿಗಾಗಿ ಭಾರತ ಸರಕಾರ ಆರ್ಡರು ಕೊಟ್ಟಿದ್ದು ಅವು ಬೇಗನೆ ಇಲ್ಲಿ ಬರುವವು. ಬ್ರಿಟನ್ನಿನಲ್ಲಿ ತಯಾರಾದ ಆಕ್ಸ್‌ಫರ್ಡ ವಿಮಾನ ಹಾಂಗರಿನಲ್ಲೊಂದಾದ ಕೆಲ ಅನ್ಸನ್ ವಿಮಾನಗಳನ್ನು ಚಿತ್ರದಲ್ಲಿ ಕಾಣಬಹುದು.

"ಅಹಿಂಸೆಯಿಂದ ಉದ್ಭವಿಸಿದ್ದು"

ಶ್ರೀ. ಇ. ಡಬ್ಲ್ಯು. ಆರ್ಯನಾಯಕಂ ಅವರು "ಸೇವಾಗ್ರಾಮದಲ್ಲಿ ನಯೀ ತಾಲೀಮು" ಎಂಬ ಒಂದು ಚಿಕ್ಕ ಚಿತ್ರಮಯ ಪಹಿಯನ್ನು ಪ್ರಕಟಿಸಿದ್ದಾರೆ. ಅದಕ್ಕೆ "ಜೀವನಕ್ಕಾಗಿ ಶಿಕ್ಷಣ" ಎಂಬ ಮುನ್ನುಡಿಯಿದೆ. ಅದರಲ್ಲಿ ಎತ್ತಿಕೊಳ್ಳಲಾದ ಗಾಂಧೀಜಿಯ ವಾಕ್ಯಗಳಲ್ಲಿ ಕೆಳಗಿನದೊಂದು:

"ಅಂತರ್ಜಾತೀಯ ಹಾಗೂ ಅಂತರ್ರಾಷ್ಟ್ರೀಯ ಹೋರಾಟಗಳನ್ನು ಪರಿಹರಿಸುವ ಅಪೇಕ್ಷೆಯಿದ್ದರೆ, ನಾನು ಪ್ರತಿಪಾದಿಸಿದಂಥ ಶಿಕ್ಷಣ ಪದ್ಧತಿಯಲ್ಲಿ ಈಗಿನ ಎಳೆಯರ ಪೀಳಿಗೆಯನ್ನು ಪಳಗಿಸುವ ಮೂಲಕ ಶುದ್ಧ ಹಾಗು ಬಲಿಷ್ಠ ನೆಲಗಟ್ಟನ್ನಿಟ್ಟು ನಾವು ಕಾರ್ಯಾರಂಭ ಮಾಡಬೇಕು. ಆ ಯೋಜನೆ ಅಹಿಂಸೆಯಿಂದ ಉದ್ಭವಿಸಿದ್ದು."

ನನ್ನ ಅಭಿಪ್ರಾಯದಲ್ಲಿ ಗಾಂಧೀಜಿಯ ಎಲ್ಲ ಚಟುವಟಿಕೆಗಳಿಗೂ ಕಾರ್ಯಕ್ರಮಗಳಿಗೂ ಆಧಾರಭೂತವಾದುದೆಂದರೆ ಮೇಲಿನ ಕೊನೆಯ ವಾಕ್ಯ. ನಮ್ಮ ಕೆಲಸಕಾರ್ಯಗಳೂ ಅದನ್ನೇ ಆಧರಿಸಿರಬೇಕು.

ಸತ್ಯ ಅಹಿಂಸೆಗಳ ತಳಹದಿಯ ಮೇಲೆ ನಿಂತ ಸಮಾಜವನ್ನು ಕಟ್ಟುವದೇ ನಮ್ಮ ಧ್ಯೇಯವೆಂದೂ ರಚನಾತ್ಮಕ ಕಾರ್ಯಕ್ರಮದ ವಿವಿಧ ಅಂಗಗಳು ಆ ಧ್ಯೇಯದ ಸಾಧನಗಳೆಂದೂ ನಾವು ಎಷ್ಟೋ ಬಾರಿ ಹೇಳಿದ್ದೇವೆ. ಹಾಗೆ ಹೇಳುವಾಗ, ರಚನಾತ್ಮಕ ಕಾರ್ಯಕ್ರಮದ ಅಂಗಗಳು ಸಾಂಗವಾಗಿ ಆಚರಣೆಗೆ ತರಲ್ಪಟ್ಟರೆ, ಶೋಷಣೆ, ಅಸಮಾನತೆ ಮತ್ತು ಧರ್ಮಮೂಲ, ಜನಾಂಗಮೂಲ, ಪಂಥಮೂಲ ಹಾಗು ಧನಮೂಲವಾದ ಎಲ್ಲ ಜಗಳಗಳು ಅಸಂಭವವಾಗುವವು ಮತ್ತು ಹೀಗೆ ಸತ್ಯ ಅಹಿಂಸೆಗಳ ಮೇಲೆ ನಿಂತ ಸಮಾಜ ಅಸ್ತಿತ್ವಕ್ಕೆ ಬರುವದೆಂದು ನಾವು ಭಾವಿಸಿಕೊಳ್ಳುವಂತಿದೆ.

ಇವರಲ್ಲಿ ವಿಚಾರಣೀಯವಾದ ಪ್ರಶ್ನೆಗಳು ಇಂತಿವೆ: ಸ್ವತಃ ಗಾಂಧೀಜಿಯವರು ಸತ್ಯ ಅಹಿಂಸೆಗಳೇ ತಮ್ಮ ಜೀವನದ ಮೂಲ ತತ್ವಗಳೆಂಬ ತೀರ್ಮಾನಕ್ಕೆ ಹೇಗೆ ಬಂದರು? ಚರಕ ಮತ್ತು ಗ್ರಾಮೋದ್ಯೋಗಗಳ ಹಾಗು ಅಸ್ಪೃಶ್ಯತಾನಿವಾರಣೆಯ ಪರಿಣಾಮವಾಗಿ ಅಸತ್ಯ, ಹಿಂಸೆ, ಶೋಷಣೆ ಮೊದಲಾದವುಗಳು ಸಮಾಜದಿಂದ ಹೇಗೆ ತೊಡೆದು ಹೋಗುವವು? ಭೂಮಿಯ ಮೇಲೆ ರಾಮರಾಜ್ಯವನ್ನು ಉಂಟುಮಾಡಲು ಈ ಉಪಾಯಗಳೇ ಬೇಕೆಂದು ಗಾಂಧೀಜಿಗೆ ಹೇಗೆ ಹೊಳೆಯಿತು? ತಪ್ಪದೆ ನೂಲುವದು, ಕೈನೂಲಿನ ಖಾದಿಯನ್ನೇ ಧರಿಸುವದು, ಹಳ್ಳಿಯಲ್ಲಾದ ವಸ್ತುಗಳನ್ನೇ ಬಳಸುವದು, ಪಾಯಖಾನೆಗಳನ್ನು ಬಳಿಯುವದು, ರಸ್ತೆಗಳನ್ನು ಉಡುಗುವದು, ಜಾತಿಭೇದಗಳನ್ನು ಲೆಕ್ಕಿಸದೆ ಊಟಮಾಡುವದು, ಮಾದಕ ಪದಾರ್ಥಗಳನ್ನು ವರ್ಜಿಸುವದು, ತಪ್ಪದೆ ಪ್ರಾರ್ಥನೆ ಮಾಡುವದು– ಇವೆಲ್ಲ ಆಚಾರಗಳು ಎಷ್ಟುಮಟ್ಟಿಗೆ ನಮ್ಮಲ್ಲಿರುವ ಅಸತ್ಯ, ಹಿಂಸೆ, ಸ್ವಾರ್ಥಗಳನ್ನು ಕಡಿಮೆ ಮಾಡಿವೆ? ಆ ಮೂಲಕ ಅಂತರಾತ್ಮದೊಡನೆ, ನೆರೆಹೊರೆಯವರೊಡನೆ, ಸಹಯೋಗಿಗಳೊಡನೆ, ವಿರೋಧಿಗಳೊಡನೆ ಮತ್ತು ಉಳಿದವರೊಡನೆ ನಮ್ಮ ವರ್ತನೆ ಮೊದಲಿಗಿಂತ ಪ್ರೇಮಪೂರ್ವಕವೂ ಶಾಂತಿಪರವೂ ಆಗಿದೆಯೆ ಮತ್ತು ಎಷ್ಟಾಗಿದೆ? ರಚನಾತ್ಮಕ ಕಾರ್ಯಕ್ರಮದ ಯಾವುದೊಂದು ವಿಶಿಷ್ಟ ಅಂಗದ ಬಗೆಗಿರುವ ನಮ್ಮ ಉತ್ಸಾಹಾತಿರೇಕದ ಫಲವಾಗಿಯೆ, ಆ ಬಗ್ಗೆ ವಿರೋಧವುಳ್ಳ ಅಥವಾ ನಿರುತ್ಸಾಹಿಗಳಾದವರನ್ನು ಕೆಲ ವೇಳೆ ಅಸಹನೆ ತಿರಸ್ಕಾರಗಳಿಂದ ನೋಡುವ ಬುದ್ಧಿ ನಮಗೆ ಬಂದಿಲ್ಲವೆ? ಅರ್ಥಾತ್ ರಚನಾತ್ಮಕ ಕಾರ್ಯಕ್ರಮದಿಂದ ಸತ್ಯ ಅಹಿಂಸೆಗಳ ಉದ್ಭವವೋ ಅಥವಾ ಇವುಗಳಿಂದ ಅದರ ಉದ್ಭವವೋ?

ಮೊದಲನೆಯ ಉತ್ತರವೇ ಸರಿಯೆಂದು ನಾವು ಸಾಮಾನ್ಯವಾಗಿ ಕಲ್ಪಿಸಿಕೊಂಡಿದ್ದೇವೆ. ಗಾಂಧೀಜಿಯ ಮಾತು ಹಾಗಲ್ಲ. ಈ ಯೋಜನೆ ಅಹಿಂಸೆಯಿಂದ ಉದ್ಭವಿಸಿದ್ದು, ಎಂದು ಅವರು ನಿಚ್ಚಳವಾಗಿ ಹೇಳಿದ್ದಾರೆ. ಅವರು ಸತ್ಯ ಅಹಿಂಸೆಗಳ ಅನನ್ಯಶರಣರು. ಆದರಿಂದ ಆ ತತ್ವದೊಡನೆ ತಮ್ಮ ಜೀವನವನ್ನು ಹೊಂದಿಸಿಕೊಳ್ಳಲು ನಿಷ್ಕಾಮ ಪ್ರಯತ್ನಗಳನ್ನು ಮಾಡಿದರು. ಪ್ರತಿಯೊಂದು ಮಾನವೀ ಸಂಸ್ಥೆಯನ್ನೂ ಕರ್ಮವನ್ನೂ ಅವರು ಸತ್ಯ ಅಹಿಂಸೆಗಳ ಪುರುಷದಾಗಿ ಪರೀಕ್ಷಿಸುತ್ತಿದ್ದರು. ಶೋಷಣೆ, ಅಸಮಾನತೆ, ಪರರ ಬಗ್ಗೆ ಅನಾದರ, ಅಸತ್ತಿನ ವಿರುದ್ಧ ಅಪ್ರತೀಕಾರ, ಅಥವಾ ಪ್ರತೀಕಾರ ಮಾಡಿದರೂ ಸತ್ಯಮಯ ಅಹಿಂಸಾಮಯವಲ್ಲದ ಸಾಧನಗಳ ಪ್ರಯೋಗ, ಇವುಗಳನ್ನು ಆಧರಿಸಿದ ಜೀವನವನ್ನು ನಡೆಸಿದರೆ ತಮ್ಮ ತತ್ವಕ್ಕೆ ಅವಿಧೇಯರಾದಂತಾಗುವದೆಂದು ಅವರು ಕಂಡುಕೊಂಡರು. ಇದರ ಫಲವಾಗಿಯೆ ಅವರಿಗೆ ರಚನಾತ್ಮಕ ಕಾರ್ಯಕ್ರಮದ ವಿವಿಧಾಂಗಗಳು ಗೋಚರಿಸಿದವು, ಅಂತೆಯೆ ಭಾರತೀಯ ಸ್ವಾತಂತ್ರ್ಯದ ಅವಶ್ಯಕತೆಯೂ ಮನವರಿಕೆಯಾಯಿತು, ರಾಮರಾಜ್ಯ ಸ್ಥಾಪನೆಯ ವಿಚಾರವೂ ಹೊಳೆಯಿತು. ಅವರ ವಿವಿಧ ರಾಜಕೀಯ ಚಳವಳಿಗಳೂ ಅದರಿಂದಲೇ ಪ್ರೇರಿತವಾದವು.

ಅವರ ಅಸಹಕಾರವಿರಲಿ, ಅಧಿಕಾರಸ್ವೀಕಾರವೇ ಇರಲಿ, ಚರಕ, ಗ್ರಾಮೋದ್ಯೋಗಗಳೇ ಇರಲಿ, ಅಸ್ಪೃಶ್ಯತಾ ನಿವಾರಣೆ, ಜಾತೀಯ ಐಕ್ಯ, ಹಿಂದುಸ್ತಾನಿ, ಉದ್ಯೋಗ(?), ಶಿಕ್ಷಣ, ಗೋಸೇವೆ, ಅಥವಾ ಹೊಸಹೊಸ ಪ್ರಾರ್ಥನಾಪದ್ಧತಿಗಳೇ ಇರಲಿ– ಎಲ್ಲವೂ ಅವರ ಅಹಿಂಸೆಯಿಂದಲೆ ಉದ್ಭವಿಸಿದವು. ಯಾವುದಾದರೊಂದು ಅನ್ಯಾಯದ ವಿರುದ್ಧ ಅವರು ಪ್ರತೀಕಾರ ಕೈಕೊಂಡಾಗ ಕೂಡ, ಆ ಅನ್ಯಾಯಕ್ಕೆ ಗುರಿಯಾದವನ ಹಿತಕ್ಕಾಗಿ ಮಾತ್ರವಲ್ಲ, ಸ್ವತಃ ಅದನ್ನು ನಡೆಸುವವನ ಹಿತಕ್ಕೂ ಅದರ ನಿವಾರಣೆ ಅವಶ್ಯವೆಂದು ಮನವರಿಕೆ ಮಾಡಿಕೊಂಡಲ್ಲದೆ ಕಾರ್ಯಕ್ಕಿಳಿಯುತ್ತಿರಲಿಲ್ಲ. ಹೀಗೆ ಬ್ರಿಟಿಶರ ಆಳಿಕೆಯ ಮತ್ತು ವಿಭಜನೆಯ ವಿರುದ್ಧ ತಾವು ಪ್ರತಿಭಟಿಸಿದುದು ಕೂಡ ಸ್ವತಃ ಬ್ರಿಟಿಶರ ಮತ್ತು ಮುಸ್ಲಿಮರ ಹಿತಕ್ಕಾಗಿಯೆ ಎಂದು ಅವರು ಸಾರಬಲ್ಲವರಾದರು.

ಗಾಂಧೀಜಿಯಲ್ಲಿ ಮತ್ತು ಅವರ ತತ್ವ ಮತ್ತು ಕಾರ್ಯಕ್ರಮಗಳಲ್ಲಿ ಪೂರ್ಣ ವಿಶ್ವಾಸವೂ ಆದರವೂ ಉಳ್ಳ ಲಕ್ಷಾಂತರ ಜನರುಂಟು. ಆದರೆ ಅವರ ಎಲ್ಲ ಅಭಿಪ್ರಾಯಗಳನ್ನೂ ಅವರ ರಚನಾತ್ಮಕ ಕಾರ್ಯಕ್ರಮದ ಎಲ್ಲ ಅಂಗಗಳನ್ನೂ ಸ್ವೀಕರಿಸುವ ಧೈರ್ಯವುಳ್ಳವರು ವಿರಳ. ಅಂಥವರಲ್ಲಿಯೂ ತಮಗೆ ಒಪ್ಪಿಗೆಯಾದ ಯಾವುದಾದರೊಂದು ಅಂಗವನ್ನು ಕೂಡ ಆಚರಣೆಗೆ ತರಲು ಕೆಲಸಕ್ಕಿಳಿಯುವವರಂತೂ ತೀರ ವಿರಳ. ಗಾಂಧೀಜಿಯಲ್ಲಿ ಪ್ರೇಮವನ್ನೂ ಭಕ್ತಿಯನ್ನೂ ಇಟ್ಟು, ಅವರೊಡನೆ ದುಡಿದು, ಅವರ ಅನೇಕ ಸಂಸ್ಥೆಗಳನ್ನು ಬೆಳೆಸಿ, ಅವರ ಅನೇಕ ರೀತಿ ನೀತಿಗಳನ್ನು ಅನುಕರಿಸಿ, ಅವರಲ್ಲಿಯೂ ಅವರ ಮಾತುಗಳಲ್ಲಿಯೂ ಅವರು ಪ್ರತಿಪಾದಿಸಿದಯೋಜನೆಗಳಲ್ಲಿಯೂ ನಿಶ್ಚಲ ವಿಶ್ವಾಸವನ್ನಿರಿಸಿದವರೂ ನಮ್ಮಲ್ಲಿ ಹತ್ತಾರು ಜನರಿದ್ದಾರೆ. ಅವರ ಸತ್ಯ ಅಹಿಂಸೆಯೇ ಮೊದಲಾದ ಏಕಾದಶ ವ್ರತಗಳನ್ನೂ ನಾವು ಅಂಗೀಕರಿಸಿದ್ದೇವೆ. ಅಲ್ಲದೆ ಇವೆಲ್ಲವನ್ನು ನಾವು ಪ್ರಾಮಾಣಿಕ ಬುದ್ಧಿಯಿಂದ, ಪ್ರೀತಿಪೂರ್ವಕವಾಗಿ ಮಾಡಿದ್ದೇವೆ. ಹಣವಿದ್ದವರು ಅವರ ಆಜ್ಞೆಯನ್ನು ಶಿರಸಾವಹಿಸಿ, ನಮಗಾಗುವ ಕಷ್ಟನಷ್ಟಗಳನ್ನೆಣಿಸದೆ ಅವರನ್ನೂ ಅವರ ಪರಿವಾರವನ್ನೂ ಸಂತೋಷಗೊಳಿಸಲು ಸಾವಿರಗಟ್ಟಲೆ ರೂಪಾಯಿಗಳನ್ನು ವೆಚ್ಚಮಾಡಿದವು. ಹಲವರು ಅವರ ಸೇವೆಯಲ್ಲಿ ಇಲ್ಲವೆ ಅವರ ಸಂಸ್ಥೆಗಳನ್ನು ನಿರ್ವಹಿಸುವಲ್ಲಿ ನಮ್ಮ ಜೀವನವನ್ನೆ ದಾಸರಂತೆ ಸವೆಸಿದವು. ಆದರೂ ನಾವು ನಮ್ಮನ್ನೆ ಪರೀಕ್ಷಿಸಿಕೊಂಡರೆ, ಅವರ ಜೀವನದ ಪ್ರತಿಯೊಂದು ಅಂಗೋಪಾಂಗದಲ್ಲಿ ಸ್ವಯಂಪ್ರಬುದ್ಧವಾಗಿ ಹೊರಹೊಮ್ಮುತ್ತಿದ್ದ ಸತ್ಯ ಅಹಿಂಸೆಗಳ ಆ ಆವೇಶದ ಅನುಭೂತಿಯನ್ನು ನಮ್ಮಲ್ಲಿ ಕಾಣಲಾರದೆ ಹೋಗುತ್ತೇವೆ. ಈ ಕೊರತೆಯಿಂದಲೇ ನಾವು ನಮ್ಮಂತಹರೊಡನೆ ಮಾತ್ರವಲ್ಲ ಒಡನಾಡಿಗಳೊಡನೆ ಕೂಡ ಹಲ ದ್ವಂದ್ವಗಳಿಗೀಡಾಗುವ ಅವಸ್ಥೆಯುಂಟಾಗಿದೆ. ಅ. ಬ. ಕ– ಇವರು ಮೂವರೂ ಗಾಂಧೀಜಿಯಲ್ಲಿಯೂ ಅವರ ಕಾರ್ಯಕ್ರಮಗಳಲ್ಲಿಯೂ ಅಗಾಧ ವಿಶ್ವಾಸವುಳ್ಳವರಾಗಿದ್ದರೂ ಅವರಲ್ಲಿ ಯಾರೊಬ್ಬನೂ ಇನ್ನೊಬ್ಬನೊಡನೆ ಹೊಂದಿಕೊಳ್ಳಲಾರದವನಾಗಿದ್ದಾನೆ. ಅವರ ಮರಣಾನಂತರ, ಅವರ ಪಾರ್ಥಿವ ಶರೀರದ ಅಂಗಗಳಂತೆ ಇವರೂ ಹರಿಹಂಚಾಗಿ ಹೋಗುತ್ತಿದ್ದಾರೆ! ಅಂದ ಮೇಲೆ ನಮ್ಮ ವಿಚಾರ ಧಾರೆಯಲ್ಲೆ ಏನೋ ಒಂದು ದೋಷವಿರಬೇಕು. ಅದನ್ನು ಕಂಡುಹಿಡಿಯಲು ನಾವು ಪ್ರಯತ್ನಿಸಬೇಕು.

ಈ ಲೇಖದ ಆರಂಭದಲ್ಲಿ ಕೊಟ್ಟ ಅವತರಣಿಕೆಯೆ, ನನ್ನೆಣಿಕೆಯಲ್ಲಿ, ಪರೀಕ್ಷೆಗೆ ಕೈಹಿಡಿಯುತ್ತಿದೆ. ಪುರಿದಾಗಿ ಹಣ್ಣು ಬಿಟ್ಟು ಮತ್ತೆ ಫಲಬೀಜಗಳಾಗಿ ವೃದ್ಧಿಂಗತವಾಗುವದು ಬೇಡವೇ? ನಮ್ಮ ಕಾರ್ಯಗಳು ಖಾಸಗಿಯಿರಲಿ ಸಾರ್ವಜನಿಕವಿರಲಿ, ಅಥವಾ ರಾಜಕಾರಣ, ಅರ್ಥ, ಧರ್ಮ, ಶಿಕ್ಷಣಗಳಿಗೆ ಸಂಬಂಧಿಸಿದವಿರಲಿ, ಇಲ್ಲವೆ ನಾವು ಸಹಕರಿಸಲು ನಿರ್ಣಯಿಸಲಿ ಅಸಹಕರಿಸಲು ನಿರ್ಣಯಿಸಲಿ, ಒಂದು ಅಕಾರ್ಯವನ್ನು ವಿರೋಧಿಸಲಿ ಸ್ವೀಕರಿಸಲಿ, ಒಂದು ಅಭಿಪ್ರಾಯಕ್ಕೆ ಸ್ಥಿರಗೊಟ್ಟಲಿ, ಅದನ್ನು ಪ್ರಚುರಪಡಿಸುತ್ತಿರಲಿ ಅಥವಾ ಆ ಬಗ್ಗೆ ಮೌನಧರಿಸಲಿ, ನಮ್ಮ ಎಲ್ಲ ಕರ್ಮಗಳಿಗೆ ನಮ್ಮಲ್ಲಿ ಅಧಿಷ್ಠಿತವಾಗಿರುವ ಸತ್ಯ ಅಹಿಂಸೆಗಳೇ ಮಾರ್ಗದರ್ಶಕವಾಗಬೇಕು. ಎಲ್ಲ ದೊಡ್ಡ ಕಾರ್ಯಕ್ರಮ, ಧೋರಣ ಮತ್ತು ತೀರ್ಮಾನಗಳನ್ನು ನಾವು ಸತ್ಯ ಅಹಿಂಸೆಗಳ ಬೌದ್ಧಿಕ ಅಂಗೀಕಾರದ ಆಧಾರದಿಂದಲೇ ಮಾಡಿದ್ದೇವೆ. ಆದರೆ ನಿಜದಾಗಿ ಬೇಕಾಗಿರುವದು ನಮ್ಮ ಜೀವನದ ಎಲ್ಲ ಅಂಗೋಪಾಂಗಗಳಲ್ಲಿಯೂ ಸತ್ಯ ಅಹಿಂಸೆಗಳ ಆವೇಶ. ಆ ಆವೇಶದಿಂದಲೇ ನಮ್ಮ ಪ್ರತಿಯೊಂದು ಕೃತಿ, ಕಾರ್ಯಕ್ರಮ ಹೊರಹೊಮ್ಮಬೇಕು. ಕಾರ್ಯಕ್ರಮಗಳ ಅವತರಣದಿಂದುಂಟಾದ ಪ್ರತಿಫಲಿತ ಶಕ್ತಿಯಿಂದ ಮತ್ತೆ ಆ ಆವೇಶಕ್ಕೆ ಉಬ್ಬರ ಬರಬೇಕು.

ನಮ್ಮ ಕೃತಿಗಳು ನಮ್ಮ ಬುದ್ಧಿ ಶಕ್ತಿಯ ಕೃತಕ ಸೃಷ್ಟಿಯಿಂದ ಉತ್ಪತ್ತಿಯಾದ ಪ್ರಯತ್ನದಿಂದಾಗಿರದೆ ಸತ್ಯ ಅಹಿಂಸೆಗಳ ಆವೇಶದಿಂದ ಉತ್ಪತ್ತಿಯಾದರೆ, ಹಲವು ವಿವಾದಗಳು ಮಾಯವಾಗಿ ನಮ್ಮ ಕಾರ್ಯಕ್ರಮಗಳು ಹೆಚ್ಚು ಬೆಳಗುತ್ತವೆ. ಆಗ ನಾವು ಒಳಗೂ ಹೊರಗೂ ಹೆಚ್ಚು ಶಾಂತಿಯಿಂದ ಬದುಕಬಲ್ಲೆವು. ಹೆಚ್ಚು ಶಕ್ತಿಶಾಲಿಯಿಂದ ದುಡಿಯಬಲ್ಲೆವು.

ವರ್ಧಾ, ೨೬-೨-೪೯ — ಕಿ. ಘ. ಮಶ್ರುವಾಲಾ

ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಕ್ರಮದ ಭವಿಷ್ಯತ್ತು

೧೯೪೭ ನೇ ಇಸ್ವಿಯ ಪೂರ್ವಾರ್ಧದಲ್ಲಿ ಗಾಂಧೀಜಿ, ಹಿಂದುಸ್ತಾನೀ ತಾಲೀಮು ಸಂಘದ ಸದಸ್ಯರೊಡನೆ ಮತ್ತು ಕಾಂಗ್ರೆಸ್ಸು ನೇಮಿಸಿದ್ದ ರಚನಾತ್ಮಕ ಕಾರ್ಯಸಮಿತಿಯ ಸದಸ್ಯರೊಡನೆ ಚರ್ಚಾಮಾಲೆಯನ್ನು ಏರ್ಪಡಿಸಿದ್ದರು. ಗಾಂಧೀಜಿ ಕಳೆದ ಮೂವತ್ತು ವರ್ಷಗಳಿಂದ ನಡೆಸಿದ ಅಹಿಂಸಾತ್ಮಕ ಸಂಗ್ರಾಮದಲ್ಲಿ ಭಾಗ ವಹಿಸಿದ ನುರಿತ ಸೈನಿಕರು ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಗಾಂಧೀಜಿ ಹಿಂದುಸ್ತಾನದಲ್ಲಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದಂದಿನಿಂದ ಅವರೊಡನೆ ಇದ್ದವರೂ ಅವರಲ್ಲಿ ಕೆಲವರಿದ್ದರು. ಅವರು ತಮ್ಮ ಸಹಕಾರ್ಯಕರ್ತರೊಡನೆ ಇಷ್ಟೊಂದು ದೀರ್ಘ ಚರ್ಚೆಯನ್ನು ನಡೆಸಿದ್ದು ಬಹುಶಃ ಇದೇ ಕೊನೆಯದಾಗಿತ್ತು; ಈ ಸಂದರ್ಭದಲ್ಲಿ ಅವರ ಬಾಯಿಂದ ಹೊರಟ ಮುತ್ತಿನಂತಹ ಮಾತುಗಳು ಬಹಳ ಮಹತ್ವದ್ದಾಗಿವೆ. ಸ್ವತಂತ್ರ ಹಿಂದುಸ್ತಾನದಲ್ಲಿ ರಚನಾತ್ಮಕ ಕಾರ್ಯದ ಭವಿತವ್ಯವೇನೆಂಬ ಬಗ್ಗೆ ಅವರ ಮನಸ್ಸಿನಲ್ಲಿ ಏನಿದ್ದಿತೆಂಬುದು ಇದರಿಂದ ಸ್ಪಷ್ಟವಾಗುವದು; ಅಧಿಕಾರ ಲಾಲಸೆಯ ರಾಜಕಾರಣಕ್ಕೂ ಅದಕ್ಕೂ ಇರುವ ಸಂಬಂಧವೂ ಇದರಿಂದ ಸ್ಪಷ್ಟವಾಗುವದು.

ಪರಕೀಯ ಸರಕಾರವನ್ನೆದುರಿಸುವದಕ್ಕಾಗಿ ಈವರೆಗೆ ಅಹಿಂಸೆಯ ಉಪಯೋಗವನ್ನು ಮಾಡಿಕೊಳ್ಳಲಾಗುತ್ತಿದ್ದಿತು; ಆದರೀಗ ಸರಕಾರವನ್ನು ನಡೆಸುವ ಸಮಸ್ಯೆಯಿದೆ. ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದಲ್ಲಿ ಗಾಂಧೀಜಿ ಅಹಿಂಸೆಯೆಂದು ಭಾವಿಸಿದ್ದು ನಿಜವಾದ ಅಹಿಂಸೆಯಾಗಿರಲಿಲ್ಲ. ಆದರೆ ಅಶಕ್ತರ ಅಸ್ತ್ರವಾಗಿದ್ದ ನಿಷ್ಕ್ರಿಯ ಪ್ರತೀಕಾರವಾಗಿದ್ದಿತು. ಹಿಂಸೆಯ ಸಂಧಿ ಸಿಕ್ಕ ಕೂಡಲೆ, ನಿರಾಕರಿಸುವಂಥ, ಪ್ರತ್ಯಕ್ಷವಾಗಿ ನಿರಾಕರಿಸಲ್ಪಟ್ಟ ಒಂದು ತಾತ್ಪೂರ್ತಿಕ ಉಪಾಯ ಅದಾಗಿತ್ತು ಎಂಬುದನ್ನು ಅವರು ಕಂಡುಹಿಡಿದಿರುವರು. ಸಶಕ್ತರ ಶಸ್ತ್ರವಾದ ಅಹಿಂಸೆಯೆಂಬುದು ಸ್ವಪ್ನಸೃಷ್ಟಿಯ ವಿಷಯವೇ ಎಂದೂ ಯಾವ ಅಧಿಕಾರವನ್ನು ಪಡೆಯಲು ಅದು ಸಹಾಯಕವಾಗಿದ್ದಿತೋ ಅದನ್ನು ಉಳಿಸಿಕೊಂಡು ರಕ್ಷಿಸಲು ಅದು ಸಮರ್ಥವಿದೆ ಎಂಬುದನ್ನು ಸಿದ್ಧ ಮಾಡಿ ತೋರದಿದ್ದರೆ ಅದು ಜಗತ್ತಿನಲ್ಲಿ ಒಂದು ಪ್ರಬಲ ಶಕ್ತಿಯೆಂದಾಗಲಿ ಜಾಗತಿಕ ಶಾಂತಿದೂತವೆಂದಾಗಲಿ ಕರೆಯಿಸಿಕೊಳ್ಳಲಾರದು. ಅಂದರೆ ಅಧಿಕಾರಲಾಲಸೆಯ ರಾಜಕಾರಣವನ್ನು ನಿಯಂತ್ರಿಸಲು ಅದು ಸಮರ್ಥವಾಗದಿದ್ದರೆ ಅದರ ಭವಿತವ್ಯವು ಉಜ್ವಲವಾಗದು ಎಂದೂ ಗಾಂಧೀಜಿ ಮನಗಂಡಿದ್ದರು. ಅಹಿಂಸೆಯು ಸತ್ತಾಧಾರಿಯಾದ ಕೂಡಲೆ ಸ್ವಪ್ರಭಾವವುಂಟುಮಾಡಿಕೊಂಡು ಕಲಂಕಿತವಾಗುತ್ತದೆಂಬುದನ್ನು ಗಾಂಧಿಸೇವಾ ಸಂಘದ ಮರ್ಯಾದಿತ ಅನುಭವದಿಂದ ಅವರ ಮನವರಿಕೆಯಾಗಿತ್ತು. ಅನೀತಿಕಾರಕ ವರ್ಚಸ್ಸಿಗೊಳಗಾಗದೆ ಅದನ್ನು ಉಪಯೋಗಿಸಬಹುದೊ, ಉಪಯೋಗಿಸಬೇಕಾದರೆ ಎಂತು ಎಂಬುದು ಚರ್ಚಿಸತಕ್ಕ ಪ್ರಶ್ನೆ.

ಸ್ವತಂತ್ರ ಹಿಂದುಸ್ತಾನ ಸರಕಾರದ ವ್ಯಾಪಕತೆಯನ್ನು ನೋಡಿ ಹಲೆನೋಡಿದ್ದವರೂ ಕೆಲವರುಂಟು. ಅಧಿಕಾರದಲ್ಲಿ ಇಲ್ಲವಾಗಿ ಕಾಂಗ್ರೆಸ್ಸು ಹಲವಾರು ವರುಷಗಳಿಂದ ರಚನಾತ್ಮಕ ಕಾರ್ಯಕ್ರಮಕ್ಕೆ ಬದ್ಧವಾಗಿದ್ದುಂಟು. ಆದರೀಗ ಅದು ಅಧಿಕಾರಕ್ಕೆ ಬಂದ ಸಮಯದಲ್ಲಿ ರಚನಾತ್ಮಕ ಕಾರ್ಯಕ್ರಮಕ್ಕೆ ತಿಲಾಂಜಲಿಯನ್ನು ಕೊಡುವ ಲಕ್ಷಣಗಳು ತೋರಹತ್ತಿವೆ. ರಚನಾತ್ಮಕ ಕಾರ್ಯದಲ್ಲಿ ವಿಶ್ವಾಸವಿದ್ದವರು ಸರಕಾರದಲ್ಲಿ ಸೇರಿ ಅಹಿಂಸಾತ್ಮಕ ಸಮಾಜ ರಚನೆಯನ್ನು ಮಾಡುವದಕ್ಕಾಗಿ ಅಧಿಕಾರದ ಉಪಯೋಗ ಮಾಡುವದು ಯೋಗ್ಯ ಉಪಾಯವಲ್ಲವೇ? ಗಾಂಧೀಜಿ ಇದಕ್ಕೆ ವಿರುದ್ಧವಿದ್ದರು; ರಚನಾತ್ಮಕ ಕಾರ್ಯವನ್ನು ಮಾಡುವದಕ್ಕಾಗಿ ಸಂಸ್ಥಾಪಿಸಿದ ವಿವಿಧ ಸಂಘಗಳು, ತಾವು ಹಾಕಿಕೊಟ್ಟ ಮಟ್ಟಕ್ಕೆ ಬಂದುದಾದರೆ ಧ್ಯೇಯವು ಸಾಧ್ಯವಾಗುವದೆಂದು ಅವರ ಅಭಿಪ್ರಾಯವಾಗಿದ್ದಿತು. ಇದರ ಸಿದ್ಧತೆಗಾಗಿಯೆಂದು ಅವರು ಆ ಸಂಸ್ಥೆಗಳನ್ನು ಒಂದೇ ಸಂಸ್ಥೆಯನ್ನಾಗಿ ಪುನಸ್ಸಂಘಟಿಸಬೇಕೆಂದು ಪುರಸ್ಕರಿಸಿದರು. ಹಿಂದುಸ್ತಾನೀ ತಾಲೀಮೀ ಸಂಘದ ಮೇಲೆ ಅವರು ಎಲ್ಲ ಭಾರವನ್ನು ವಹಿಸಿದರು. ಗಾಂಧೀಜಿಯವರು ಎಣಿಸಿದಂತೆ ನಯೀತಾಲೀಮು ಕಾರ್ಯರೂಪದಲ್ಲಿ ಬಂದರೆ ಉದ್ದೇಶ ಸಾಧನೆಗೆ ಸುಲಭವಾಗುವದು. ಅದು ಸಂಚಿಸಿದ್ದು, ಪ್ರಾಥಮಿಕ್ಷಣದ ಒಂದು ಅಂಶ ಮಾತ್ರ. 'ನಯೀತಾಲೀಮು ಇಂದು ಒರೆಗಲ್ಲಿಗೆ ಹತ್ತುವ ಪ್ರಸಂಗವಿದೆ. ಸತ್ಯದ ಪರೀಕ್ಷೆಯನ್ನಾದರೂ ಅದು ಮಾಡಿತೋರಿಸಬೇಕು. ಇಲ್ಲವೆ ಆ ಪ್ರಯತ್ನದಲ್ಲಿಯೇ ಅದು ನಾಶಹೊಂದಬೇಕು!' ಎಂದಂದರವರು.

ನಯೀ ತಾಲೀಮು ಎದುರಿಸಬೇಕಾಗಿದ್ದ ಇನ್ನೊಂದು ಸಮಸ್ಯೆಯನ್ನು ವಿವರಿಸಲು ಗಾಂಧೀಜಿ ಮುಂಬರಿದರು. ಇಷ್ಟು ದಿನಗಳವರೆಗೆ ಯಾವುದನ್ನು ಧ್ಯೇಯವನ್ನಾಗಿ ನಾವು ಇಟ್ಟುಕೊಂಡು ಹೋರಾಡಿದೆವೊ, ಅದನ್ನೇ ಅದು ಈಗ ಅಲ್ಲಗಳೆಯುತ್ತಿದೆ. "ಹಿಂದುಗಳು ಮತ್ತು ಮುಸಲ್ಮಾನರು ಕೂಡಿ ಇರಲಾರರು; ಮುಸಲ್ಮಾನರು ಹಿಂದುಸ್ತಾನದಿಂದ ಹೊರಟಿದ್ದಾದರೂ ಹೋಗಬೇಕು, ಇಲ್ಲವೆ ಹಿಂದುಗಳ ದಾಸರಾಗಿ ಉಳಿಯಬೇಕು ಎಂದು ಅಭಿಪ್ರಾಯಪಡುವ ಕೆಲ ಜನರು ನಮ್ಮಲ್ಲಿದ್ದಾರೆ. ಅದರಂತೆ ಪಾಕಿಸ್ತಾನದಲ್ಲಿ ಮುಸಲ್ಮಾನರಷ್ಟೇ ಇರತಕ್ಕದ್ದು. ಇದು ಘಾತಕವಾದ ತತ್ವವು. ಅದರಲ್ಲಿ ಪಾಕಿಸ್ತಾನದ ಬೀಜವಿರುತ್ತದೆ. ಪಾಕಿಸ್ತಾನವೀಗ ಅಸ್ತಿತ್ವದಲ್ಲಿ ಬಂದಿದೆ. ಅದರ ಸ್ವಪ್ನವು ಮಾಯವಾಗಿದೆ. ಆದರೆ ಆ ವಿಷವು ಮಾತ್ರ ಹಾಗೆಯೆ ಉಳಿದಿದೆ; ಈ ತತ್ವವನ್ನು ಪ್ರತಿಭಟಿಸಬೇಕೆಂದು ನಾನು ಬದ್ಧಪ್ರತಿಜ್ಞನಾಗಿದ್ದೇನೆ, ಈ ಮನಃಪ್ರವೃತ್ತಿಯನ್ನು ಹೋಗಲಾಡಿಸಬೇಕೆಂದು ನಾನು ಪಣತೊಟ್ಟಿದ್ದೇನೆ. ಇದು ಸಾಧ್ಯವಾದರೆ ಒಳಿತು. ಇಲ್ಲದಿದ್ದರೆ ಇದರಲ್ಲಿಯೆ ಸಾಯಲು ನಾನು ಸಿದ್ಧ. ಜನತೆಯಲ್ಲಿ ಉಂಟಾದ ದೋಷಪೂರ್ಣ ಮನಃಪ್ರವೃತ್ತಿಯನ್ನು ಸರಿಪಡಿಸುವ ಕೆಲಸವು ಮುಖ್ಯವಾಗಿ ನಯೀ ತಾಲೀಮು ಸಂಸ್ಥೆಯ ಕೆಲಸವು."

ನಿಮ್ಮ ಅಭಿಪ್ರಾಯವನ್ನು ಕೇಳಬೇಕೆಂದು ನಯೀ ತಾಲೀಮು ಸಂಸ್ಥೆಯ ಡಾ. ಝಾಕೀರ ಹುಸೇನಸಾಹೇಬರನ್ನು ಕೇಳಿದಾಗ ಅವರು ಹೀಗೆ ಹೇಳಿದರು "ಗಾಂಧೀಜಿ ಹೇಳಿದ್ದು ಅವರ ವಾದಾತ್ಮಕವಿದ್ದರೂ ಸಮಾಧಾನಕರವಾಗಿ ಮಾಡುವದು ಅವಶ್ಯವಾಗಿದೆ. ಸ್ವಾತಂತ್ರ್ಯಪ್ರಾಪ್ತಿಯ ನಂತರ ಪರಿಸ್ಥಿತಿ ಬಹಳ ಮಟ್ಟಿಗೆ ಬದಲಾಗಿದೆ.

—ನಯೀ ದಿಲ್ಲಿ

ಕರ್ಮವೀರ

ಶ್ರೀಮುಖನಾಮ ಸಂವತ್ಸರ ವಿಕ್ರಮ ವರ್ಷ ೨೦೦೫
ಫಾಲ್ಗುಣ ಶು|| ೭ ಸೋಮವಾರ

ಸ್ವರ್ಗಸ್ಥ ಸರೋಜಿನಿದೇವಿಯವರು

ಸಂಯುಕ್ತಪ್ರಾಂತದ ಗವರ್ನರರೂ ನಿಃಸೀಮ ಕಾಂಗ್ರೆಸ್‌ನಿಷ್ಠರೂ ಆಗಿದ್ದ ಸೌ. ಸರೋಜಿನಿ ನಾಯಡು ಇವರು ಮಂಗಳವಾರ ಬೆಳಗುಮುಂಜಾನೆ ೩—೩೦ ಗಂಟೆಗೆ ಲಖನೌದಲ್ಲಿ ಹೃದಯವಿಕಾರದಿಂದ ಸ್ವರ್ಗಸ್ಥರಾದರೆಂದು ಸುದ್ದಿ ಕೇಳಿ ಸಿಡಿಲು ಬಡೆದಂತಾಯಿತು. ಮರಣ ಸಮಯಕ್ಕೆ ಅವರಿಗೆ ೭೧ ವರುಷಗಳಾಗಿದ್ದರೂ ಇಷ್ಟು ಬೇಗ, ಅವರಲ್ಲಿಯೂ ಭಾರತದ ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಅವರು ಪರಂಧಾಮಕ್ಕೆ ಹೋಗಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಕಾಂಗ್ರೆಸ್ ಪ್ರಮುಖರು, ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯರು, ಕಾಂಗ್ರೆಸ್ಸಿನ ಅಧ್ಯಕ್ಷರು, ದುಂಡುಮೇಜು ಪರಿಷತ್ತಿನ ಸದಸ್ಯರು ಮತ್ತು ಯುಕ್ತಪ್ರಾಂತದ ಗವರ್ನರರೆಂದು ಶ್ರೀಮತಿಯವರು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆ ಅನುಪಮವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು. ಗಾಂಧಿಜಿಯವರಿಗಂತೂ ಅವರು ಮಮತೆಯಿಂದ ಆರೈಕೆಮಾಡುವ ತಾಯಿಯಂತಿದ್ದರು. ಗಾಂಧೀಜಿ ಕೈಕೊಂಡ ಉಪವಾಸಗಳಲ್ಲಿ, ಅವರು ಬೇನೆಯಿಂದ ಬಳಲುತಿರುವಾಗ ಸರೋಜನಿಯವರು ಯಾವಾಗಲೂ ಅವರ ಹತ್ತಿರ ಇದ್ದುಕೊಂಡು ಶುಶ್ರೂಕೆ ಮಾಡುತಿದ್ದರು.

ಹೈದರಾಬಾದದಲ್ಲಿ ಡಾ. ಅಘೋರನಾಥ ಚಟ್ಟೋಪಾಧ್ಯಾಯರ ಮಗಳಾಗಿ ೧೮೭೮ ರಲ್ಲಿ ಜನಿಸಿದ ಸರೋಜಿನಿಯವರು ತಮ್ಮ ಅಪ್ರತಿಮ ಮೇಧಾಶಕ್ತಿಯ ಸಹಾಯದಿಂದ ವಯಸ್ಸಿನ ಹನ್ನೆರಡನೆಯ ವರುಷದಲ್ಲಿಯೇ ಮದರಾಸು ವಿಶ್ವವಿದ್ಯಾನಿಲಯದ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಮನ್ನಣೆ ಪಡೆದರು. ಸಾಲೆಯಲ್ಲಿದ್ದಾಗಲೆ ಬೀಜಗಣಿತದ ಪ್ರಶ್ನೆಯೊಂದನ್ನು ಬಿಡಿಸುತಿರುವಾಗ ಸರೋಜಿನಿದೇವಿಯರಿಗೆ ಕಾವ್ಯಸ್ಫೂರ್ತಿಯಾಗಿ ಕವನವೊಂದು ಅವರ ಲೆಕ್ಕಣಿಕೆಯಿಂದ ಹೊರಹೊಮ್ಮಿತಂತೆ. ಅಂದಿನಿಂದ ಪ್ರಾರಂಭವಾದ ಅವರ ಕಾವ್ಯಜೀವನವು ಕೊನೆಯವರೆಗೂ ಧಾರಾವಾಹಿಯಾಗಿ ಸಾಗಿಬಂದಿತೆಂದು ಹೇಳಬಹುದು. ಅವರು ಆಂಗ್ಲಭಾಷೆಯಲ್ಲಿ ಬರೆದ ನಾಲ್ಕು ಕವನ ಸಂಗ್ರಹಗಳು ಬಹುತರ ಎಲ್ಲ ದೇಶಭಾಷೆಗಳಲ್ಲಿಯೂ ಕೆಲ ಯುರೋಪಿಯನ್ ಭಾಷೆಗಳಲ್ಲಿಯೂ ಅನುವಾದಿಸಲ್ಪಟ್ಟವೆಂಬುದನ್ನು ನೋಡಿದರೆ ಅವರ ಕಾವ್ಯಪ್ರತಿಭೆಯೆಷ್ಟೊಂದು ಹಿರಿದಾಗಿತ್ತೆಂಬುದರ ಕಲ್ಪನೆ ಎಲ್ಲರಿಗೂ ಆಗಬಹುದು. ವಯಸ್ಸಿನ ೧೬ ನೆಯ ವರುಷದಲ್ಲಿ ಇಂಗ್ಲಂಡಿಗೆ ಹೋಗಿ ಕಿಂಗ್ಸ ಕಾಲೇಜು, ಕೇಂಬ್ರಿಜ್ಜಿನಲ್ಲಿಯ ಗರ್ಟನ್ ಕಾಲೇಜಿನಲ್ಲಿ ಅಭ್ಯಾಸಮಾಡಿ ಆಂಗ್ಲಭಾಷೆಯಲ್ಲಿ ಪ್ರಾವೀಣ್ಯಪಡೆದು ಮಾತೃಭೂಮಿಗೆ ಮರಳಿದ ಬಳಿಕ, ಇಂಗ್ಲಂಡಿಗೆ ಹೋಗುವ ಮೊದಲೆ ಅನುರಕ್ತರಾಗಿದ್ದ ಡಾ. ನಾಯಡು ಇವರೊಂದಿಗೆ ಅಂತರ್ಜಾತೀಯ ವಿವಾಹವನ್ನು ಮಾಡಿಕೊಂಡು ಸುಧಾರಣಾವಾದಿಗಳೆಂದು ಹೆಸರಾದರು. ತಂದೆಯ ಮರಣದ ನಂತರ ಮುಂಬೈಗೆ ಬಂದು ಸರೋಜಿನಿಯವರು ರಾಜಕಾರಣದಲ್ಲಿ ಪ್ರವೇಶಿಸಿದರು. ಮಹಾತ್ಮಾಗಾಂಧಿಯವರ ಅಸಹಕಾರದ ಕೂಗು ಕವೀಂದ್ರ ರವೀಂದ್ರರನ್ನು ಆಕರ್ಷಿಸಿದಂತೆ ಕವಯಿತ್ರಿ ಸರೋಜನಿಯರನ್ನೂ ಆಕರ್ಷಿಸಿತು. ಅಂದಿನಿಂದ ಪ್ರಾರಂಭವಾದ ಅವರ ರಾಷ್ಟ್ರೀಯ ಜೀವನವು ಮರಣಪರಿಯಂತ ಅನಿರ್ಬಂಧಿತವಾಗಿ ಸಾಗಿಬಂದಿತು.

ಸರೋಜಿನಿಯಂಥ ಹಿರಿಯ ರಾಜಕಾರಣಿಗಳನ್ನು ಕಳೆದುಕೊಳ್ಳಲು ರಾಷ್ಟ್ರವಿಂದು ಸಿದ್ಧವಿರಲಿಲ್ಲ. ಅಂತೆಯೇ ಗವರ್ನರ್ ಜನರಲ್ ರಾಜಾಜಿಯವರು ಹೇಳಿದಂತೆ, ನಾವು ಪರಿಶುದ್ಧರಾಗಿ, ಪ್ರಾಮಾಣಿಕರಾಗಿದ್ದರೆ ಇಂಥ ಆಘಾತಗಳನ್ನು ಸಹಿಸಿಕೊಳ್ಳಲು ಪರಮಾತ್ಮನು ನಮಗೆ ಸಹಾಯ ಮಾಡುವನು. ಅವರೇ ಅಪ್ಪಣೆ ಕೊಡಿಸಿದಂತೆ, ಸರೋಜನಿಯವರು ಮಾಡಿದ ಕಾರ್ಯವನ್ನು ಪೂರಯಿಸಲು ಇತರರಾರಿಗೂ ಸಾಧ್ಯವಿಲ್ಲ. ಇಂಥ ಪ್ರತಿಯೊಂದು ಆಘಾತದಿಂದ ನಾವು ಹೆಚ್ಚೆಚ್ಚು ಪರಿಶುದ್ಧರಾಗಿ ಆದ ಹಾನಿಯನ್ನು ತುಂಬಿಕೊಳ್ಳಬೇಕು.

ಸರೋಜಿನಿಯವರು ಬರಿ ಕವಯಿತ್ರಿ ಮತ್ತು ರಾಜಕಾರಿಣಿಗಳಾಗಿರದೆ ಅಪ್ರತಿಮ ವಾಗ್ಮಿಗಳೂ ಮೇಧಾವಿಗಳೂ ಕಷ್ಟಸಹಿಷ್ಣುಗಳೂ ಆಗಿದ್ದರು. ಅವರ ಕಂಠವೂ ಅಷ್ಟೇ ಮೋಹಕವಾಗಿದ್ದರಿಂದ 'ಹಿಂದುಸ್ತಾನದ ಬುಲ್ ಬುಲ್' ಪಕ್ಷಿ ಎಂಬ ಬಿರುದನ್ನು ಅವರು ಸಂಪಾದಿಸಿದ್ದರು. ಅವರು ತಮ್ಮಲ್ಲಿದ್ದ ಈ ಅಲೌಕಿಕ ಗುಣಗಳಿಂದ ಅನೇಕ ಸ್ತ್ರೀ ಪುರುಷರನ್ನು ಕಾಂಗ್ರೆಸ್ಸಿನಲ್ಲಿ, ರಾಷ್ಟ್ರಸೇವೆಯಲ್ಲಿ ಬರಮಾಡಿಕೊಂಡರು. ಎರಡನೆಯವರ ಸಂಕಟ, ಕಷ್ಟನಷ್ಟಗಳನ್ನು ಕಂಡು ಅವರ ಕವಿಹೃದಯವು ಉಕ್ಕಿ ಬಂದು ಅವರ ಕಷ್ಟನಷ್ಟ ಪರಿಹಾರದಲ್ಲಿ ನಿರತ ಮಾಡುತಿದ್ದಿತು. ಅವರ ಆದರ್ಶವನ್ನು ಮುಂದಿಟ್ಟುಕೊಂಡು ಭಾರತೀಯರು ರಾಷ್ಟ್ರಸೇವೆಯಲ್ಲಿ ತತ್ಪರರಾದರೆ ಅವರ ಆತ್ಮಕ್ಕೆ ಶಾಂತಿ ಲಭಿಸುವದಲ್ಲದೆ ಅವರ ಋಣವನ್ನು ತೀರಿಸಿದಂತಾಗುವದು. ಪರಮಾತ್ಮನು ಆ ಬಗೆಯ ಸದ್ಬುದ್ಧಿಯನ್ನು ಭಾರತೀಯರಿಗೆ ದಯಪಾಲಿಸಲಿ.

ಹೈದರಾಬಾದಿನಲ್ಲಿ ಸರದಾರ ಪಟೇಲರು



ಕಳೆದವಾರ ಭಾರತದ ಉಪಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಹೈದರಾಬಾದಿಗೆ ಭೆಟ್ಟಿಕೊಟ್ಟಾಗ ನಿಜಾಮ ಸಾಹೇಬರು ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ನಿಜಾಮ ಸಾಹೇಬರು ಭಾರತೀಯನೊಬ್ಬನನ್ನು ಈ ಬಗೆಯಾಗಿ ಅಭಿಗಮನದಿಂದ ಸ್ವಾಗತಿಸುವದು ಇದೇ ಮೊದಲ ಬಾರಿ.

ವಾರದ ಸಿಂಹಾವಲೋಕನ

ಸಮಯೋಚಿತ ಧೋರಣ

ಕೂಲಿಕಾರರನ್ನು ಸಂಪು ಮೊದಲಾದ ವಿಧ್ವಂಸಕ ಚಟುವಟಿಕೆಗಳತ್ತ ಒಲಿಸಿ, ರಾಷ್ಟ್ರದ ಉತ್ಪಾದನೆಯನ್ನು ಕುಗ್ಗಿಸಿ, ಸದ್ಯದ ಆಡಳಿತವನ್ನೇ ಬುಡಮೇಲು ಮಾಡಿ ಒಂದು ಬಗೆಯಿಂದ ರಾಷ್ಟ್ರದಲ್ಲೆಲ್ಲ ಹಾಹಾಕಾರ ಪರಿಸ್ಥಿತಿಯನ್ನುಂಟು ಮಾಡಲುಜ್ಜುಗಿಸಿದ ಕಮ್ಯುನಿಸ್ಟರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಭಾರತ ಸರಕಾರವು ನಿರ್ಧರಿಸಿದ್ದು ಸ್ತುತ್ಯವಾಗಿದೆ. ಈ ಸಂಬಂಧದಲ್ಲಿ ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಹಿರಿಯೋಲಗದಲ್ಲಿ ಕೊಟ್ಟ ಹೇಳಿಕೆಯು ಮತ್ತು ಪ್ರಶ್ನೆಗಳಿಗೆ ಕೊಟ್ಟ ಉತ್ತರವು ಮಹತ್ವಪೂರ್ಣವಾಗಿವೆ. ಸದ್ಯದಲ್ಲಿ ರೇಲ್ವೆ ಸಂಪು ಸರ್ವಥಾ ನಡೆಯಲಾರದೆಂದು ರೇಲ್ವೆ ಮಹಾಮಂಡಳದ ಅಧ್ಯಕ್ಷರು ಅಶ್ವಾಸಿಸಿದ್ದರೂ ಕಣ್ಮರೆಯಾಗಿರುವ ಕಮ್ಯುನಿಸ್ಟರು ಕೂಲಿಕಾರರ ಬೇರೆ ಬೇರೆ ರಂಗಗಳಲ್ಲಿ ಪ್ರವೇಶಿಸಿ ಉತ್ಪಾದನಾಶಕ್ತಿಯನ್ನೇ ಕುಗ್ಗಿಸಲು ಮಾಡುತಿರುವ ಪ್ರಯತ್ನಗಳನ್ನು ಹತ್ತಿಕ್ಕುವುದು ಅತ್ಯವಶ್ಯವಾಗಿದೆ. ಹಿಂದುಸ್ತಾನವು ಕಳೆದ ವರುಷವೇ ಸ್ವಾತಂತ್ರ್ಯವನ್ನು ಪಡೆದಿದ್ದು ಅನೇಕ ಸಮಸ್ಯೆಗಳನ್ನು ಬಿಡಿಸಬೇಕಾಗಿ ಬಂದಿದೆ ಅದಕ್ಕೆ. ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯದೆ ಈ ಸ್ವರಾಜ್ಯವು ಪ್ರಯೋಜನಕಾರಿಯಾಗಲಾರದೆಂಬುದು ನಿಶ್ಚಿತ. ಈ ಆರ್ಥಿಕ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾದರೆ ರಾಷ್ಟ್ರದಲ್ಲಿ ವಿವಿಧ ವಸ್ತುಗಳ ಉತ್ಪಾದನೆಯೂ ಬಹಳಮಟ್ಟಿಗೆ ಹೆಚ್ಚಲಿಕ್ಕೆಬೇಕು. ಇದು ಸಾಧ್ಯವಾಗಬೇಕಾದರೆ ಕೂಲಿಗಾರರು ಹುಮ್ಮಸ್ಸಿನಿಂದ ಕೆಲಸಮಾಡಬೇಕಾಗುವದು ಸಂಪು ಮೊದಲಾದವನ್ನು ಹೂಡಿ ಉತ್ಪಾದನೆಯನ್ನು ಕಡಮೆಮಾಡುವುದೆಂದರೆ ರಾಷ್ಟ್ರದ್ರೋಹ ಮಾಡಿದಂತಾಗುವದು ಈ ರಾಷ್ಟ್ರದ್ರೋಹದಂಥ ಘೋರಪಾಪದಿಂದ ಕೂಲಿಗಾರರನ್ನು ಪರಾವೃತ್ತ ಮಾಡುವುದಕ್ಕಾಗಿ ಅವರನ್ನು ಕಮ್ಯುನಿಸ್ಟರ ಬಲೆಯಿಂದ ಮುಕ್ತಮಾಡುವುದು ಅತ್ಯವಶ್ಯವಾಗಿತ್ತು. ಇದನ್ನು ಮಾಡದೆಹರೂ ಸರಕಾರಕ್ಕೆ ನಿರ್ವಾಹವೇ ಇದ್ದಿಲ್ಲ.

ಹೊಸ ಹೊಸ ಕರಭಾರ

ಹಿಂದುಸ್ತಾನ ಸರಕಾರದ ಹಣಕಾಸಿನ ಮಂತ್ರಿಗಳಾದ ಡಾ. ಜಾನಮಥಾಯರು ಕಳೆದವಾರ ಹಿರಿಯೋಲಗದಲ್ಲಿ ಬರುವ ವರ್ಷದ ಮುಂಗಡ ಪತ್ರಿಕೆಯನ್ನು ಮಂಡಿಸಿದ್ದು ಅದರ ಮುಖ್ಯಾಂಶವನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಕೊಟ್ಟಿದ್ದೇವೆ. ಹಿಂದುಸ್ತಾನದಲ್ಲಿಯ ಬಂಡವಲುದಾರರು ರಾಷ್ಟ್ರದ ಉತ್ಪಾದನೆಗಳನ್ನು ಬೆಳೆಸುವುದಕ್ಕಾಗಿ ಹೆಚ್ಚೆಚ್ಚು ಹಣವನ್ನು ವಿವಿಧ ಉದ್ದಿಮೆಗಳಲ್ಲಿ ಹಾಕಲಿ ಎಂದು ಹಣಕಾಸಿನ ಮಂತ್ರಿಗಳು ಉದ್ದಿಮೆದಾರರಿಗೆ ಮೂರುಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ಕೊಟ್ಟಿದ್ದಾರೆ. ಅವರು ಬಯಸಿದಂತೆ ಬರುವವರುಷದಲ್ಲಿ ವಿವಿಧ ಉದ್ದಿಮೆಗಳಲ್ಲಿ ಹೇರಳ ಹಣವು ತೊಡಗಿಸಲ್ಪಟ್ಟು ರಾಷ್ಟ್ರದ ಉತ್ಪಾದನೆ ಬೆಳೆದರೆ ಹಣಕಾಸಿನ ಮಂತ್ರಿಗಳನ್ನು, ಅವರು ನಿರೀಕ್ಷಿಸಿದಂತೆ ವಿವಿಧೋದ್ಯಮಗಳಲ್ಲಿ ಹಣ ತೊಡಗಿಸಿದ ಉದ್ದಿಮೆದಾರರನ್ನು ಭಾರತದ ಜನಸಾಮಾನ್ಯ ಹರಸದಿರದು. ಅದೇರೀತಿಯಾಗಿಅರ್ಥಸಚಿವರುಮಧ್ಯಮವರ್ಗದವರ ಆದಾಯಕರದಲ್ಲಿಯೂ ಸ್ವಲ್ಪ ಪರಿಹಾರ ಕೊಟ್ಟಿದ್ದು ಕಂಡುಬರದಿರದು. ಈ ರೀತಿಯಾಗಿ ಪರಿಹಾರ ಕೊಟ್ಟಿದ್ದರಿಂದ ಮತ್ತು ಸಂರಕ್ಷಣ ಖಾತೆಯ ವೆಚ್ಚವು ಹಿಂದಿನಂತೆ ಈ ಸಲವೂ ಹೆಚ್ಚಿದ್ದರಿಂದ ಬರುವ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ಹೊಸ ಕರಗಳನ್ನು ಹೇರಿದ್ದಾರೆ. ಕಾರ್ಡು ಪಾಕೀಟುಗಳ ದರಗಳನ್ನು ಏರಿಸಿದ್ದರಿಂದ ಜನಸಾಮಾನ್ಯರಿಗೆ ಬಹಳ ಭಾರವೆನಿಸದಿರದು; ಮಧ್ಯಮತರಗತಿಯ ಮತ್ತು ಕೆಳ ತರಗತಿಯ ಬಟ್ಟೆಯ ಮೇಲೆ ಹಾಕಿದ ಕರವೂ ಭಾರವೆನಿಸುವದು. ಸಕ್ಕರೆಯ ಮೇಲೆ ಹಾಕಿದ ಕರವೂ ಅಪ್ರಸ್ತುತವೆನಿಸಿದೆ. ಪೆಟ್ರೋಲು ಟಾಯರು ಮೊದಲಾದವುಗಳ ಮೇಲೆ ಹಾಕಿದ ಕರಗಳು ಅಷ್ಟೇನು ಆಕ್ಷೇಪಾರ್ಹವೆನಿಸವು. ಸದ್ಯದ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಹೆಚ್ಚು ಹಣ ಬೇಕಾಗಿದ್ದರಿಂದ ಕರ ಹೆಚ್ಚು ಅವಶ್ಯವೆನಿಸಿದರೂ ಮೇಲೆ ಬರೆದಂತೆ ಜನಸಾಮಾನ್ಯರ ಮೇಲೆ ಕರಭಾರ ಹೆಚ್ಚದಂತೆ ನೋಡಿಕೊಂಡಿದ್ದರೆ ಒಳಿತಾಗುತಿತ್ತು.

ಮುಂಬಯಿ ಮುಂಗಡ ಪತ್ರಿಕೆ

ಮಧ್ಯವರ್ತಿ ಸರಕಾರದ ಮುಂಗಡ ಪತ್ರಿಕೆಯಲ್ಲಿಯಂತೆ ಮುಂಬಯಿ ಸರಕಾರದ ಮುಂಗಡ ಪತ್ರಿಕೆಯಲ್ಲಿಯೂ ಸುಮಾರು ನಾಲ್ಕು ಕೋಟಿ ರೂಪಾಯಿ ಕೊರತೆಬಿದ್ದಿದೆ. ಈ ಕೊರತೆಯನ್ನು ತುಂಬಿಕೊಳ್ಳಲು ನಮ್ಮ ಪ್ರಾಂತೀಯ ಹಣಕಾಸಿನ ಮಂತ್ರಿಗಳಾದ ಮಾನ್ಯ ವೈಕುಂಠಲಾಲ ಮೆಹತಾರವರು ಹಲವು ಉಪಾಯಗಳನ್ನು ಕೈಕೊಂಡಿರುವರು. ಮುಂಗಡ ಪತ್ರಿಕೆಯ ಮುಖ್ಯಾಂಶಗಳನ್ನು ಬೇರೆ ಕಡೆ ಕೊಟ್ಟಿದ್ದೇವೆ. ವಿದ್ಯುತದ ಮೇಲೆ ವ್ಯಾಪಾರೀ ಕರ ಮಾರಾಟದ ಕರವನ್ನು ಹೆಚ್ಚಿಸುವದು, ಬಂಗಾರದ ವ್ಯಾಪಾರದ ಮೇಲೆ ಸ್ಟ್ಯಾಂಪ ಡ್ಯೂಟಿ, ವೃತ್ತಪತ್ರಗಳ ಜಾಹೀರಾತುಗಳ ಮೇಲೆ ಕರ ಹೀಗೆ ಕರಗಳನ್ನು ಹೇರಿ ಕೊರತೆಯನ್ನು ತುಂಬಿಕೊಂಡು ಒಂದು ಕೋಟಿ ರೂಪಾಯಿಗಳನ್ನು ಉಳಿಸಿಕೊಳ್ಳಬೇಕೆಂದು ಮಂತ್ರಿಗಳು ಎಣಿಸಿದ್ದಾರೆ. ಹಿಂದುಸ್ತಾನದ ಎಲ್ಲ ಪ್ರಾಂತಗಳಿಗಿಂತ ಮುಂಬಯಿ ಪ್ರಾಂತದಲ್ಲಿ ಹೆಚ್ಚು ಕರಭಾರವಿದೆಯೆಂದು ಅರ್ಥಜ್ಞರು ಹೇಳುವದುಂಟು. ಈ ಪರಿಸ್ಥಿತಿಯಲ್ಲಿ ಮತ್ತೆ ಕರಗಳನ್ನು ಹೆಚ್ಚಿಸಿದ್ದು ಸರಿಯಾಗಲಿಲ್ಲವೆಂದೇ ಯಾರಾದರೂ ಹೇಳಬಹುದಾಗಿದೆ. ಯಾವ ದೊಡ್ಡ ಯೋಜನೆಯನ್ನೂ ಕೈಕೊಳ್ಳದೆ ಸಾಮಾನ್ಯ ಆಡಳಿತೆಯ ವೆಚ್ಚಕ್ಕಾಗಿಯೇ ಹೊಸ ಕರ ಹೇರಬೇಕಾದ ಪ್ರಸಂಗಬಂದುದು ವಿಷಾದಕರವಾಗಿದೆಂದು ಮಂತ್ರಿಗಳು ಮರುಗಿದರು ಪ್ರಾಂತದ ಆರ್ಥಿಕ ಪರಿಸ್ಥಿತಿ ಇಂತು ಇಳಿಕೆಯ ಸ್ಥಿತಿಗೆ ಬಂದುದು ಶೋಚನೀಯವಾಗಿದೆ. ಇದಕ್ಕೆ ಕಾರಣವೇನೆಂಬುದನ್ನು ಹುಡುಕುವದು ಸಮಯೋಚಿತವಾಗದಿರದು. ಕೊರತೆಯನ್ನು ತುಂಬಿಕೊಳ್ಳಲು ಅರ್ಥಸಚಿವರು ಪತ್ರಿಕೆಗಳ ಜಾಹೀರಾತುಗಳ ಮೇಲೆ ಹೇರಿದ ಕರವು ಯಾವ ರೀತಿಯಿಂದಲೂ ಸಮಂಜಸವಾಗದು. ಆ ಬಗ್ಗೆ ಅರ್ಥಸಚಿವರು ಮಾಡಿದ ಪ್ರತಿಪಾದನೆಯು ಸಮರ್ಥನೀಯವಾಗಿಲ್ಲ. ಆಡಳಿತೆ ವೆಚ್ಚವನ್ನು ಕಡಮೆಮಾಡಿ, ಹೊಸ ಕರಗಳನ್ನು ಹೇರುವಂಥ ಪ್ರಸಂಗ ತಂದುಕೊಳ್ಳದಿರುವ ಉಪಾಯಗಳನ್ನು ಯೋಜಿಸುವದು ಅವಶ್ಯವೆಂದು ನಾವು ಸೂಚಿಸದಿರಲಾರೆವು.

ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಕ್ರಮದ ಭವಿಷ್ಯತ್ತು

(೭ನೇ ಪುಟದಿಂದ ಮುಂಬರಿದುದು)

ಪ್ರತಿಯೊಬ್ಬನು ಹೊಸ ಮತ್ತು ವೀರೋಚಿತ ಪ್ರಯೋಗಗಳನ್ನು ಮಾಡಲು ಆತುರನಾಗಿದ್ದಾನೆ; ಪ್ರತಿಯೊಬ್ಬನು ತನಗೆ ಸ್ವಾತಂತ್ರ್ಯವಿರಬೇಕೆಂದು ಬಯಸುತ್ತಾನೆ. ಇದು ಯೋಗ್ಯ ರೀತಿಯಲ್ಲಿ ಮಾರ್ಪಡಿಸಲ್ಪಡದಿದ್ದರೆ ಪ್ರಗತಿಗೆ ಸಹಾಯಕವಾಗುವದರ ಬದಲು ಅದಕ್ಕೆ ಮಾರಕವಾಗಬಹುದು.”

ಆಯಾ ಸಂಸ್ಥೆ ಒಂದೇ ವೃಕ್ಷದ ಬೊಡ್ಡಿಯಿಂದ ಹೊರಟ ಬೇರೆ ಬೇರೆ ಟೊಂಗೆಗಳಂತೆ ಇದ್ದುಕೊಂಡು ಪ್ರತ್ಯೇಕವಾಗಿಯೇ ಕೆಲಸ ಮಾಡಬೇಕೆಂಬ ಸೂಚನೆ ಮುಂದೆ ಬಂದಿತು. ಇಂಥ ತಾಯಿಬೇರು ಎಂದು ತಿಳಿಯಲಾಗುತಿದ್ದ ಗಾಂಧೀ ಸೇವಾ ಸಂಘದ ಸೇವೆಯನ್ನು ಕೋರಲಾಯಿತು. ಆದರೆ ಗಾಂಧೀಜಿಗೆ ಅದರಲ್ಲಿ ಗಂಡಾಂತರ ಕಂಡುಬಂದಿತು. ರಚನಾತ್ಮಕ ಕಾರ್ಯಕರ್ತರ ಸಂಸ್ಥೆಯು ಅಧಿಕಾರ ಲಾಲಸೆಯ ರಾಜಕಾರಣದಲ್ಲಿ ತೊಡಗಿ ಕಾಂಗ್ರೆಸ್ಸಿನ ಗೂಡ ಇಲ್ಲವೆ ಸರಕಾರದ ಗೂಡ ರಾಜಕೀಯ ಹಕ್ಕಿಗಾಗಿ ಸ್ಪರ್ಧೆ ನಡೆಸುವದು ಅವರಿಗೆ ಸರಿಯೆನಿಸಲಿಲ್ಲ. “ಆ ಸಂಘ ಈಗ ಅಸ್ತಿತ್ವದಲ್ಲಿ ಇರುವದಿಲ್ಲ; ಅಲ್ಲದೆ ಎಲ್ಲ ರಚನಾತ್ಮಕ ಕಾರ್ಯಕರ್ತರನ್ನೂ ಒಂದೇ ಸಂಸ್ಥೆಯ ನಿಯಂತ್ರಣದಲ್ಲಿ ತರಲು ಅದೇನು ಪ್ರಯತ್ನಿಸಿಲ್ಲ. ದೇಶದ ರಾಜಕಾರಣದಲ್ಲಿ ಪ್ರವೇಶಿಸಿ ಅದನ್ನು ವಿಶುದ್ಧಗೊಳಿಸಲು ಅದು ಕೆಲಕಾಲ ಪ್ರಯತ್ನಿಸಿತು; ಆದರೆ ತನಗೆ ಯಶಸ್ಸು ಸಿಕ್ಕಲಿಲ್ಲ ಎಂದು ಅದು ಒಪ್ಪಬೇಕಾಯಿತು.” ಎಂದೆಂದರವರು.

ಅನಂತರ ಡಾ. ಝಾಕೀರ ಹುಸೇನರು ಇದನ್ನೆ ಎತ್ತಿಕೊಂಡು ಪ್ರತಿಪಾದನೆ ಪ್ರಾರಂಭಿಸಿದರು. “ಆಯಾ ಸಂಘಗಳು ನಿರ್ದಿಷ್ಟ ಕೆಲಸಗಳನ್ನು ಮಾಡುವುದಕ್ಕಾಗಿ ಪ್ರತ್ಯಪ್ರತ್ಯೇಕವಾಗಿಯೆ ಸಂಸ್ಥಾಪಿತವಾದುವು. ಅವು ಒಂದೇ ಸಂಸ್ಥೆಯಲ್ಲಿ ಕೂಡಿಕೊಂಡರೆ ಅಧಿಕಾರ ಲಾಲಸೆಯ ರಾಜಕಾರಣದಿಂದ ಅವು ಅಲಿಪ್ತ ಉಳಿಯಲಾರವು.”

ಗಾಂಧೀಜಿ:– “ಈ ರೀತಿ ಏಕೀಕೃತ ರಚನಾತ್ಮಕ ಕಾರ್ಯಕರ್ತರ ಸಂಸ್ಥೆ ಅಧಿಕಾರ ಲಾಲಸೆಯ ರಾಜಕಾರಣದಲ್ಲಿ ಬೀಳಲು ಪ್ರಯತ್ನಿಸಿದರೆ ಅದು ತನ್ನ ನಾಶವನ್ನೆ ಬರಮಾಡಿಕೊಂಡಂತಾಗುವದು. ಅಥವಾ ನಾನೇ ರಾಜಕಾರಣದಲ್ಲಿ ಸೇರಿ ನನ್ನ ಮನಸ್ಸಿಗೆ ತೋಚಿದಂತೆ ಸರಕಾರವನ್ನು ನಡೆಸಲು ಪ್ರವರ್ತಿಸಲಿಲ್ಲವೇಕೆ? ಇಂದು ಅಧಿಕಾರ ಸ್ಥಾನಗಳನ್ನು ವಹಿಸಿದವರು ಸ್ವಸಂತೋಷದಿಂದ ಹಿಂದೆ ಸರಿದು ನನಗೆ ದಾರಿಯನ್ನು ಸುಲಭ ಮಾಡಿಕೊಡುತ್ತಿದ್ದರು; ಆದರೆ ಅವರು ಅಧಿಕಾರದಲ್ಲಿ ಇರುವವರೆಗೆ ತಮಗೆ ಸರಿದೋರಿದ ರೀತಿಯಲ್ಲಿಯೆ ಆಡಳಿತೆಯನ್ನು ಸಾಗಿಸಬಲ್ಲರು. ಆದರೆ ನಾನು ಅಧಿಕಾರವನ್ನು ನನ್ನ ಕೈಗೆ ತೆಗೆದುಕೊಳ್ಳ ಬಯಸುವದಿಲ್ಲ. ಅಧಿಕಾರವನ್ನು ನಿರಾಕರಿಸಿ ವಿಶುದ್ಧಾತ್ಮರಾಗಿ ಮತದಾರರ ನಿಃಸ್ವಾರ್ಥ ಸೇವೆಯನ್ನು ಕೈಗೊಂಡು ನಾವು ಅವರಿಗೆ ದಾರಿ ತೋರಿ ನಮ್ಮ ವರ್ಚಸ್ಸನ್ನು ಅವರ ಮೇಲೆ ಬೀರಬಲ್ಲೆವು. ಸರಕಾರದಲ್ಲಿ ಸೇರುವುದರಿಂದ ಪಡೆಯುವುದಕ್ಕಿಂತ ಹೆಚ್ಚು ನಿಜವಾದ ಅಧಿಕಾರವು ಅದರಿಂದ ನಮಗೆ ಪ್ರಾಪ್ತವಾಗುವದು. ನೀವೇ ಅಧಿಕಾರ ಸೂತ್ರಗಳನ್ನು ವಹಿಸಬೇಕು. ಬೇರೆ ಯಾರೂ ನಮಗೆ ಬೇಡ ಎಂದು ಜನರಿಗೆ ಎನಿಸಿ ಆದರಂತೆ ಅವರು ತಾವಾಗಿಯೆ ಬಿನ್ನವಿಸಿಕೊಳ್ಳುವ ಒಂದು ಕಾಲವೂ ಬರಬಹುದು. ಆಗ ಆ ಪ್ರಶ್ನೆಯ ವಿಚಾರ ಮಾಡಬಹುದು. ಆ ಕಾಲಕ್ಕೆ ಕದಾಚಿತ್ ನಾನು ಜೀವಂತ ಇರಲಿಕ್ಕಿಲ್ಲ. ಆದರೆ ಅಂಥ ಸಮಯ ಬಂದಾಗ ಆಯಾ ಸಂಸ್ಥೆಗಳು ತಮ್ಮೊಳಗಿಂದಲೆ ಒಬ್ಬನನ್ನು ಅಧಿಕಾರಸೂತ್ರಗಳನ್ನು ವಹಿಸಿಕೊಳ್ಳಲು ಆರಿಸಿಕೊಳ್ಳಬಹುದು. ಅಷ್ಟರಲ್ಲಿ ಹಿಂದುಸ್ತಾನವು ಒಂದು ಮಾದರಿಯ ರಾಷ್ಟ್ರವಾಗಿಯೂ ಪರಿಣಮಿಸಿರಬಹುದು.”

ಡಾ. ಝಾಕೀರ್ ಹುಸೇನ್— “ಆದರ್ಶ ರಾಜ್ಯವನ್ನು ಪ್ರಾರಂಭಿಸಿ ನಡೆಸಲು ನಮಗೆ ಆದರ್ಶ ಪುರುಷರು ಅಗತ್ಯವಲ್ಲವೆ?

ಗಾಂಧೀಜಿ- “ಸ್ವತಃ ನಾನೇ ಸರಕಾರದೊಳಗೆ ಹೋಗದೆ ನಮ್ಮ ಆಯ್ಕೆಯ ಮನುಷ್ಯರನ್ನು ಅಲ್ಲಿಗೆ ಕಳಿಸಬಹುದು. ಇಂದು ಕಾಂಗ್ರೆಸ್ಸಿನಲ್ಲಿರುವ ಎಲ್ಲರೂ ಅಧಿಕಾರಕ್ಕಾಗಿ ಧಾವಿಸುತ್ತಿದ್ದಾರೆ. ಅದು ದೊಡ್ಡ ಅಪಾಯವನ್ನು ಸೂಚಿಸುತ್ತದೆ. ಅಧಿಕಾರಾನ್ವೇಷಿಗಳ ಕೂಗಿನೊಡನೆ ನಾವು ಬೆರೆಯದಿರೋಣ. ಇಂದು ಬಹಳ ಜನ ಕಾಂಗ್ರೆಸ್ಸಿಗರೆನ್ನುತ್ತಾರೆ: ‘ಜವಾಹರಲಾಲರಿಗೆ ಅಷ್ಟು ಸಂಬಳ ಬರುತ್ತದೆ, ನಮಗೇಕಿಲ್ಲ?’ ಜವಾಹರಲಾಲರಂಥ ಪ್ರತಿಭಾಸಂಪನ್ನರು ಅವರು ಇಂದು ಪಡೆಯುತ್ತಿರುವದಕ್ಕಿಂತ ಹೆಚ್ಚು ಸಂಬಳವನ್ನು ಯಾವಾಗಲೂ ಪಡೆದೇ ಪಡೆಯುತ್ತಿದ್ದರು ಎಂಬುದನ್ನು ಅವರು ಮರೆತುಬಿಡುತ್ತಾರೆ. ನನ್ನಂಥ ಬಡ ಕೆಲಸಗಾರನು ಅನವಶ್ಯಕವಾಗಿದ್ದರೂ ದುಡಿವ ಶಕ್ತಿಯಿಲ್ಲದಿದ್ದರೂ ೩೦೦೦ ರೂಪಾಯಿ ಸಂಬಳ ತೆಗೆದುಕೊಂಡೆನೆನ್ನೋಣ, ಅದು ಖಂಡಿತವಾಗಿಯೂ ಸರಿಯಾದದ್ದಲ್ಲ. ಅಧಿಕಾರಲಾಲಸೆಯ ರಾಜಕಾರಣ ಮತ್ತು ಅದರ ಸಂಬಂಧದಿಂದ ನಾವು ಸಂಪೂರ್ಣ ಪ್ರತ್ಯೇಕವಾಗಿರಬೇಕೆಂದು ನನ್ನ ದೃಢಾಭಿಪ್ರಾಯ.”

ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಸಮಿತಿ ಕರೆದ ಸಭೆಯಲ್ಲಿ ಆಚಾರ್ಯ ಕೃಪಲಾನಿ, ಶಂಕರರಾವ್ ದೇವ ಮತ್ತು ದಿವಾಕರಜಿ ಇವರು, ಕಾಂಗ್ರೆಸ್ಸು ಅಧಿಕಾರವನ್ನು ಗೆದ್ದುಕೊಂಡ ಬಳಿಕ ರಚನಾತ್ಮಕ ಕಾರ್ಯಕ್ಕೆ ಸಾಕಷ್ಟು ಪ್ರಾಮುಖ್ಯ ಅಥವಾ ಲಕ್ಷ್ಯವನ್ನು ಕೊಡಲಾರದಾದರೆ ರಚನಾತ್ಮಕ ಕಾರ್ಯವನ್ನು ಲಗುಬಗೆಯಿಂದ ಮಾಡುವದಕ್ಕಾಗಿ ರಚನಾತ್ಮಕ ಕಾರ್ಯಕರ್ತರೆಲ್ಲರೂ ಸೇರಿ ತಮ್ಮದೇ ಆದ ಬೇರೊಂದು ಸಂಘವನ್ನು ರಚಿಸಿಕೊಂಡರೆ ಉತ್ತಮವಲ್ಲವೆ? ಎಂದು ಪ್ರಶ್ನಿಸಿದರು. ಅಂಥ ಸಂಘವು ಅಧಿಕಾರವನ್ನು ತಿರಸ್ಕರಿಸಬಾರದು ಅಥವಾ ಅದರಿಂದ ದೂರ ಓಡಬಾರದು; ಸರಕಾರದೊಳಗೆ ನುಗ್ಗಿ ಅಧಿಕಾರವನ್ನು ಸ್ವೀಕರಿಸಿ ಅದನ್ನು ರಚನಾತ್ಮಕ ಕಾರ್ಯಗಳ ಉತ್ತರಾಭಿವೃದ್ಧಿಗಾಗಿ ಬಳಸಬೇಕು. ಸರಕಾರದ ಹೊರಗೆ ತಾನೊಂದು ಸುಧಾರಕ ಪಂಗಡವಾಗಿ ಉಳಿದರೆ ೫೦ ವರ್ಷಗಳಲ್ಲಿ ಮಾಡಬಹುದಾದುದನ್ನು ಅಂಥ ಸಂಘವು ಆಗ ಐದೇ ವರ್ಷಗಳಲ್ಲಿ ಮಾಡಲು ಶಕ್ತವಾಗುತ್ತದೆ. ಇಂದು ರಚನಾತ್ಮಕ ಕಾರ್ಯಕರ್ತರಿಗೆ ಹಲವು ವ್ಯಾಹತಿ ಎದುರಾಗಿವೆ. ಉದಾಹರಣೆಯೆಂದರೆ, ಅವರು ಬೆಲ್ಲವನ್ನು ಹೊಗಳಿದರು, ಆದರೆ ಅವರ ಸರಕಾರ ಹೊಸ ಸಕ್ಕರೆ ಕಾರಖಾನೆಗಳನ್ನು ಕಟ್ಟಲು ಅನುಮತಿ ಕೊಡುತ್ತಿದೆ. ಅವರು ಖಾದಿಯ ಉತ್ಪಾದನದ ಬಗ್ಗೆ ಮಾತಾಡಿದರು. ಆದರೆ ಪ್ರಾಂತಿಕ ಸರಕಾರಗಳು ಬಟ್ಟೆಯ ಗಿರಣಿಗಳನ್ನು ಹೆಚ್ಚಿಸುತ್ತಿವೆ. ಗೌಣಸ್ಥಾನದಲ್ಲಿ ಬಿದ್ದಿದ್ದಾಗ, ವರುವರುಷದಲ್ಲೂ ರಚನಾತ್ಮಕ ಕಾರ್ಯ ಮಾಡಲು ಪ್ರತಿಜ್ಞೆ ಮಾಡುತ್ತ ಬಂದ ಕಾಂಗ್ರೆಸ್ಸು ಅಧಿಕಾರ ಸಿಕ್ಕಿದ ಕೂಡಲೆ ಈಗೇಕೆ ಹೀಗೆ ಅದರ ಬಗ್ಗೆ ಸ್ತಂಭನಧೋರಣ ವಹಿಸಿದೆ?

ಗಾಂಧೀಜಿ “ಜವಾಹರಲಾಲ್, ರಾಜೇಂದ್ರಬಾಬು ಮತ್ತು ವಲ್ಲಭಭಾಯಿಯವರಂಥ ಜನರು ಉಚ್ಚಸ್ಥಾನವನ್ನು ಅಲಂಕರಿಸಿರುವಾಗ ಮತ್ತು ಕಾಂಗ್ರೆಸ್ಸು ಬಹಳ ಕಾಲದಿಂದ ಪ್ರತಿಜ್ಞೆ ಮಾಡಿರುವಾಗ ರಚನಾತ್ಮಕ ಕಾರ್ಯವೇಕೆ ಹೋಗಬೇಕಾದಷ್ಟು ಮುಂದೆ ಹೋಗಿಲ್ಲ? ಎಂಬುದಕ್ಕೆ ಉತ್ತರ ಕೊಡುವದು ಕಷ್ಟ. ಹರಿಜನಸೇವಕ ಸಂಘದ ಹೊರತಾಗಿ ಮಿಕ್ಕ ಎಲ್ಲ ಸಂಘಗಳನ್ನು ಕಾಂಗ್ರೆಸ್ಸೇ ನಿರ್ಮಿಸಿದೆ. ಹೀಗಿದ್ದರೂ ಸರಕಾರವು ತಮ್ಮೊಡನೆ ಎಲ್ಲ ವಿಧದಲ್ಲೂ ಸಹಕರಿಸಿ ಸಾಗುವಂತೆ ಮಾಡಲು ಏಕೆ ಆ ಸಂಘಗಳಿಗೆ ಸಾಧ್ಯವಾಗಿಲ್ಲ? ತಪ್ಪು ರಚನಾತ್ಮಕ ಕಾರ್ಯಕರ್ತರಾದ ನಮ್ಮಲ್ಲೇ ಇದೆ ಎಂದು ನನ್ನ ಸೂಚನೆ. ನಮಗೆ ರಚನಾತ್ಮಕ ಕಾರ್ಯದಲ್ಲೇನೋ ವಿಶ್ವಾಸವಿದೆ; ಆದರೆ ಆ ನಮ್ಮ ಶ್ರದ್ಧೆ ನಮ್ಮ ಬುದ್ಧಿಗೆ ವಿಚಾರ ಹೊಳೆವಂತೆ ಮಾಡುವಷ್ಟು ಆಳವಾಗಿದ್ದಿಲ್ಲ, ಪ್ರಬುದ್ಧವಿರಲಿಲ್ಲ. ಅದರಿಂದಲೇ ನಮ್ಮ ಬೆಳವಣಿಗೆ ಏರುಪೇರಾಗಿದೆ. ರಚನಾತ್ಮಕ ಕಾರ್ಯಕರ್ತರ ಮೇಲೆ ಬಂದ ಟೀಕೆಯೆಂದರೆ, ಅವರಿಗೆ ಕಲ್ಪನಾಶಕ್ತಿ ಮತ್ತು ಬುದ್ಧಿಶಕ್ತಿಗಳಿಲ್ಲ ಎಂದು. ನಮ್ಮ ಮತಿವಂತರಲ್ಲಿ ಸಹಾನುಭೂತಿಗೇನೂ ಕಡಿಮೆಯಿಲ್ಲ. ವಿಚಾರವು ಬಹುಪಕ್ಷ ಯಾವಾಗಲೂ ಭಾವನೆಯನ್ನು ಅನುಸರಿಸಿ ಸಾಗುತ್ತದ. ಆದರೆ ಅವರ ವಿಚಾರಕ್ಕೆ ಸಮಾಧಾನವಾಗುವಷ್ಟು ಆಳವಾಗಿ ನಾವು ಸರಕಾರದವರ ಹೃದಯದೊಳಗೆ ಹೊಕ್ಕಿಲ್ಲ.”

ಅಸಹಕಾರಕಾರ್ಯಕ್ರಮದ ಒಂದು ಅಂಗವಾಗಿ ರಚನಾತ್ಮಕ ಕಾರ್ಯವನ್ನು ಹೇಗೆ ಕಾಂಗ್ರೆಸ್ಸಿನಲ್ಲಿ ಸೇರಿಸಿಕೊಳ್ಳಲಾಯಿತು ಎಂಬುದನ್ನು ಅನಂತರ ಗಾಂಧಿಯವರು ಬಣ್ಣಿಸಹೋದರು. ಆಗ ಇಡೀ ಜನತೆಯೇ ಸ್ವಾತಂತ್ರ್ಯಕ್ಕಾಗಿ ಬ್ರಿಟಿಶರೊಡನೆ ಹೋರಾಡಲು ಅದೊಂದು ಒಳ್ಳೆಯ ಹತಾರವೆಂದು ಜನರು ತಿಳಿದರು. ಇಡೀ ದೇಶವೇ ಆಗ ಎಚ್ಚೆತ್ತಿತ್ತು. ಕಾಲಕ್ರಮೇಣ ಮತಿವಂತರನ್ನು ರಚನಾತ್ಮಕ ಕಾರ್ಯದ ವೃತ್ತದೊಳಗೆ ತರಲಾಯಿತು. ಅದರ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿತು. ಹೋರಾಟ ಮುಗಿದ ಮೇಲೆ ರಚನಾತ್ಮಕ ಕಾರ್ಯದಲ್ಲಿರುವ ನಮ್ಮ ಆಸಕ್ತಿಯೂ ಕಡಿಮೆಯಾಯಿತು. ರಚನಾತ್ಮಕ ಕಾರ್ಯವು ಹೋರಾಟದ ಒಂದು ತಂತ್ರ ಅಥವಾ ನೀತಿಯಲ್ಲ. ಅದು ಜೀವನದ ಒಂದು ಬಗೆ. ಅದನ್ನು ಅನುಸರಿಸುವದು ಶ್ರದ್ಧಾಬುದ್ಧಿಗಳೆರಡರಿಂದಲೂ ಅದನ್ನು ಸ್ವೀಕರಿಸಿದವರಿಗೆ ಮಾತ್ರ ಸಾಧ್ಯ.

ರಚನಾತ್ಮಕ ಕಾರ್ಯಕರ್ತರ ಸಂಘಗಳಿಗೆ ಕಾಂಗ್ರೆಸ್ಸು ತನ್ನ ಹೆಸರನ್ನು ಅಂಟಿಸಿತು. ಕೆಲಸಮಾಡಲು ಅದು ಅವಕ್ಕೆ ಕಾರ್ಯಪಟವನ್ನು ತಯಾರಿಸಿಕೊಟ್ಟಿತು. ಆದರೆ ಭಾರ ಹೆಚ್ಚಾದಾಗ ಹೆಗಲುಕೊಟ್ಟು ಹೊರಲು ಕಾಂಗ್ರೆಸ್ಸಿಗರು ಬರಲಿಲ್ಲ. ನಮ್ಮ ದಿವಾಳಿಕೋರತನ ಇಂಥದಿದೆ. ಸಂಘಗಳೆಲ್ಲ ಒಟ್ಟಾಗಿ ಎಲ್ಲರೂ ಸೇರಿ ಆರಿಸಿದ ಪ್ರತಿನಿಧಿಯ ನಿರ್ದೇಶನದಲ್ಲಿ ಕೆಲಸಮಾಡುವಂತಾದರೆ ಅದು ಒಂದು ದೊಡ್ಡ ಪ್ರಗತಿಪರ ಹೆಜ್ಜೆಯೆನಿಸದಿರದು. ರಾಜಕೀಯ ಅಧಿಕಾರಿವರ್ಗದಲ್ಲಿ ಪ್ರಭಾವಬೀರುವ ಮೊದಲು ನಾವು ನಮ್ಮ ಸ್ಥಿತಿಗತಿಗಳನ್ನು ಸರಿಪಡಿಸಿಕೊಳ್ಳಬೇಕು. ಎಲ್ಲ ಸಂಘಗಳೂ ಸರಿಯಾಗಿ ಕೆಲಸಮಾಡಿದರೆ, ಸಂಯುಕ್ತವಾಗಿ ಸಮಪ್ರೀತಿಯಲ್ಲಿ ಸಹಕರಿಸಿದ್ದೇ ಆದರೆ ಅದೊಂದು ದೊಡ್ಡ ಕೆಲಸವೇ ಆದೀತು! ಆದರೆ ಅವರು ಜನಪ್ರಿಯತೆಗಾಗಿ ಅದನ್ನು ಮಾಡಕೂಡದು ಅಥವಾ ಅವರು ಕನಸಿನಲ್ಲೂ ರಾಜಕೀಯ ಅಧಿಕಾರ ಬೇಕೆಂದು ಜೊಲ್ಲಬಿಡಕೂಡದು. ನಾಳೆಯೆಂದರೆ ವಯಸ್ಕರಿಗೆ ಮತಾಧಿಕಾರ ಸಿಕ್ಕುತ್ತದೆ. ಅದು ಬಹಳ ಚೆನ್ನಾದದ್ದು. ಆದರೆ ವಯಸ್ಕರ ಮತಾಧಿಕಾರವು ರಾಜಕೀಯ ಅಧಿಕಾರವನ್ನು ಸೆರೆಹಿಡಿಯುವ ಒಂದು ಸಾಧನವೆಂದು ಭಾವಿಸಿದರೆ ಅದನ್ನು ನೀಚೋಪಯೋಗಕ್ಕೆ ತೆಗೆದುಕೊಂಡಂತಾಗುತ್ತದೆ.

“ರಚನಾತ್ಮಕ ಕಾರ್ಯಗಳ ಸಂಘಟನೆಯ ಉದ್ದೇಶವು ರಾಜಕೀಯ ಶಕ್ತಿಯನ್ನು ಉತ್ಪತ್ತಿ ಮಾಡುವುದೇ ಆಗಿದೆ. ಆದರೆ ರಾಜಕೀಯ ಅಧಿಕಾರ ಸಿಕ್ಕಿದ ಮೇಲೆ ಅದು ನಮ್ಮ ಶ್ರಮಕ್ಕೆ ಪಾರಿತೋಷಕವಾಗಿ ಬಂದಿದೆ ಎಂದು ನಾವು ಹೇಳಿದರೆ ಅದರಿಂದ ನಾವು ಅಧಃಪತಿತರಾಗುವೆವಲ್ಲದೆ ನಮ್ಮ ಸರ್ವನಾಶಕ್ಕೆ ಹಾದಿ ಹಾಕಿಕೊಟ್ಟಂತಾಗುವುದು. ಈಗ ಚರಕ ಸಂಘದ ಪ್ರಕರಣವನ್ನು ಬೇಕಾದರೆ ತೆಗೆದುಕೊಳ್ಳಿರಿ. ಎಲ್ಲ ಸಂಘಗಳಿಗಿಂತ ಅದಕ್ಕೆ ಹೆಚ್ಚು ಜನ ಸದಸ್ಯರಿದ್ದಾರೆ. ಆದರೆ ಅದರ ಸದಸ್ಯರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ನಾವು ಪ್ರಯತ್ನ ಮಾಡಿಲ್ಲ. ಅವರ ಹೆಸರನ್ನು ಕಾಂಗ್ರೆಸ್ ರಜಿಸ್ಟರಿನಲ್ಲಿ ಸೇರಿಸಬೇಕೆಂದು ಒಮ್ಮೆ ಸಲಹೆ ಮಾಡಲಾಗಿತ್ತು. ನಾನು ಅದನ್ನು ವಿರೋಧಿಸಿದೆ. “ನಾವು ಕಾಂಗ್ರೆಸ್ಸನ್ನು ನಮ್ಮ ಹಿಡಿತದಲ್ಲಿ ತರಬೇಕೇನು? ಎಂದು ಅವರನ್ನು ನಾನು ಕೇಳಿದೆ. ಹಾಗೆ ಮಾಡುವುದೆಂದರೆ ಅದನ್ನು ಕೊಂದಂತೆಯೇ ಸೈ. ಸೇವಾಧಿಕಾರದಿಂದ ಮಾತ್ರ ಕಾಂಗ್ರೆಸ್ಸು ನಮ್ಮದಾದೀತು. ಇಂದು ನಮ್ಮಲ್ಲಿ ನಮ್ಮದೇ ಸರಕಾರವಿದೆ. ವಯಸ್ಕರ ಮತದಾನ ಪದ್ಧತಿಯಲ್ಲಿ ನಾವು ಉಂಡ ಅನ್ನಕ್ಕೆ ಅರ್ಹರಾಗಿರುವೆವಾದರೆ, ನಾವು ಯಾರನ್ನು ಆರಿಸುವೆವೋ ಆ ಹುರಿಯಾಳುಗಳು ಜಯಶೀಲರಾಗಿ ಬರಬೇಕು ಎಂಬಷ್ಟು ಜನರ ಮೇಲೆ ನಮ್ಮ ಹಿಡಿತವಿರಬೇಕು. ಸೇವಾಗ್ರಾಮದಲ್ಲಿಯ ನಮ್ಮವರು ಮತದಾರರ ಪಟ್ಟಿಯಲ್ಲಿ ಸೇರುವುದನ್ನು ನಾನು ನಿಷೇಧಿಸಿದೆನು. ನಿಜವಾಗಿ ನಡೆದ ಸಂಗತಿಯೆಂದರೆ ಹಳ್ಳಿಯ ಜನರು ಬಂದು ಯಾರಿಗೆ ಮತ ಕೊಡಬೇಕೆಂಬ ಬಗ್ಗೆ ನಮ್ಮ ಬುದ್ಧಿವಾದವನ್ನು ಬೇಡಿದರು; ಏಕೆಂದರೆ, ನಾವು ತಮ್ಮ ನಿಜವಾದ ಸೇವಕರೆಂದೂ ನಮಗೆ ಸ್ವಾರ್ಥಸಾಧನೆಯ ಉದ್ದೇಶವಾವುದೂ ಇಲ್ಲೆಂದೂ ಅವರಿಗೆ ಗೊತ್ತಿತ್ತು.

“ಇಂದು ರಾಜಕಾರಣವು ಅನೀತಿಮಯವಾಗಿದೆ. ಅದರಲ್ಲಿ ಸೇರುವವರೆಲ್ಲ ಕಲಂಕಿತರಾಗುತ್ತಾರೆ. ನಾವು ಅದರಿಂದ ಪೂರ್ಣ ಅಲಿಪ್ತರಾಗಿರೋಣ. ಅದರಿಂದ ನಮ್ಮ ವರ್ಚಸ್ಸು ಬೆಳೆಯುವದು. ನಮ್ಮಲ್ಲಿ ಅಂತಃಶುದ್ಧಿಯು ಹೆಚ್ಚಿದಂತೆ ಜನತೆಯ ಮೇಲಿನ ನಮ್ಮ ವರ್ಚಸ್ಸು ಹೆಚ್ಚುತ್ತದೆ. ಅದಕ್ಕಾಗಿ ನಾವು ಪ್ರಯತ್ನಿಸುವ ಕಾರಣವೇ ಉಳಿಯುವದಿಲ್ಲ ನನ್ನ ಕಲ್ಪನೆಗಿಂತ [illegible] ಗಿದಲ್ಲ ಎಂದು [illegible] ಹತ್ತಿದೆ. ನನ್ನ [illegible] ನನ್ನ [illegible] ಉದ್ದೇಶವನ್ನು ಸಾಧಿಸಿಕೊಳ್ಳಬೇಕೆಂದು [illegible] ನನಗೆ ನನ್ನ ನೇತ್ರದಾನ ಮಾಡಿದೆನು.”

“ [illegible] ಕೇಳಿದರು. “ಅಂದರೆ [illegible] ಎಲ್ಲಿಯೋ ಇದರ ಅದನ್ನು [illegible] ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕರ್ತ [illegible] ಸೇವಿಸಲ್ಲಿ ಕೂಡಿರುವದು. ಅದಕ್ಕಾಗಿ [illegible] ಸಮಿತಿಯಲ್ಲಿ ಸೇರುವ ಅವಶ್ಯಕತೆಯಿಲ್ಲ. [illegible] ಸಾಮಾನ್ಯದಲ್ಲಿಯೆ ನಮ್ಮ ಕೆಲಸವಿದೆ. ಘಟನ [illegible] ಸಮಿತಿಯೊಂದು ಹೊಸ ಘಟನೆಯನ್ನು [illegible] ಪಡಿಸಹತ್ತಿದೆ. ಅದರಲ್ಲಿ ಆಗುವ ಬದಲಾವಣೆ [illegible] ಗಳಿಗಾಗಿ ತಲೆ ಕೆಡಿಸಿಕೊಳ್ಳಬೇಡಿ. ಸಿದ್ಧವಾಗು [illegible] ತಿರುವ ಘಟನೆಯಲ್ಲಿ ಗ್ರಾಮಪಂಚಾಯತ [illegible] ಉಲ್ಲೇಖವಿಲ್ಲ; ಗ್ರಾಮಪಂಚಾಯತಗಳ [illegible] ನಮ್ಮ ಭಾವೀ ರಾಜಕಾರಣದ ತಳಹದಿಯೆಂ [illegible] ಕಾಂಗ್ರೆಸ್ಸಿಗರು ಹೇಳುತ್ತ ಬಂದಿರುವ [illegible] ಎಂದು ಮುಂಚಿತವಾಗಿ ಶ್ರೀಮನ್ನಾರಾಯಣ [illegible] ಯುವರು. ನನಗೆ ಬರೆದು ತಿಳಿಸಿರುವರು. ಹಳ್ಳಿಗಳನ್ನು ನಾವು ಪುನರುಜ್ಜೀವಿಸ [illegible] ಬೇಕಾಗಿದೆ. ಅವನ್ನು ಸಮ್ಯಗ್ವಿಕಾಸ [illegible] ಶಿಕ್ಷಣಕೊಟ್ಟು ಹೆಚ್ಚು ಅಧಿಕಾರವ [illegible] ಅವುಗಳಿಗೆ ಕೊಡಬೇಕಾಗಿದೆ. ಹಳ್ಳಿಗೆ ಯೋಗ್ಯ ಸ್ಥಾನಮಾನಗಳು ಭಾವೀ ಘಟನೆಯಲ್ಲಿ ಸಿಕ್ಕದಿದ್ದರೆ ಅದರಿಂದ ಪ್ರಯೋಜನವೇನಾ [illegible] ಬಲ್ಲದು? ಶ್ರೀಮನ್ನಾರಾಯಣಜಿಯವರು ಬರೆದುದು ಸರಿಯೆಂದು ನನಗೆನಿಸುತ್ತದೆ. ಆದರೆ ಇಂದಿನ ಕಾಂಗ್ರೆಸ್ಸಿನ ಮುಖಂಡ [illegible] ನಮ್ಮ ಕಲ್ಪನಾಸೃಷ್ಟಿಯಲ್ಲಿದ್ದ ಸಮಾಜ ರಚನೆ [illegible] ಯಾಗಲಾರದೆಂಬುದನ್ನು ನಾವು ತಿಳಿದುಕೊಳ್ಳಲಿಕ್ಕೇಬೇಕು. ಘಟನೆಯ ಸ್ವರೂಪ ಕೊನೆಗೆ ಎಂತಾಗಬಲ್ಲದೆಂದು ಯಾರೂ ಹೇಳಲಾರರು. ಅದನ್ನು ಸಿದ್ಧಮಾಡಲುದ್ಯುಕ್ತರಾದವರಿಗೆ ಅದನ್ನು ಬಿಟ್ಟುಬಿಡಿರೆಂದು ನಾನು ಹೇಳುತ್ತೇನೆ. ರಚನಾತ್ಮಕ ಕಾರ್ಯಕರ್ತರು ತಮ್ಮ ಶಕ್ತಿಸಾಮರ್ಥ್ಯಗಳನ್ನು ಸಂಘಟಿಸಿಕೊಳ್ಳ [illegible] ಇದು ಸಾಧ್ಯವಾಗುವ ಮಾರ್ಗವೆಂದರೆ ವಿವಿಧ ರಚನಾತ್ಮಕ ಸಂಸ್ಥೆಗಳು ಒಗ್ಗಾಡ [illegible] ವದು. ಹಾಗೆ ನಾವು ಮಾಡಲಾರೆವಾದರೆ ಪ್ರತಿಯೊಂದು ಸಂಘವು ತನ್ನ ಕಾರ್ಯವನ್ನು ಮಾಡುತ್ತ ಶಕ್ಯವಿದ್ದಷ್ಟು ಶಕ್ತಿಯನ್ನು ಸಂಗ್ರಹಿಸಿಕೊಳ್ಳಲಿ. ತನ್ನ ಚಟುವಟಿಕೆಗಳ ಗುರುತು ಬುದ್ಧಿಕೌಶಲ್ಯವೇ ಆಗಬೇಕೆಂಬತ್ತ ಹೆಚ್ಚು ಅದು ಗಮನಿಸಬೇಕು. ಚರಖಾ ಸಂಘವು ಅ [illegible] ದೊಡ್ಡ ಸಂಸ್ಥೆ. ಅದಕ್ಕೆ ಬಂಡವಲ [illegible] ಇದೆ. ವಿಕೇಂದ್ರೀಕರಣದ ಪದ್ಧತಿಯನ್ನು ಅದು ಅನುಸರಿಸಹತ್ತಿದೆ. ಅದರಲ್ಲಿಯ ಗಂಡಾಂತರ ಮತ್ತು ಅಡಚಣೆಗಳ ಅರಿವು ನನಗಿಲ್ಲದಿಲ್ಲ. ಹೆಚ್ಚು ಶ್ರೇಷ್ಠ ಪ್ರಗತಿಪರ ಖಾದೀ ಕಾರ್ಯಕರ್ತರನ್ನು ನಾವು ತಯಾರ ಮಾಡಬೇಕಾಗಿದೆ. ಅಲ್ಲಿಯ ವರೆಗೆ ಸಮಾಜ ಪಂಚಾಯತ ರಾಜ್ಯವು ಕಾರ್ಯಕಾರಿಯಾಗಲಾರದು. ತಮ್ಮ [illegible] ವಾಗಿ ಹಣವನ್ನು ಸಂಪಾದಿಸುವುದರಿಂದ [illegible] ಇಲ್ಲವೆ ನೂಲುವವರಿಗೆ ಮತ್ತು ನೇಕಾರರಿಗೆ ಕೆಲ ಕೂಲಿಯನ್ನು ಸಂಪಾದ್ಯದಕ್ಕಾಗಿ ಮಾತ್ರ ಚರಖಾ ಸಂಘದ ಕಾರ್ಯಕರ್ತರಿರುವದಿಲ್ಲ. ಅಹಿಂಸಾತ್ಮಕ ಸಮಾಜವನ್ನು ರಚಿಸಬೇಕೆಂಬ ಉನ್ನತ ಧ್ಯೇಯವೇ ಅವರದಾಗಿರಬೇಕು. [illegible] ಅವರ ಮಹತ್ವಾಕಾಂಕ್ಷೆಗೆ ಅದೇ ತಕ್ಕ [illegible] ಈ ಕಾರ್ಯದಲ್ಲಿ ಅವರು ಅಪೇಕ್ಷಿಸಿದ ಪ್ರಗತಿಯನ್ನು ಹೊಂದಿಲ್ಲ. ನಮ್ಮ ಖಾದೀ ಕಾರ್ಯಕರ್ತರು ಕೇವಲ ಸಂಬಳಕ್ಕಾಗಿಯೋ ಅಲ್ಲಿ ದುಡಿಯುತಿದ್ದರೆ ಅಹಿಂಸಾತ್ಮಕ ಸಮಾಜ ರಚನೆಯನ್ನು ಮಾಡುವ ನಮ್ಮ ಕನಸನ್ನು ಬಿಟ್ಟುಕೊಡುವುದೇ ವಿಹಿತವಾದುದು. ನಮ್ಮ ಅಂತಃ ವಿಶುದ್ಧಿಯಿಂದಲೆ ಯಶಸ್ಸು ಸಿಕ್ಕಬಲ್ಲದು. ಅಸಹನೆ ಘಾತಕವಾಗಬಲ್ಲುದು.

“ಇಂದು ನಮ್ಮ ಕಾರ್ಯಕರ್ತರೆಲ್ಲ ಬಹುತರ ನಗರವಾಸಿಗಳು. ಹಿಂದುಸ್ತಾನದ ಬಡಹಳ್ಳಿಗಳನ್ನು ದಾರಿದ್ರ್ಯ ಭೀಕರ ಬೆನ್ನಟ್ಟಿದೆ. ತನ್ನ ಪ್ರಾಥಮಿಕ ಅವಶ್ಯಕತೆಗಳ ಪೂರೈಕೆಗಿಂತ ಹೆಚ್ಚಿಗೆ ಅವರ ದೃಷ್ಟಿ ಹರಿಯದು. ಅಹಿಂಸೆಯನ್ನು ಅವರು ಅರಿಯರು. ಅವರಿಗೆ ಆ ಬಗ್ಗೆ ನಾನು [illegible]

(೧೧ ನೇ ಪುಟಕ್ಕೆ)

ಗಾಂಧೀಜಿ ಮತ್ತು ರಚನಾತ್ಮಕ ಕಾರ್ಯಕ್ರಮದ ಭವಿಷ್ಯತ್ತು

(೯ ನೇ ಪುಟದಿಂದ ಬಂದುದು)

ತಿಳುವದೂ ಇಲ್ಲ; ಆದರೆ ಅವನೊಬ್ಬ ಒಳ್ಳೆ ಕೃತಿಶೀಲನಾಗಿ ಉಪಜೀವನಕ್ಕೆ ಸಾಕಾಗು ವಷ್ಟು ಕೂಲಿ ಅವನಿಗೆ ದೊರೆಯಬೇಕೆಂದು ನಾನು ಬಯಸುವೆ. ನಮ್ಮ ಕಾರ್ಯ ಕ್ಷೇತ್ರ ಕಡಿಮೆಯಿದ್ದರೆ ಅಡ್ಡಿಯಿಲ್ಲ. ಆದರೆ ಅದರಲ್ಲಿ ತನ್ಮಯರಬೇಕು. ಕೆಲ ತಿಂಗಳುಗಳಲ್ಲಿ ಘಟನೆಯನ್ನು ಸಿದ್ಧಪಡಿಸುವ ಕಾರ್ಯ ಮುಗಿಯಬಹುದು. ಮುಂದೇನು? ಅದನ್ನು ಕಾರ್ಯಕಾರಿ ಮಾಡುವ ಮತ್ತು ಯಶಸ್ವೀಗೊಳಿಸುವ ಹೊಣೆ ನಿಮ್ಮ ಮೇಲೆ ಬೀಳುವದು. ನಿಮ್ಮ ಮನಸ್ಸಿಗೆ ಒಪ್ಪುವಂತಹ ಘಟನೆಯು ಸಿದ್ಧವಾಗುತ್ತದೆ. ಆದರೆ ಅದು ಶಾಶ್ವತವಾಗಿಯಾಗ ಬಲ್ಲೆಂದೂ ತಿಳಿಯಬೇಡಿ. ಆಯಾ ವರುಷಗಳ ನಂತರ ಯಾವನಾದರೊಬ್ಬನು ಮುಂದೆ ಬಂದು ನಿಮ್ಮ ಸರತಿಯು ಮುಗಿಯಿತು, ಈಗ ನಮಗೆ ಅವಕಾಶ ಕೊಡಿರಿ ಎಂದು ಕೇಳಬಹುದು. ನೀವು ಪರಾಜಯವನ್ನು ಒಪ್ಪಿಕೊಳ್ಳಬೇಕಾಗುವದು. ಅವರು ಅಧಿಕಾರವನ್ನು ಕಸಿದುಕೊಳ್ಳಲು ಪ್ರಯತ್ನಿಸಬಹುದು, ಸರ್ವಾಧಿಕಾರಿತ್ವವನ್ನು ಪ್ರಸ್ಥಾಪಿಸಿ ಕಾಂಗ್ರೆಸ್ಸನ್ನು ಹತ್ತಿಕ್ಕಬಹುದು. ತದ್ವಿರುದ್ಧವಾಗಿ ನೀವು ಅಧಿಕಾರವನ್ನು ಸ್ವೀಕರಿಸದೆ ಜನತೆಯ ಮೇಲೆ ವರ್ಚಸ್ಸನ್ನು ಪಡೆದಿದ್ದಾದರೆ ನಿಮಗೆ ಯೋಗ್ಯರೆಂದು ಎನಿಸಿದವರನ್ನು ಚುನಾವಣೆಯಲ್ಲಿ ಆಯ್ದು ತರಬಲ್ಲಿರಿ. ಮತದಾರರು ನಿಮ್ಮ ನಿಯಂತ್ರಣದಲ್ಲಿ ಬರುವ ವರೆಗೆ ಸೇವಕತ್ವದ ಹಂಬಲವನ್ನು ಬಿಟ್ಟುಗೊಡಿರಿ. ಸಾಯುವೇರನ್ನೇ ನಂಬಿ ಅದನ್ನೇ ಶಕ್ಯವಿದ್ದಷ್ಟು ಅಭಿವೃದ್ಧಿ ಪಡಿಸಿರಿ. ಆತ್ಮಶುದ್ಧಿಗೆ ಹೆಚ್ಚು ಮಹತ್ವ ಕೊಡಿರಿ. ಅದೊಂದೇ ನಿಮ್ಮ ಒರೆಗಲ್ಲಾಗಿರಲಿ. ಇಂಥ ಭಾವನೆಯಿಂದ ಪ್ರೇರಿತರಾದ ಕೆಲವೇ ಜನರು ಇದೇ ವಾತಾವರಣವನ್ನೇ ಮಾರ್ಪಡಿಸಬಲ್ಲರು. ಜನರಿಗೂ ಈ ಬದಲಾವಣೆಯ ಅರಿವಾಗಿ ಕಾರ್ಯಮಾಡಲು ಹಿಂದೆ ಬೀಳರು. ನಿಮ್ಮ ಈ ಕೆಲಸವು ಬಹಳ ಬಿಗಿಯಾದುದು ಮತ್ತು ಕಠಿನವಾದದ್ದಾದರೂ ಅದರ ಪರಿಣಾಮ ಮಾತ್ರ ಬಹಳ ಪ್ರಯೋಜನಕಾರಿಯಾಗಿದೆ.

ಪ್ರಶ್ನೆ— ಜನರು ನಮ್ಮೊಡನಿದ್ದಾರೆ. ಆದರೆ ಸರಕಾರ ನಮ್ಮ ಪ್ರಯತ್ನಕ್ಕೆ ವಿಘ್ನವೊಡ್ಡುತ್ತಿದೆ; ನಾವೇನು ಮಾಡಬೇಕು-?

ಗಾಂಧೀಜಿ— ಜನರು ನಿಮ್ಮೊಡನಿದ್ದರೆ, ಸರಕಾರ ನಿಮ್ಮತ್ತ ಅನುಕೂಲ ಕಟಾಕ್ಷವನ್ನು ಹರಿಯಿಸಲೇಬೇಕು. ಅದು ಹಾಗೆ ಮಾಡದಿದ್ದರೆ, ಅದನ್ನು ಮೂಲೆಗೊತ್ತರಿಸಿ ಅದರ ಸ್ಥಾನದಲ್ಲಿ ಇನ್ನೊಂದನ್ನು ಸ್ಥಾಪಿಸಲಾಗುವದು. ಲಾರ್ಡ ವೇವೆಲ್ಲರ ಕಾಲದಲ್ಲಿ ಕೂಡ, ನಿಮಗೆ ನಿಮ್ಮ ಶಕ್ತಿಯ ಅರಿವೇ ಇಲ್ಲ; ಹಾಗೆ ಅರಿವಿದ್ದಿದ್ದರೆ ಲಾರ್ಡ ವೇವೆಲ್ಲರನ್ನು ಮನ ಬಂದಾಗ ತೆರೆದು ಹಾಕಿಬಿಡಬಹುದು, ಎಂದು ಜನರಿಗೆ ನಾನು ಹೇಳುತ್ತಿದ್ದೆ. ನಮ್ಮನ್ನು ನೈತಿಕ ಕಾಯಿದೆಯಿಂದ ಮಾತ್ರ ಆಳಲಾದೀತು ಎಂಬುದು ಗೊತ್ತಾದ ಕೂಡಲೆ ಬ್ರಿಟಿಶರು ಅದನ್ನು ತೆಗೆದುಹಾಕಿದರು. ಅದು ಅವರಿಗೆ ಕೀರ್ತಿ ತರುವಂಥ ಕೆಲಸ; ಏಕೆಂದರೆ, ಅವರು ನೈತಿಕ ಕಾಯಿದೆಯನ್ನು ಸುಲಭವಾಗಿ ಹೇರಿಬಿಡಬಹುದಾಗಿತ್ತು.

ಪ್ರಶ್ನೆ ಎಲ್ಲ ಸಂಘಗಳ ಚಟುವಟಿಕೆಗಳನ್ನೂ ಸರಿಹೊಂದಿಸಲು ಮತ್ತು ಒಳಪಡಿಸಿಕೊಳ್ಳಲು ಎಲ್ಲವುಗಳ ಮೇಲಿನ ಒಂದು ಸಂಘ ಇರಬೇಡವೆ?

ಗಾಂಧೀಜಿ— ಈ ಕೆಲಸಕ್ಕೆ ಒಂದು ಭಿನ್ನವೇ ಆದ ಸಂಘಟನೆ ಇರತಕ್ಕದ್ದು ಅವಶ್ಯಕವಿಲ್ಲ. ಬೇಕಾದದ್ದೆಂದರೆ ಸಂಘಗಳ ಕೆಲಸದ ಸರಿಹೊಂದಿಕೆ, ಸಮನ್ವಯ. ಬೇರೆ ಬೇರೆ ಸಂಘಗಳು ಇಲ್ಲಿಯ ವರೆಗೆ ಪ್ರತ್ಯೇಕವಾಗಿಯೂ ಸ್ವತಂತ್ರವಾಗಿಯೂ ಕೆಲಸ ಮಾಡಿವೆ. ಸಮಗ್ರ ಗ್ರಾಮಸೇವೆಗಾಗಿ ನಾವೊಂದು ಸಮನ್ವಯ ಸಮಿತಿಯನ್ನು ಸ್ಥಾಪಿಸಲು ಯತ್ನಿಸಿದೆವು. ಆದರೆ ಅದು ಕಾರ್ಯಕಾರಿಯಾಗಲಿಲ್ಲ. ನಾವೆಲ್ಲರೂ ಒಂದಾದರೆ ಕೇಂದ್ರ ಸರಕಾರದ ಶಾಖೆಗಳಂತೆ ಕೆಲಸ ಮಾಡಬಲ್ಲೆವು. ಚರಕಸಂಘದ ಸದಸ್ಯರು ಗ್ರಾಮೋದ್ಯೋಗದ ಕೆಲಸವನ್ನು ಮಾಡುವರು. ತಾಲೀಮಿನ ಪ್ರಾರಾಟದ ಕೆಲಸವಿದೆಯೆನ್ನಿರಿ. ಅದನ್ನೇಕೆ ಚರಕ ಸಂಘ ತೆಗೆದುಕೊಳ್ಳಬಾರದು? ನಮ್ಮ ಕೆಲಸಗಾರರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕಾಗಿದೆ. ಅವರಿಗಾಗಿ ನಾವು ಪ್ರತ್ಯೇಕ ಶಾಲೆಯೊಂದನ್ನು ಸ್ಥಾಪಿಸಬೇಕೇ? ಅದು ತಾಲೀಮೀ ಸಂಘದ ಕರ್ತವ್ಯವಲ್ಲವೇ? ಇಂಥ ವಿಷಯಗಳಲ್ಲೂ ನಾವು ಸಹಕರಿಸದಿದ್ದರೆ ಅಹಿಂಸೆ ಹೇಗೆ ಕೆಲಸ ಮಾಡುತ್ತದೆಂಬುದನ್ನು ನಾವು ತಿಳಿದಿಲ್ಲ ಎಂಬುದನ್ನು ಅದು ತೋರಿಸುತ್ತದೆ. ಎಲ್ಲ ಸಂಘಗಳೂ ಅನುಸರಿಸಬೇಕಾದ ಧೋರಣದ ಸಾಮಾನ್ಯ ರೂಪರೇಖೆಗಳನ್ನು ಕೇಂದ್ರಸಂಘ ವಿಧಿಸುತ್ತದೆ. "ಮಾಡು ಇಲ್ಲವೆ ಮಡಿ" ಎಂಬ ಪ್ರತಿಜ್ಞೆಗೆ ಬದ್ಧರಾಗಿ ನಾವು ಪ್ರಥಮಾನಸ್ಕರಾದರೆ ಜಯಶೀಲರಾಗಿಯೇ ತೀರಬೇಕು.

ಆರ್ಯನಾಯಕಂ ಜಿ ಒಂದು ಪ್ರಾಥಮಿಕ ಅನೌಪಚಾರಿಕ ಪರಿಷತ್ತಿನಲ್ಲಿ ವಿವಿಧಸಂಘಗಳ ಅಧ್ಯಕ್ಷರೂ ಕಾರ್ಯದರ್ಶಿಗಳೂ ಕೂಡಲಿ ಮತ್ತು ಚರ್ಚಾನಂತರ ಸಂಯೋಜನೆಯ ಅರ್ಥ ಪ್ರಕಾರಗಳನ್ನೂ ತೊಂದರೆಗಳನ್ನೂ ಗಾಂಧಿಯವರೆದುರು ಇಡಲಿ.

ಶಂಕರರಾವ ದೇವ- ಇದು ಈ ಕೆಲಸಕ್ಕೆ ಸರಿಯಾದ ರೀತಿಯಲ್ಲ. ಕಾರ್ಯಕರ್ತರು ಮೊದಲು ಸೇರಬೇಕು. ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ ಸಭೆಯಿಂದ ಯೋಗ್ಯವಾತಾವರಣವುಂಟಾಗುವಂತಿಲ್ಲ. ಅದು ಸಂಕುಚಿತ ಮತ್ತು ವೈಯಕ್ತಿಕ ರೀತಿ.

ಗಾಂಧೀಜಿ- ಅದು ಸಂಕುಚಿತವೂ ಅಲ್ಲ ವೈಯಕ್ತಿಕವೂ ಅಲ್ಲ. ಕಾರ್ಯಕರ್ತರ ಸಮ್ಮೇಲನ ಕೊನೆಗಲ್ಲದೆ ಮೊದಲು ಆಗಕೂಡದು. ಚರಕ ಸಂಘಕ್ಕೊಂದು ಕಾರ್ಯಕಾರಿ ಮಂಡಲವುಂಟು. ಶ್ರೀ ಜಾಜೂಜಿಯವರು ಅದರೊಡನೆ ಮೊದಲು ಚರ್ಚಿಸಬೇಕು. ಸಾಮಾನ್ಯ ಕಾರ್ಯಕರ್ತನಿಗೆ ಇದೆಲ್ಲ ಅರ್ಥವಾಗುವದು ಕೂಡ ಕಠಿನ.

ದೇವ- ಬುದ್ಧಿಶಾಲಿಗಳಾದ ರಚನಾತ್ಮಕ ಕಾರ್ಯಕರ್ತರು ನಮ್ಮಲ್ಲಿ ಹಲವರಿದ್ದಾರೆ. ಅವರನ್ನು ನೆರೆಸೋಣ.

ಗಾಂಧೀಜಿ ನಾವಿಬ್ಬರೂ ಪರಸ್ಪರ ವಿರುದ್ಧ ಉದ್ದೇಶಗಳಿಂದ ಮಾತಾಡುವಂತಿದೆ. ನಾನು ಸೂಚಿಸಿದ ಚರ್ಚೆಗಳು ತಾಂತ್ರಿಕ ವಿಚಾರ ಭೂಯಿಷ್ಠವಾಗಿವೆ. ಅದಕ್ಕೆ ತಜ್ಞರೇ ಬೇಕು. ಸಾಮಾನ್ಯ ಕಾರ್ಯಕರ್ತರು ಇಂಥ ಚರ್ಚೆಗಳಲ್ಲಿ ಅಪ್ರತಿಭರಾಗುವರು. ಕಂಬಗಳೂ ಊರುಗೋಲುಗಳೂ ಒಂದಾಗಲಿ. ಆಗ ಎಲ್ಲರಲ್ಲಿಯೂ ಶಕ್ತಿಯ ತೇಜಸ್ಸು ಕಾಣಿಸಿಕೊಳ್ಳುವದು. ನನ್ನನ್ನು ಮರೆತುಬಿಡಿರಿ. ಡಾ. ಝಾಕೀರ ಹುಸೇನರು ಸಮರ್ಥ ಸಂಘಟಕರು. ನನ್ನ ಸಾನ್ನಿಧ್ಯದ ಅಭಿಮಂತ್ರಿತ ವಾತಾವರಣದಲ್ಲಿ ಏನನ್ನೂ ತೀರ್ಮಾನಿಸುವದು ಬೇಡೆಂದು ಅವರು ಸೂಚಿಸಿದ್ದಾರೆ. ಅದುದರಿಂದ ಈ ವಿಷಯವನ್ನು ಸೇವಾಗ್ರಾಮದಲ್ಲೆ ಪುನಃ ವಿಚಾರಿಸಬೇಕೆಂದು ಅವರ ಸಲಹೆ. ಇದಕ್ಕೆ ನನ್ನ ಒಪ್ಪಿಗೆ. ಅಲ್ಲಿ ವಾತಾವರಣ ಇಲ್ಲಿಗಿಂತ ಶಾಂತವೂ ಜಾತೀಯ ವಿಷದಿಂದ ಮುಕ್ತವೂ ಆಗಿದೆ. ನಾನಿಲ್ಲಿ ಬಂದಾಗ ಈ ವಿಷಯಗಳ ಬಗ್ಗೆ ಮಾತಾಡಬೇಕಾಗೀತೆಂದು ಬಗೆದೇ ಇರಲಿಲ್ಲ. ಕಾಂಗ್ರೆಸ್ಸಿನ ಘಟನಾ ಸಮಿತಿಯಲ್ಲಿ ಕೆಲ ರಚನಾತ್ಮಕ ಕಾರ್ಯಕರ್ತರಿರುವರೆಂದು ನನಗೆ ತಿಳಿಸಲಾಗಿತ್ತು; ಅವರು ಕಾಂಗ್ರೆಸ್ಸಿನಲ್ಲಿ ತಮ್ಮ ವರ್ಚಸ್ಸನ್ನು ಬೀರುವ ಬಗೆ ಹೇಗೆ? ಕಾಂಗ್ರೆಸ್ಸಿನ ಮೂಲಕ ನೀವು ಬಯಸಿದ ಘಟನೆ ದೊರೆಯ ಬಹುದೆಂದು ನಿರೀಕ್ಷಿಸಬೇಡಿರೆಂದು ಹೇಳಲು ನಾನಿಲ್ಲಿ ಬಂದೆ. ನಿಮಗೆ ದೊರೆಯುವ ಘಟನೆಯು ಪರಿಣಮವಾಗಿ ರಚನಾತ್ಮಕ ಕಾರ್ಯಕ್ಕೆ ಪ್ರತ್ಯಕ್ಷ ವಿಘ್ನವಾಗುವಂತಿಲ್ಲದಿದ್ದರೆ ತೀರಿತು. ನಾನು ನಿಮಗೆ ಹೇಳಬೇಕೆಂದು ಮಾಡಿಕೊಂಡಿದ್ದ ಇನ್ನೊಂದು ಮಾತೆಂದರೆ, ವಿವಿಧ ಸಂಘಗಳು ತಂತಮ್ಮ ಕ್ಷೇತ್ರಗಳಲ್ಲಿ ಸಂಶೋಧನದ ಪ್ರಯೋಗಶಾಲೆಗಳಾಗಬೇಕು. ನಮ್ಮ ರಚನಾತ್ಮಕ ಕಾರ್ಯಸಂಸ್ಥೆಗಳು ಪ್ರಜಾತಂತ್ರಗಳಲ್ಲ. ಅವು ಪ್ರಜಾತಂತ್ರವನ್ನು ಕಟ್ಟುವ ಸಾಧನಗಳು. ಕಾಂಗ್ರೆಸ್ಸು ನಮಗೆ ತನ್ನ ಹೆಸರನ್ನೂ ಪ್ರತಿಷ್ಠೆಯನ್ನೂ ಎರವು ಕೊಟ್ಟಿದೆ. ಪ್ರತಿಫಲವಾಗಿ ಅದು ನಮ್ಮ ನಿಜವಾದ ಸೇವಾಕಾರ್ಯದಿಂದ ಪ್ರತಿಷ್ಠೆಯನ್ನು ಪಡೆಯುತ್ತದೆ. ರಚನಾತ್ಮಕ ಕಾರ್ಯ ಸಂಸ್ಥೆಗಳಿಗೂ ಕಾಂಗ್ರೆಸ್ಸಿಗೂ ಇರುವ ಸಂಬಂಧ ಆಧ್ಯಾತ್ಮಿಕ ಸ್ವರೂಪದ್ದು. ಅದನ್ನು ಬೇಕಾದಾಗ ಮುರಿಯಬಹುದು. ತಜ್ಞತ್ವೇನ ನಾವು ಕಾಂಗ್ರೆಸ್ಸಿಗೆ ಹೀಗೆ ಮಾಡಬೇಕೆಂಬ ಸೂಚನೆ ಕೊಡಲು ಸಮರ್ಥರಾಗಬೇಕು.

ಪ್ರಶ್ನೆ ಕಾಂಗ್ರೆಸ್ಸಿನ ಮೂಲಕವೇ ಇದನ್ನು ಮಾಡಿಸಕೂಡದೇಕೆ?

ಗಾಂಧೀಜಿ— ಏಕೆಂದರೆ ಕಾಂಗ್ರೆಸ್ಸಿಗರಿಗೆ ರಚನಾತ್ಮಕ ಕಾರ್ಯದಲ್ಲಿ ವಿಶೇಷ ಆಸ್ಥೆಯಿಲ್ಲ. ಅದಿದ್ದಿದ್ದರೆ ನಾವಿಲ್ಲಿ ಸೇರುವ ಪ್ರಸಂಗವೇ ಬರುತ್ತಿದ್ದಿಲ್ಲ.

ಪ್ರಶ್ನೆ- ಕಾಂಗ್ರೆಸ್ಸಿನ ಮನೋವೃತ್ತಿ ಹೀಗಿದ್ದ ಮೇಲೆ ರಚನಾತ್ಮಕ ಕಾರ್ಯ ಸಂಸ್ಥೆಗಳಿಗೆ ಕಾಂಗ್ರೆಸ್ ಘಟನೆಯಲ್ಲಿ ಇಂಬುಗೊಡುವದರಿಂದ ಫಲವೇನು?

ಗಾಂಧೀಜಿ- ಏಕೆಂದರೆ, ಘಟನೆಯಿಂದಲೆ ಜನರ ಮನೋವೃತ್ತಿ ರೂಪಿಸಲ್ಪಡುತ್ತದೆ ಜನರು ತಮಗೆ ಸರಿ ಕಂಡದ್ದನ್ನೆಲ್ಲ ಮಾಡದಿರಬಹುದು. ಆದರೂ ನಮ್ಮ ಔದಾಸೀನ್ಯದಿಂದಲೇ ನಮ್ಮ ಇಷ್ಟಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯ.

ಪ್ರಶ್ನೆ- ಶಾಸನ ಸಭೆಯಲ್ಲಿ ಕೂಲಿಕಾರರಿಗೆ ಅವರ ಪ್ರತಿನಿಧಿಗಳ ಮೂಲಕ ಪ್ರಾತಿನಿಧ್ಯ ಕೊಡಲಾಗಿದೆ. ವಿಶ್ವವಿದ್ಯಾಲಯಗಳಿಗೆ ವಿಶೇಷ ಸ್ಥಾನಗಳು ಕಾದಿರಿಸಲ್ಪಟ್ಟಿವೆ. ರಚನಾತ್ಮಕ ಕಾರ್ಯ ಸಂಸ್ಥೆಗಳು ಅ. ಭಾ. ಕಾಂ. ಸಮಿತಿಗೆ ಸಾಮಾನ್ಯ ಪ್ರತಿನಿಧಿಗಳಂತೆಯೂ ವರ್ತಿಸಬಲ್ಲ ವೃತ್ತಿಪ್ರಾತಿನಿಧ್ಯವುಳ್ಳವರನ್ನೇಕೆ ಕಳಿಸಬಾರದು?

ಗಾಂಧೀಜಿ— ಬೇಡ, ಈ ಕಲಬೆರಕೆ ಸಲ್ಲದು. ವೃತ್ತಿಪ್ರಾತಿನಿಧ್ಯಕ್ಕೆ ಅಡ್ಡಿಯಿಲ್ಲ. ಆದರೆ ಸಾಮಾನ್ಯ ಪ್ರಾತಿನಿಧ್ಯದಲ್ಲಿ ಇರುವ ಭ್ರಷ್ಟಾಚಾರವನ್ನು ನೋಡಿದರೆ ನನಗೆ ಅಂಜಿಕೆ ಬರುತ್ತದೆ. ಪ್ರತಿಯೊಬ್ಬನೂ ಆದಷ್ಟು ಮತಗಳನ್ನು ತನ್ನ ಮುಷ್ಟಿಯಲ್ಲಿಟ್ಟುಕೊಳ್ಳಲು ಹೆಣಗುತ್ತಾನೆ. ಏಕೆಂದರೆ ಮತಗಳೆಂದರೆ ಅಧಿಕಾರಕ್ಕೆ ನಿಚ್ಚಣಿಕೆ.

ಪ್ರೌಢ ಮತದಾನ ಪದ್ಧತಿಯಲ್ಲಿ ಅರ್ಹನಾದ ಪ್ರತಿಯೊಬ್ಬನಿಗೂ ಮತಾಧಿಕಾರವುಂಟು. ವಿವಿಧ ಸಂಘಗಳ ಅಂಥ ಎಲ್ಲ ಸದಸ್ಯರೂ ಸೇರಿ ಒಂದು ಸಂಸ್ಥೆಯನ್ನು ಮಾಡಿಕೊಳ್ಳಲಿ. ಕಾಂಗ್ರೆಸ್ ಕಾರ್ಯ ಸಮಿತಿಯೂ ಅ. ಭಾ. ಕಾಂಗ್ರೆಸ್ಸೂ ರಚನಾತ್ಮಕ ಕಾರ್ಯಗಳ ವಿಷಯದಲ್ಲಿ ಸಲಹೆ ಕೊಡಲು ಆ ಸಂಸ್ಥೆಯವರು ನೇಮಿಸುವವರನ್ನು ತೆಗೆದುಕೊಳ್ಳಲಿ. ದೇಶದಲ್ಲಿ ಇಷ್ಟೆಲ್ಲ ಕೂಲಿಕಾರ ಸಂಘಗಳಿವೆ. ಅಹಮದಾಬಾದ ಮಜದೂರ ಸಂಘವಿದೆ, ಚರಕಸಂಘವಿದೆ, ಗೋಸೇವಾಸಂಘವಿದೆ, ವಣಿಕ್ಸಂಘವಿದೆ, ಇನ್ನೂ ಎಷ್ಟೋ ಇವೆ. ಕಾಂಗ್ರೆಸ್ಸು ಅವೆಲ್ಲವುಗಳ ಪ್ರತಿನಿಧಿ ತಾನೆಂದುಕೊಳ್ಳುತಿದೆ. (ಕಾಂಗ್ರೆಸ್ಸು ಸಂಸ್ಥಾನಗಳ ನರೇಂದ್ರರ ಪ್ರಾತಿನಿಧ್ಯವನ್ನು ಕೂಡ ತನ್ನಲ್ಲಿ ಅಧಿರೋಪಿಸಿಕೊಂಡಿದೆ. ಆದರೆ ನಿಮ್ಮ ಯೋಜನೆಯಲ್ಲಿ ನರೇಂದ್ರ ಮಂಡಲವನ್ನು ಸೇರಿಸಿಕೊಳ್ಳಿರೆಂದು ನಾನು ಹೇಳಲಾರೆ) ಜೀವಂತ ಸಂಸ್ಥೆಗಳನ್ನೆಲ್ಲ ಒಡನೆ ಸೇರಿಸಿಕೊಳ್ಳಿರಿ. ನಿಮ್ಮಲ್ಲಿರುವ ಕಿಲುಬನ್ನೆಲ್ಲ ತೊಳೆದುಕೊಂಡು ಶುದ್ಧರಾಗಿರಿ. ಅಧಿಕಾರಗ್ರಹಣದ ಹುಚ್ಚು ಬಿಡಿರಿ, ಅಂದರೆ ಅಧಿಕಾರಕ್ಕೆ ಮಾರ್ಗದರ್ಶನಮಾಡಿ ಅದನ್ನು ಯೋಗ್ಯ ಮಾರ್ಗದಲ್ಲಿ ಪ್ರೇರಿಸುವ ಶಕ್ತಿ ನಿಮಗೆ ಬರುವದು. ಇದೇ ಮುಕ್ತಿಮಾರ್ಗ. ಇದೇ ಹುಟ್ಟಿದ ನಮ್ಮ ಸ್ವಾತಂತ್ರ್ಯದ ಕೊರಳು ಹಿಸುಕುವಂತೆ ಕಾಣುವ ಭ್ರಷ್ಟಾಚಾರವನ್ನು ಹೋಗಲಾಡಿಸಲು ಅನ್ಯೋಪಾಯವಿಲ್ಲ.

ದಿಲ್ಲಿ — ಪ್ಯಾರೇಲಾಲ

೮-೩-೪೯

ಹಿರಿಯೋಲಗದಲ್ಲಿ ಹಿಂದೂ ಕಾಯಿದೆ

ಹಿಂದೂ ಕಾಯಿದೆ ಮಸೂದೆಯ ಚರ್ಚೆ ಹಿರಿಯೋಲಗದಲ್ಲಿ ಪ್ರಾರಂಭವಾಗಿದ್ದು ೩೭ ಸದಸ್ಯರು ಆ ಬಗ್ಗೆ ಮಾತಾಡುವವರಿದ್ದಾರೆಂದು ತಿಳಿಯುತ್ತದೆ. ಶ್ರೀಮತಿ ದುರ್ಗಾಬಾಯಿಯವರು ಮಸೂದೆಯನ್ನು ಸಮರ್ಥಿಸಿ ಮಾತಾಡಿದರೆ ಪಂ. ಲಕ್ಷ್ಮೀಕಾಂತ ಮೈತ್ರ ಹಾಗು ಬಾಬು ರಾಮನಾರಾಯಣ ಸಿಂಗರು ಇದು ಹಿಂದೂ ಸಮಾಜದ ವಿರುದ್ಧ ನಡೆದ ಒಳಸಂಚೆಂದೂ ಹಿಂದೂ ಸಮಾಜವನ್ನು ಅಧೋಗತಿಗೊಯ್ಯುವದೆಂದೂ ಟೀಕಿಸಿ ಚುನಾವಣೆಗಳಾಗಿ ಹೊಸ ಸಭೆ ಬರುವ ವರೆಗೆ ಇದನ್ನು ಮುಂದೆ ಹಾಕಬೇಕೆಂದು ಒತ್ತಾಯಪಡಿಸಿದರು. ಮಂತ್ರಿಗಾಡಗೀಳರು ಮಸೂದೆಯನ್ನು ಸಮರ್ಥಿಸಿ ಅಂಬೇಡಕರರನ್ನು ಋಷಿ ಸಮಾನರೆಂದರು. ಮಸೂದೆಯನ್ನು ಪ್ರಥಮ ವಾಚನದಲ್ಲಿ ಟೀಕಿಸಲು ಹಾಗು ವಿರೋಧಿಸಲು ಕಾಂಗ್ರೆಸ್ ಸದಸ್ಯರಿಗೆ ಪಕ್ಷವು ಸ್ವಾತಂತ್ರ್ಯ ಕೊಟ್ಟಿದೆಯೆಂದು ತಿಳಿಯುತ್ತದೆ.

ಪಂಡಿತ ಜವಾಹರಲಾಲರು ೪ ನೇ ತಾರೀಕು ದಿಲ್ಲಿಯಲ್ಲಿ ಹಿಂದೀ ವಣಿಕ್ ಸಂಘದ ಸಭೆಯಲ್ಲಿ ಭಾಷಣಮಾಡುವಾಗ ಭೂಕಂಪವಾಗಿ ಬಾಗಿಲು ಕಿಡಿಕಿಗಳೆಲ್ಲ ಅದರಿದವು. ಒಂದು ಮಿನಿಟು ಸುಮ್ಮನಿದ್ದು ಪಂಡಿತಜಿ ಮತ್ತೆ ಭಾಷಣ ಮಾಡಿದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ: ೩

ಕೇಂದ್ರ ಮುಂಗಡ ಪತ್ರಿಕೆಯಲ್ಲಿ ತೋರಿಸಲ್ಪಟ್ಟ ಕರ ಸವಲತ್ತಿನಿಂದ ಬಂಡವಲಗಾರರಿಗೆ ಸಂತುಷ್ಟಿಯಾಗಲಿಲ್ಲ. ಪೇಟೆಯಲ್ಲಿ ದರಗಳು ಮೇಲೇರದೆ ಕೆಲವೊಂದು ಪಾಲುಗಳು ಕುಗ್ಗಿವೆ.

ಮುಂಬಯಿ ಡಾಯಿಂಗ್	೯೩೬-೪-೦
ಕೋಹಿನೂರು	೩೮೧-೪-೦
ಸ್ವದೇಶಿ	೨೭೫-೮-೦
ಗೋಕಾಕ	೩೮೨-೮-೦
ಸಂಚುರಿ	೩೩೮-೦-೦
ಸೆಂಟ್ರಲ ಇಂಡಿಯಾ	೩೩೮-೦-೦
ಟಾಟಾ ಸ್ಟೀಲ ಡೆಫರ್ಡ	೧೬೩೮-೧೨-೦
ಇಂಡಿಯನ್ ಅಯರ್ನ	೨೩-೭-೦
ಬೇಲಾಪುರ ಸಕ್ಕರೆ	೩೧೪-೦-೦
ಸೆಂಟ್ರಲ ಬ್ಯಾಂಕ್	೮೭-೧೨-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೮೬೨-೮-೦
ಬ್ಯಾಂಕ ಆಫ್ ಇಂಡಿಯಾ	೧೯೮-೮-೦

ಚಿನ್ನ ಬೆಳ್ಳಿ

ಚಿನ್ನ	೧೧೭-೧೨-೦
ಬೆಳ್ಳಿ	೧೮೮ ೦-೦
ಸಾವರಿನ್	---

ಅರಳೆ

ಇಂದಿನ ಬೆಲೆಗಳು ಹೀಗಿವೆ:

ಮೇ	೬೨೨-೮-೦
ಜುಲೈ	೬೨೧-೮-೦
ಸೆಪ್ಟೆಂಬರ	೬೨೧-೦-೦

ಎಣ್ಣೆಕಾಳು

ಶೇಂಗಾ	೧೮೩-೨ ೦
ಅಗಸಿ	೨೭-೮-೦
ಹೊಸ ಅಗಸಿ	೨೭-೧-೦
ಅಗಸಿ ಎಣ್ಣೆ	೧೬-೮-೦
ಔಡ್ಲ	..

ಶಿವಮೊಗ್ಗೆ

ತಾ. ೩

ದೇಶಾವರ ನಂ. ೧	ರೂ. ೩೦-೩೩
,, ೨	೨೭-೩೦
ರಾಜಾ ಆಲವು	೨೬-೨೯
ನುಲಿ	೨೭-೩೦
ಬೆಟ್ಟವಂತಿ	೧೭-೧೮
ಬೆಟ್ಟ	೧೬-೧೭

ಸಾಂಗಲಿ ಪೇಟೆ

ಅರಿಸಿಣ	೦೧೮-೧೨೩॥।
ಮೆಣಸಿನಕಾಯಿ	೧೩೦-೧೭೦
ಶೇಂಗಾ	೧೪೦
ಬೆಲ್ಲ	೪೨-೫೮

ರೂಪರಂಗ

ಕುಟುಂಬ ಚಿತ್ರಗಳು

ಹಾಲಿವುಡ್ಡಿನ ಬಿವರ್ಲಿ ಹಿಲ್ಸಿನ ರೂಪರಂಗದಲ್ಲಿ "ಕುಟುಂಬ ಚಿತ್ರಗಳು" ಎಂಬ ಮಾಲಿಕೆಯನ್ನು ಹೊರಗೆಡಹಲಿದ್ದಾರೆಂದು "ಫಿಲ್ಮ್ ವರ್ಲ್ಡ್" ಎಂಬ ಅಮೇರಿಕದ ಮಾಸಿಕದಲ್ಲಿ ಪ್ರಕಟಿಸಲಾಗಿದೆ. ನೀತಿ, ನಡತೆ ನಾಗರಿಕತೆಗಳ ಮೂಲಕ್ಕೆ ಕೊಡಲಿ ಹಾಕಿದ ಕಲಾಭಾಸದ ನವಕ್ರಾಂತಿಯ ಕೇಂದ್ರವಾದ ಹಾಲಿವುಡ್ಡಿನಲ್ಲಿಂದು ಕುಟುಂಬಚಿತ್ರಗಳನ್ನು ಪ್ರದರ್ಶಿಸುವ ಆವಶ್ಯಕತೆಯುಂಟಾದದ್ದು ಆಶ್ಚರ್ಯಕರವಲ್ಲ. ಪಾಶವೀ ಜೀವನವನ್ನು ನೈಸರ್ಗಿಕವೂ ಸುಂದರವೂ ಎಂದು ಬೋಧಿಸುವ ಕುತಕ್ಷ ಪ್ರಣಾಲಿಗೆ ಅಲ್ಲಿಯ ಅಬಾಲವೃದ್ಧ ಸ್ತ್ರೀ ಪುರುಷರು ಎಷ್ಟರ ಮಟ್ಟಿಗೆ ಬಲಿಯಾದರೆಂಬುದಕ್ಕೆ ಪ್ರತಿವರ್ಷ ಹೆಚ್ಚುತ್ತಿರುವ ಅಲ್ಲಿಯ ವಿವಾಹ ವಿಚ್ಛೇದದ ಸಂಖ್ಯೆಯೇ ಸಾಕ್ಷಿಯಾಗಿದೆ, ಅಸಂಖ್ಯ ಮಕ್ಕಳಿಗೆ ತಂದೆಯಾರೆಂದು ಗೊತ್ತಿಲ್ಲದೆ ನರಳುತ್ತಿರುವುದೇ ನಿದರ್ಶನವಾಗಿದೆ.

ಈ ಕುಟುಂಬಚಿತ್ರಗಳಲ್ಲಿ ಮಕ್ಕಳು, ಹೆಂಗಸರು ಮತ್ತು ಗಂಡಸರು ಪರಸ್ಪರ ಹೇಗೆ ನಡೆದುಕೊಂಡರೆ ಸರ್ವಸುಖ, ಸರ್ವೋದಯ ಸಂಭವಿಸುವುದು ಎಂಬ ಅಂಶಗಳನ್ನು ಕೊಡಲಾಗುತ್ತದೆ. ಅರ್ಹತೆಯಿಲ್ಲದೆ, ಸಾಮರ್ಥ್ಯವಿಲ್ಲದೆ ಅದು ಬೇಕು ಇದು ಬೇಕು ಎಂದು ಆಶ್ಯಾಶಿತಾಳುವ ಬುದ್ಧಿ ತರುಣ ತರುಣಿಯರಲ್ಲಿ ಉದಯಿಸುವಂತೆ ಕೊಟ್ಟ ವಿಲಾಸಜೀವನದ ಚಿತ್ರಗಳಿಂದ ಸಾರ್ವಜನಿಕರ ವಿಚಾರಶಕ್ತಿ ಲೋಪವಾಗಿ ಅವರು—


> "ಯಾವಜ್ಜೀವೇತ್ ಸುಖಂ ಜೀವೇತ್
> ಋಣಂ ಕೃತ್ವಾ ಘೃತಂ ಪಿಬೇತ್
> ಭಸ್ಮೀಭೂತಸ್ಯ ದೇಹಸ್ಯ
> ಪುನರಾಗಮನಂ ಕುತಃ"

ಎಂಬ ತಿಳಿವಳಿಕೆ ತಳೆದು ಸ್ವಪರವಂಚಕರಾಗುತ್ತಿರುವುದು, ಕುಟುಂಬ ಘಾತಕರಾಗುತ್ತಿರುವುದು, ಆಪ್ತದ್ರೋಹಿಗಳಾಗುತ್ತಿರುವುದು, ವಿಶ್ವಾಸಘಾತಕರಾಗುತ್ತಿರುವುದು ಮಿತಿಮೀರಿದ್ದೇ ಹೀಗೆ ಮೊದಲು ಸನಾತನ, ಗೊಡ್ಡು, ಅಂಧ ಧಾರ್ಮಿಕ, ನೀರಸ ಎಂದು ಹಳಿದ ನೀತಿಬೋಧಕ ಪದ್ಧತಿಯ ಚಿತ್ರಗಳನ್ನು ತೋರಿಸುವ ಅನಿವಾರ್ಯ ಆವಶ್ಯಕತೆಯನ್ನು ತಂದೊಡ್ಡಿದ್ದು. ಭಾರತೀಯ ಸುಧಾರಕವರ್ಗದ, ಕ್ರಾಂತಿಕಾರಕರೆಂದುಕೊಳ್ಳುವ ಕಲೆಗಾರರಿಗೂ ರಸಿಕರಿಗೂ ಇದೊಂದು ಪಾಠ. ಕವಿಗಳೂ ಬರಹಗಾರರೂ ಚಿತ್ರಗಾರರೂ ನೃತ್ಯವಿಲಾಸಿಗಳೂ ಈ ಪ್ರಶ್ನೆಯತ್ತ ಲಕ್ಷ್ಯ ಕೊಡದಿದ್ದರೆ ಕಾಲಕ್ರಮೇಣ ರಸಾಭಾಸವನ್ನು ರಸವೆಂದುಕೊಂಡ ತಪ್ಪಿಗಾಗಿ ಸಮಾಜವೇ ಅಧಃಪತಿತವಾದೀತೆಂಬುದು ಸ್ಪಷ್ಟವಿದೆ.

ಕನ್ನಡ ಕವಿಗಳೂ ಕತೆ, ಕಾದಂಬರಿ, ನಾಟಕ ಮುಂತಾದವುಗಳನ್ನು ಬರೆವವರೂ ಓದುವವರೂ ವಿಲಾಸಪ್ರಿಯತೆಯ ಈ ದುಷ್ಪರಿಣಾಮವನ್ನು ಮನದಟ್ಟುಮಾಡಿಕೊಳ್ಳದಿದ್ದರೆ ಪುನಃ ಕೃಷ್ಣಪರಮಾತ್ಮನೇ ಈ ಧರ್ಮಗ್ಲಾನಿಯಿಂದ ಭಾರತವನ್ನು ಉದ್ಧರಿಸಲು ಬರಬೇಕಾದೀತು. ಹೊಣೆಯರಿಯದ ಸ್ವಾರ್ಥಿಗಳ ವಿತಂಡವಿಚಾರಗಳ ಬಿರುಗಾಳಿಯಿಂದ ಸಾತ್ವಿಕರು, ಸಭ್ಯರು, ನಾಗರಿಕರು ಇಂದು ತಮ್ಮನ್ನೂ ತಮ್ಮ ಮಕ್ಕಳು ಮರಿಗಳನ್ನೂ ಸಂರಕ್ಷಿಸಿಕೊಳ್ಳುವುದು ದುಸ್ತರವಾಗುತ್ತಿರುವುದು ವಿಚಾರವಂತ ಗೃಹಸ್ಥರಿಗೆ ದೈನಂದಿನ ಜೀವನದ ವಿವಿಧ ವ್ಯವಹಾರಗಳಲ್ಲಿ ಕಂಡು ಬರುತ್ತಿದೆಯಾದರೂ ಅವರು ಔದಾಸೀನ್ಯದಿಂದ ಅಸಹಾಯತೆಯ ನೆವಮಾಡಿಕೊಂಡು ಆಂತರಿಕ ವ್ಯಥೆಯಿಂದ ನರಳುತ್ತಿರುವ ನಮ್ಮ ಇಂದಿನ ಸಮಾಜದಲ್ಲಿ ಗಾಯತ್ರಿಯಂತೆ ಬುದ್ಧಿಯನ್ನು ಪ್ರಚೋದಿಸಲು ಅಮೇರಿಕದಂತೆಯೇ ಕುಟುಂಬನೀತಿಯನ್ನು ವಾಚ್ಯಸೂಚ್ಯಕ್ರಮಗಳಿಂದ ಜನಮನದೆದುರು ಇಡುವ ಚಿತ್ರಗಳು ಆವಶ್ಯಕವಲ್ಲವೆ.?

—ರಸಸುಂದರ

× × ×



ಶಶಾಂಕನ ಸೈನಿಕರು ಚಂದ್ರಲೇಖೆಯನ್ನು ಬಂಧಿಸಿ ತೆಗೆದುಕೊಂಡು ಹೋಗುವ ಚಿತ್ರ

ಚಂದ್ರಲೇಖೆ

ಮದರಾಸಿನ "ಜೆಮಿನೀ ಚಿತ್ರ"ದವರು ಚಂದ್ರಲೇಖೆಯನ್ನು ತಯಾರಿಸಿದ್ದಾರೆ. ಹುಬ್ಬಳ್ಳಿಯ "ರೂಪಂ" ಟಾಕೀಸಿನಲ್ಲಿ ನೋಡಬರುತ್ತಿರುವ ಪ್ರೇಕ್ಷಕರ ಸಂಖ್ಯೆಯನ್ನು ನೋಡಿ ಅದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳದಿರಲಾಗದು ಎನಿಸಿತು.

ಟಿ. ಆರ್. ರಾಜಕುಮಾರಿಯು ಚಂದ್ರಲೇಖೆಯ ಪಾತ್ರವನ್ನೂ ರಂಜನನು ಶಶಾಂಕನದನ್ನೂ ಬಿ. ಎಸ್. ಕಲ್ಲಾ ನಾರಾಯಣನ ಪಾತ್ರವನ್ನೂ ಅಭಿನಯಿಸಿದ್ದಾರೆ. ಎಂ. ಕೆ. ರಾಧಾ ವೀರಸಿಂಹನ ಪಾತ್ರ ತೆಗೆದು ಕೊಂಡಿದ್ದಾನೆ.

ಚಂದ್ರಲೇಖೆ ಒಬ್ಬ ಸಾಮಾನ್ಯ ಹುಡುಗಿ. ರಾಜಕುಮಾರ ವೀರಸಿಂಹನೊಡನೆ ಅವಳ ಪ್ರೇಮ ಬೆಳೆಯಿತು. ವೀರಸಿಂಹನ ತಮ್ಮ ಶಶಾಂಕ ಅಣ್ಣನನ್ನು ತನ್ನ ಕಳ್ಳ ದಲದವರ ಗುಹೆಯಲ್ಲಿ ಸೆರೆಯಿಟ್ಟು ಅವನು ಸತ್ತನೆಂದು ಸುದ್ದಿ ಹಬ್ಬಿಸಿ ತಂದೆತಾಯಂದಿರನ್ನು ಜೇಲಿಗೆ ಹಾಕಿ ತಾನು ಅರಸನಾದನು. ಈ ಮಧ್ಯೆ ಆಕಸ್ಮಿಕವಾಗಿ ತಂದೆಯನ್ನು ಕಳೆದುಕೊಂಡ ಚಂದ್ರಲೇಖೆ ಸಂಬಂಧಿಕರ ಮನೆಗೆ ಹೊರಟಾಗ ಶಶಾಂಕನ ಜನರು ಅವಳನ್ನು ಹಿಡಿದು ಅವನಿಗೊಪ್ಪಿಸಿದರು. ಅಗಅವನುಅವಳನ್ನುತನ್ನ ಕೈಕೆಳಗಿನವನೊಬ್ಬನ ವಶಕ್ಕೆ ಒಪ್ಪಿಸಿ ಹೋಗುತ್ತಾನೆ. ಅವಳುಉಪಾಯದಿಂದ ತಪ್ಪಿಸಿಕೊಂಡು ಹೋಗಿ ವೀರಸಿಂಹನನ್ನು ಗುಹೆಯೊಳಗಿಕ್ಕಿ ಬಂಡೆಯಿಳೆಯುವುದನ್ನು ಕಂಡು ಹಾದಿಯಲ್ಲಿ ಭೆಟ್ಟಿಯಾದ ಸರ್ಕಸ್ ಕಂಪನಿಯವರ ನೆರವಿಂದ ಅವನನ್ನು ಬಿಡಿಸಿಕೊಂಡು ಅವನೂ ತಾನೂ ಅವರ ಆಶ್ರಯದಲ್ಲಿ ಇರುತ್ತಾರೆ. ಒಮ್ಮೆ ಸರ್ಕಸ್ ಕಲಿತ ಚಂದ್ರಲೇಖೆ ಕಂಪನಿಯಲ್ಲಿ ಆಟ ಮಾಡುತ್ತಿರುವಾಗ ಪುನಃ ಇವಳನ್ನು ಕಳೆದುಕೊಂಡ ಶಿಪಾಯಿ ಗುರುತು ಹಿಡಿದು ಪತ್ತೆಹಚ್ಚಲು ಬಂದನು. ಆಗ ವೀರಸಿಂಹ ಅವಳೊಡನೆ ಓಡಿಹೋಗುತ್ತಾನೆ. ಅಲ್ಲಿಯೂ ಶಶಾಂಕನ ಆಳುಗಳು ಬಿಡದೆ ಅವನಿಲ್ಲದಾಗ ಅವಳನ್ನು ಹಿಡಿದೊಯ್ದು ಶಂಶಾಕನಿಗೊಪ್ಪಿಸುವರು. ಸರ್ಕಸ್ಸಿನ ಜನಾಲಕನ ಜೊತೆ [illegible] ಸಿದ್ಧತೆಗಾಗಿ ನಡೆಸಿದ ನೃತ್ಯಕಾಲದಲ್ಲಿ ಅಡಗಿದ್ದ ಶಿಪಾಯಿಗಳು ಮೇಲೆ ಬಿದ್ದು ಚಂದ್ರಲೇಖೆಯನ್ನು ಬಿಡಿಸುವರು. ವೀರಸಿಂಹ ಅವರ ಬೆಂಬಲದಿಂದ ಒಳಹೊಕ್ಕು ಧರ್ಮ ಯುದ್ಧದಿಂದ ಶಶಾಂಕನನ್ನು ಸಂಹರಿಸಿ ಚಂದ್ರಲೇಖೆಯನ್ನು ಮದುವೆಯಾಗುವನು.

ಮಿಕ್ಕ ಸಾಮಾಜಿಕ ಚಿತ್ರಗಳಂತೆಯೇ ಇಲ್ಲಿಯೂ ಯುಕ್ತಿಶಕ್ತಿ ಚಂದ್ರಲೇಖೆಯು ನೃತ್ಯ ಸಂಗೀತ ಕಲೆಗಳನ್ನೂ ಸೌಂದರ್ಯ ಭಾಗಗಳನ್ನೂ ಪ್ರದರ್ಶಿಸುವ ಯತ್ನಅನವಶ್ಯಕವಾಗಿ ನಡೆದಿದ್ದರೂ ಅದಷ್ಟು ಮಿತಿಮೀರಿಲ್ಲ. ಸರ್ಕಸಿನ ಪ್ರದರ್ಶನ, ಗಾಡಿಗಳ ಪ್ರಯಾಣ, ಸೂರ್ಯೋದಯ ಚಂದ್ರೋದಯಾದಿದೃಶ್ಯಗಳು ಮುಂತಾದವನ್ನು ಪೂರ್ವಕಾಲದ ಮಹಾಕಾವ್ಯದ ಕಟ್ಟುಕಟ್ಟಳೆಯ ಕವಿಸಮಯಗಳಂತೆ ತೋರಿಸಲಾಗಿದ್ದರೂ ಅವು ನಿಜವಾಗಿಯೂ ಬಹಳ ಸುಂದರವಾಗಿವೆ. ಆದರೆ ಇವು ಕಥಾ ಪರಿಪೋಷವಾಗುವದಕ್ಕೆ ಅನಗತ್ಯವೆನಿಸುವಷ್ಟು ಲಂಬವಾಗಿರುವದು ದೋಷ. ಇಲ್ಲಿಯ ದೃಶ್ಯ ಸೌಂದರ್ಯ ನಿರ್ಮಾಣಕ್ಕೆ ೩೫ ಲಕ್ಷ ಖರ್ಚಾಗಿದೆಯೆಂದ ಮೇಲೆ ವೀರಶೃಂಗಾರ ಪ್ರಧಾನವಾದ ಮಧ್ಯಯುಗೀನ ವೈಲಾಸಿಕ ಕಥೆಯೆನಿಸಿದ ಇದನ್ನು ನೋಡಲು ಸಾಮಾನ್ಯ ಜನರು ಬೆಲ್ಲಕ್ಕೆ ನೊಣಮುತ್ತಿದಂತೆ ಮುತ್ತುವದರಲ್ಲೇನಾಶ್ಚರ್ಯವಿದೆ? ಅತಿಶೌರ್ಯ ಅತಿಶೃಂಗಾರಗಳ ಅಭಾವ ಇಲ್ಲಿಯ ವಿಶೇಷ ಗುಣ. ಆದುದರಿಂದ ಚಿತ್ರಕ್ಕೆ ಹೃತ್ಪೂರ್ವಕ ಸ್ವಾಗತ ಕೊಡಬಹುದು.

— ರಸೈಂದ್ರಜಾಲಿಕ

ಉಪ್ಪಿನ ಗುಣ

ಉಪ್ಪಿಗಿಂತ ರುಚಿಯಿಲ್ಲ [illegible] ಕೆಯ. ಮಾತು. ಆದರೆ [illegible] ಉಪಕಾರಗಳನ್ನು [illegible] ಒಂದು ಚಿಟಿಕೆ ಉಪ್ಪು ಹಾಕಿ [illegible] ನೀರನ್ನು ಆಗಾಗ್ಗೆ ಕುಡಿದರೆ ಅದು [illegible] ದಾಯಕವಾಗುವದು. ಶಿಶ್ನ ಜೇನು [illegible] ಗಿಗಳ ರಸಗಳು ಶೀಘ್ರವಾಗಿ [illegible] ಕೊಡುತ್ತದೆ.


ಉಪ್ಪಿನ ಪುಡಿಯನ್ನು [illegible] ನಿಂದ ತೋಯಿಸಿದ ಅಂಗವಸ್ತ್ರದಿಂದ [illegible] ಬಿರುಸಾಗಿ ತಿಕ್ಕಿಕೊಂಡರೆ [illegible] ಹುರುಪು ಹುಟ್ಟುತ್ತದೆ. ಆ ಮೇಲೆ [illegible] ದುಕೊಳ್ಳಬೇಕು. ಹಲ್ಲುಗಳ [illegible] ದಿನ ಆರೋಗ್ಯವನ್ನು ಕಾಪಾಡಲು [illegible] ಪಾಲು ಉಪ್ಪು, ಒಂದು ಪಾಲು [illegible] ಬೈಕಾರ್ಬನೇಟ್ ಬೆರಸಿ ಹಲ್ಲು ತಿಕ್ಕಿ [illegible]

ಉಪ್ಪುನೀರನ್ನು ಹಲಿಜೆ ಸಸಿಗಳ [illegible] ಚಿಮುಕಿಸಿದರೆ ಅವಕ್ಕೆ ಬಂದ ಕ್ರಿಮಿ [illegible] ಗಳು ಹೋಗುವವು. ಇತರ ತೋಟದ [illegible] ಗಳಿಗೂ ಅದು ಉತ್ತಮ ಔಷಧ. [illegible] ಸಿದ್ಧ ಕ್ರಿಮಿನಾಶಕವೆಂದರೆ ಅದೇ.

ಅಂಟಾರ್ಕಟಿಕದಲ್ಲಿ ಸರೋವ[ರ]

ದಕ್ಷಿಣಧ್ರುವದ ಶೀತವಲಯ ಪ್ರದೇಶ[ವನ್ನು] ಅಂಟಾರ್ಕಟಿಕ ಖಂಡವೆನ್ನುತ್ತಾರೆ. ಅ[ಲ್ಲಿ] ಸರ್ವವೂ ಹಿಮಮಯ. ನೀರು [ಸಿಗುವುದಿ]ಲ್ಲ; ಅ[ಲ್ಲಿ]ರುವುದು ಕಲ್ಲುನೀರು; ಮಳೆಯಿಲ್ಲ, [illegible] ಎಲ್ಲ. ಆದರೆ ಅದರ ಮಧ್ಯದಲ್ಲಿ [illegible] ನೀರಾದ ನೀರಿನ ಸರೋವರವಿದೆ. [illegible] ವಿಶ್ವವಿದ್ಯಾನಿಲಯದ ಭೂಗರ್ಭಶಾಸ್[ತ್ರ] ಶಾಖೆಯ ಅಧ್ಯಕ್ಷ ಡಾ. ಆಲೆಕ್ ಟಿ. [illegible] ತಾವು ಆ ಸರೋವರವನ್ನು ಕಂಡ ಬಗೆಯನ್ನು ಹೀಗೆ ಬಣ್ಣಿಸಿದ್ದಾರೆ.

"ನಾವು ವಿಮಾನವೇರಿ ಅಂಟಾರ್ಕಟಿಕದ[ಲ್ಲಿ] ಹಾರಿದೆವು. ಒಂದೆಡೆ ಇಳಿದು ಶಿಬಿರ ರಚಿಸಿದೆವು. ಅದು ಬಹಳ ಗಾರುನೆಲವಾಗಿತ್ತು. ಅಲ್ಲಿ [illegible] ಹಿಮ ಆವಿಯಾಗುತ್ತಿತ್ತು. ಅಲ್ಲಿಯ [illegible] ಗುಡ್ಡಗಳು ಅರ್ಧ ಕರಗಿದ [illegible] ಗಳನ್ನು ಉರುಳಿಸುವವು. ಅವು ಹರಿದು [illegible] ಈ ಸರೋವರ ರಚಿತವಾಗಿದೆ. ಅಲ್ಲಿಯ [illegible] ಯಲ್ಲಿ ಚಿಟ್ಟುಗೆರೆಗಳು (Shallow Lakes) ಹಿಮಾಚ್ಛಾದಿತವಾಗಿರುವದಿಲ್ಲ. ಅಲ್ಲಿ [illegible] ಜಾತಿಯ ಚಿಕ್ಕ ಪಾಚಿ ನೀರಿನ ಮೇಲೆ [illegible] ಯಲ್ಲದೆ ಜೀವಿಸಂಚಾರವಿಲ್ಲ."



ಬೆತ್ತದ ಏಟು

ಮಂಗಿಡ,

ಒಂದನ್ನೊಸಲ್ಲಿ ಒಬ್ಬರು ಬ್ರಹ್ಮಚಾರಿ ಹೆಡ್ ಮಾಸ್ತರಿದ್ದಾರೆ. ಅವರ ಕೈಕೆಳಗೆ ಕಿಂಗ್ಸ್‌ವೇ ಭವನದಲ್ಲಿ ೨೪ ಜನ ಹುಡುಗ ಹುಡುಗಿಯರು ಸಭೆ ಸೇರಿ ಜಗತ್ತಿನ ಮಕ್ಕಳ ಒಕ್ಕೂಟವನ್ನು ಸ್ಥಾಪಿಸಲು ಆಲೋಚಿಸಿದರು. ಅಪ್ಪ ಅವ್ವಂದಿರು ಮತ್ತು ಗುರು ಹಿರಿಯರು ತಂತಮ್ಮ ಸುಖಗಳಿಗೇ ಹೆಚ್ಚು ಲಕ್ಷ್ಯ ಕೊಡುವರು, ಮಕ್ಕಳನ್ನು ಅಲಕ್ಷಿಸುವರು ಎಂಬುದೇ ಅವರ ದೂರು.

ಆದರೆ ಅವರ ದೂರಿಗೆ ಪ್ರತ್ಯಕ್ಷ ಕಾರಣವೆಂದರೆ. ಬೆತ್ತದ ಏಟು. ಗುರುಗಳು ಶಿಷ್ಯ ಶಿಷ್ಯೆಯರಿಗೆ ಬೆತ್ತದೇಟು ಹೊಡೆಯುವದನ್ನು ನಿಲ್ಲಿಸಬೇಕೆಂಬುದು ಅವರ ಚಳವಳದ ಸಧ್ಯದ ಗುರಿ. ನಾನೂ ಒಮ್ಮೆ ನಿನ್ನ ಹಾಗೆ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದೆ. ಆಗ ಒಮ್ಮೆ ನಾನು ಲೆಕ್ಕ ತಪ್ಪು ಮಾಡಿದಾಗ ಗುರುಗಳು 'ಕಿವಿ ಹಿಂಡಿಕೋ' ಎಂದರು. ತಪ್ಪು ಮಾಡಿದಕ್ಕೆ ಗುರುಗಳು ಹೇಳಿದ ಪ್ರಾಯಶ್ಚಿತ್ತವನ್ನು ಅನುಭವಿಸಲೇಬೇಕೆಂದು ನನ್ನ ಎರಡೂ ಕಿವಿಗಳನ್ನು ಬಲವಾಗಿ ಹಿಂಡಿಕೊಂಡೆ. ಹರಳಿನ ಬುಡಕುಗಳಿದ್ದವು. ಅವುಗಳು ಒತ್ತಿದ್ದರಿಂದ ಗಾಯವಾಗಿ ರಕ್ತ ಬಂದಿತು. ಮನೆಗೆ ಮರಳಿದಾಗ ನಡೆದ ಸಂಗತಿಯನ್ನು ತಿಳಿದು ಎಲ್ಲರೂ ನನ್ನನ್ನು ನೋಡಿ ನಕ್ಕರು. ಆದರೆ ನನ್ನ ತಾಯಿ ಮಾತ್ರ ನಾನು ತೋರಿದ ವಿಧೇಯತೆಗೆ ಮೆಚ್ಚಿದಳು. ರಕ್ತ ಬಂದ ವಿಷಯ ಗುರುಗಳಿಗೆ ತಿಳಿಯಿತು. ಅಂದಿನಿಂದ ಅವರು ನನಗೆ ಯಾವ ಶಿಕ್ಷೆಯನ್ನೂ ದೇಹಕ್ಕೆ ಕೊಡಲಿಲ್ಲ. ಎಲ್ಲಾದರೂ ಬೈದರೂ ಮೆಲುದನಿಯಿಂದಲೇ. ಉಗ್ರ ಸ್ವಭಾವದ ಆ ಗುರುಗಳು ಇಷ್ಟು ಮೆತ್ತಗಾಗಿ ನನ್ನನ್ನು ನಡೆಸಿಕೊಳ್ಳಲು ಕಾರಣವೇನು?

ಎರಡನೆಯ ಉದಾಹರಣೆ ಮೇಲಿನದಕ್ಕೆ ತೀರ ವಿರುದ್ಧವಾಗಿದೆ ನಾನು ಒಮ್ಮೆ ಹೆಡ್ ಮಾಸ್ತರನಾಗಿದ್ದೆ. ಆಗ ಮೆಟ್ರಿಕ್ ವರ್ಗದಲ್ಲಿ ಒಂದು ಜಗಳ ಸಂಭವಿಸಿತು. ಒಬ್ಬನಿಗೆ ಇನ್ನೊಬ್ಬ ೫ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದನ್ನು ಕಂತಿನ ಮೇಲೆ ಕೊಟ್ಟಿದ್ದೇನೆಂದು ಅವನು ಸುಳ್ಳು ಹೇಳಿದ. ಅವನ ಲೆಕ್ಕದ ಪುಸ್ತಕ ತರಿಸಿ ನೋಡಿದಾಗ ತಿದ್ದಿ ಕಾಟು ಹೊಡೆದು ಸುಳ್ಳು ಲೆಕ್ಕ ಬರೆದ ಕುರುಹು ನನಗೆ ಗೊತ್ತಾಯಿತು. ಚತುರೋಪಾಯಗಳಲ್ಲಿ. ಮೊದಲನೆಯ ಮೂರಾದ ಸಾಮ, ದಾನ, ಭೇದಗಳೆಲ್ಲವೂ ಅವನ ಮುಂದೆ ವ್ಯರ್ಥವಾದವು. ೧೫ ದಿನಗಳ ತನಕ ಪ್ರತಿನಿತ್ಯ ಅವನಿಗೆ ಸದುಪದೇಶ ಮಾಡಿದರೂ ಅವನು ತಪ್ಪೊಪ್ಪಿಕೊಳ್ಳಲಿಲ್ಲ. ಆಗ ನೀನೇ ಹೆಡ್‌ಮಾಸ್ತರನಾಗಿದ್ದರೆ ಏನು ಮಾಡುತ್ತಿದ್ದೆ? ಅವನು ಆಗಲೆ ಕೇಡಿ ರಿಜಿಸ್ಟರಿಗೆ ದಾಖಲಾಗಿದ್ದ. ಸಾಲ ಕೊಟ್ಟ ಹುಡುಗನ ಸಭ್ಯತೆ ಸರ್ವವಿದಿತವಾಗಿತ್ತು. ಇದರ ಮೇಲೆ ಸಭ್ಯನ ಕಡೆ ಸಭ್ಯ ಸಾಕ್ಷಿಗಳೂ ಇದ್ದರು. ಅಸಭ್ಯನಪ್ಪ ಅವನನ್ನು 'ಅಚ್ಛೆ' ಮಾಡಿ ಸಾಕಿದ್ದ. ಯಾವಾಗಲೂ ಅಪ್ಪ ಮಗನ ಕಡೆ ವಾದಿಸುವವನೇ. ಹೀಗಿರುವಾಗ ಏನು ಮಾಡಲೂ ತೋರದೆ ಕಳ್ಳನ ಕೈಗಳಿಗೆ ಹಸಿ ಆರು ಬಿಸಿ ಆರು 'ದಕ್ಷಿಣೆ' ಕೊಟ್ಟೆ. ಆಗ ಅವನು ಬಾಯಿಬಿಟ್ಟ; ರೂಪಾಯಿಗಳನ್ನು ತಂದೊಪ್ಪಿಸಿದ. ಇಂಥವರಿದ್ದರೆ ಅವರಿಗೆ ಸಾಮೂ ಹೀನೂ ಆಡುವ ಮಾತು ಅರ್ಥವಾಗುವುದಿಲ್ಲ. ಅವರಿಗೆ ಬೆತ್ತದ ಭಾಷೆಯೊಂದೇ ತಿಳಿಯುವುದು. ಇಲ್ಲದಿದ್ದರೆ ಇತರ ಬಾಲಕ ಬಾಲಿಕೆಯರಿಗೆ ಅವರು ಕಷ್ಟ ಕೊಡುತ್ತಾರೆ ಎಂಬುದು ಸ್ಪಷ್ಟವಲ್ಲವೆ? ಬುದ್ಧಿವಂತನಾ(ಳಾ)ದ ನೀನು ಬೆತ್ತದ ಏಟು ತಿನ್ನುವುದಿಲ್ಲ. ದುರ್ಬುದ್ಧಿವಂತರು ತಿನ್ನುವುದನ್ನು ಪ್ರತಿಭಟಿಸುವುದು ಬುದ್ಧಿವಂತಿಕೆ ಮತ್ತು. ವಿಚಾರ ಶಕ್ತಿಯುಳ್ಳ ನಿನ್ನಂಥವರಿಗೆ ತಕ್ಕದ್ದೇ ಅಲ್ಲ. ಈ ವಿಚಾರ ಲಂಡನ್ನಿನ ಹುಡುಗರಿಗೆ ಹೊಳೆವಂತಿಲ್ಲ. ತಮತಮಗೇ ಕಷ್ಟನಷ್ಟ ಉಂಟಾದ ಹೊರತು ಯಾರಿಗೂ ಮಾಡತಕ್ಕದ್ದಾವುದು, ಮಾಡಬಾರದ್ದಾವುದು ಎಂಬುದರ ಅರಿವಾಗುವುದಿಲ್ಲ. ಬೆತ್ತದ ಪ್ರಯೋಗವನ್ನು ಅತಿರೇಕ ಮಾಡುವ ಗುರುವಿದ್ದರೆ ಆತನನ್ನು ಸಂಬಂಧಿಸಿದ ಹಿರಿಯರು ಕೆಲಸದಿಂದ ತೆಗೆದುಹಾಕುತ್ತಾರೆ ಅವಿಧೇಯತೆ ಅತಿರೇಕ ಮಾಡಿದರೆ ಅಂಥ ಶಿಷ್ಯನ(ಳ)ನ್ನು ಶಾಲೆಯಿಂದ ಹೊರಗೆ ದಬ್ಬಲಾಗುತ್ತದೆ. ಅಂದ ಮೇಲೆ ಬೆತ್ತದ ಏಟಿನ ವಿರುದ್ಧವಾಗಿ ದೂರು ಕೊಡುವುದರಲ್ಲಿ ಅರ್ಥವೇನಿದೆ? ವಿಚಾರಿಸಿ ನೋಡು—

೧

'ಸೂ' ಅಂದರೇ ಸಾಕು
ಸದ್ಬುದ್ಧಿಗೆ;
ಸುಟ್ಟರೂ ಸಾಲದೋ
ದುರ್ಬುದ್ಧಿಗೆ!

೨

ಸೀಗೆಯಿಲ್ಲದೆ ಜಿಡ್ಡು
ಹೋಹುದೆಂತು?
ಬೆತ್ತವಿಲ್ಲದೆ ಕೇಡು
ಅಳಿವುದೆಂತು?

೩

ಆರೋಗ್ಯವಂತರಿಗೆ
ಅನ್ನ ಪಥ್ಯ;
ರುಗ್ಣರಿಗೆ ಮದ್ದೆ ಬೇ—
ಕಯ್ಯ ನಿತ್ಯ!

೪

ದೇವಗುಣವಿದ್ದವಗೆ
ದಿವ್ಯಪೂಜೆ;
ರಾಕ್ಷಸತ್ವಕೆ ಕಾಳಿ—
ಬಲಿಯದೋಜೆ!

೫

ಆನೆಗಂಕುಶ ಬೇಕು
ಬುದ್ಧಿಗಲಿಸೆ;
ಆನೆಗೂಸುಗಳಿಗೋ—
ಬೆತ್ತ ತಿಳಿಸೆ!

೬

ಮಂಗಗಳ ಸುಡಿ ಮಂಗ—
ಗರ್ಥವಕ್ಕು;
ಬೆತ್ತದುರಿವಾತಷ್ಟೆ
ಕೇಡಿಗಕ್ಕು!

— ಮಾಮ

ಹೈದ್ರಾಬಾದಿನಲ್ಲಿ ಸರದಾರರು

'ಮಿಲಿಟರಿ ಆಳಿಕೆ ಈಗಲೆ ಹೋಗುವದಿಲ್ಲ'

ಸರದಾರ ವಲ್ಲಭಭಾಯಿ ಪಟೇಲರು ೨೬ನೆಯ ತಾರೀಕು ಮುಂಜಾನೆ ೯-೧೫ ಗಂಟೆಗೆ ಹೈದ್ರಾಬಾದದ ಹಕೀಮಪೇಟ ವಿಮಾನ ನಿಲ್ದಾಣದಲ್ಲಿಳಿದರು. ನಿಜಾಮರು, ಮಿಲಿಟರಿ ಗವರ್ನರರು, ವರ್‍ಹಾಡದ ಯುವರಾಜರು, ಕಾಂಗ್ರೆಸ ಪ್ರಮುಖರು ಮೊದಲಾದವರೆಲ್ಲ ಅವರನ್ನು ಸಂಭ್ರಮದಿಂದ ಸ್ವಾಗತಿಸಿದರು. ನಂತರ ಸರದಾರರು ತಮ್ಮ ಮಗಳಾದ ಕು. ಮಣಿಬೇನರೊಡನೆ ಬೋಲಾರಾಮ ರೆಸಿಡೆನ್ಸಿಗೆ ತೆರಳಿದರು.

ಘಟಿಕೋತ್ಸವ

ಹಿಂದುಸ್ತಾನದಲ್ಲಿಯ ನಾಲ್ಕುಕೋಟಿ ಮುಸಲ್ಮಾನರು ೩೦ ಕೋಟಿ ಹಿಂದೀಯರೊಡನೆ ಒಂದಾಗಿ ಸೇರಿ ನಡೆದರೆ ಹಿಂದುಸ್ತಾನದ ಭವಿತವ್ಯವನ್ನಷ್ಟೇ ಅಲ್ಲ. ಪಾಕಿಸ್ತಾನದ ಭವಿತವ್ಯವನ್ನೂ ರೂಪಿಸಬಲ್ಲರು; ಎಂದು ಸರದಾರರು ಉಸ್ಮಾನಿಯಾ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ಭಾಷಣ ಮಾಡುತ್ತ ಹೇಳಿದರು. ಕುಲಪತಿಗಳಾದ ಮೇ. ಜ. ಚೌಧರಿಯವರು ಸರದಾರರಿಗೆ ಎಲ್‌. ಡಿ. ಗೌರವ ಪದವಿಯನ್ನು ಅರ್ಪಿಸಿದರು. ಹಿಂದಿನದೆಲ್ಲವನ್ನೂ ಮರೆತು ಹಿಂದುಸ್ತಾನವನ್ನು ಪ್ರಬಲ ರಾಷ್ಟ್ರವನ್ನಾಗಿಸಬೇಕೆಂದು ಸರದಾರರು ನೆರೆದವರೆಲ್ಲರನ್ನು ಕೇಳಿಕೊಂಡರು. ವಿದ್ಯಾರ್ಥಿಗಳು ರಚನಾತ್ಮಕ ಮಾರ್ಗವನ್ನನುಸರಿಸಬೇಕೆಂದು ಹೇಳಿದರು. ವಿನಾಶಕ ಮಾರ್ಗವನ್ನು ಹಿಡಿದು ರಾಷ್ಟ್ರಘಾತಕ ಕಾರ್ಯದಲ್ಲಿ ತೊಡಗಿರುವದನ್ನು ಕಂಡು ವ್ಯಥೆಪಟ್ಟರಲ್ಲದೆ ವಿದ್ಯಾರ್ಥಿಗಳು ಸಧ್ಯದ ಸಮಯವನ್ನು ವ್ಯರ್ಥ ಕಳೆಯದೆ ದೇಶಸೇವೆಯನ್ನು ಮಾಡಬೇಕೆಂದು ಉಪದೇಶಿಸಿದರು.

ಆಡಳಿತೆಯಲ್ಲಿ ಬದಲಾವಣೆಯಿಲ್ಲ

ಹೈದ್ರಾಬಾದದಲ್ಲಿ ಸಂಪೂರ್ಣ ಶಾಂತಿ ನೆಲೆಸಿ ಜನತೆಗೆ ತನ್ನ ಹೊಣೆಯ ಅರಿವುಂಟಾಗಿ ಶಾಂತಿ ಹಾಗು ಸೌಹಾರ್ದ ವಾತಾವರಣ ಸ್ಥಾಪಿತವಾದ ಹೊರತು ಇಂದಿನ ಮಿಲಿಟರಿ ಆಡಳಿತೆಯನ್ನು ಬದಲಿಸುವದು ಶಕ್ಯವಿಲ್ಲ ಎಂದು ಸರದಾರ ವಲ್ಲಭಭಾಯಿ ಪಟೇಲರು ೨೭ ನೆಯ ತಾರೀಕು ಫತ್ತೇಮೈದಾನದಲ್ಲಿ ಸೇರಿದ್ದ ಮೂರು ಲಕ್ಷ ಜನರ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಸಾರಿದರು. ಸಂಸ್ಥಾನದಲ್ಲಿ ತೋರಿಕೆಗೆ ಶಾಂತಿ ಸ್ಥಾಪಿತವಾದಂತೆ ಕಂಡರೂ ನಿಜವಾದ ಶಾಂತಿ ಸ್ಥಾಪಿತವಾಗದೆ ಪ್ರಗತಿಯಾಗುವದು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಹೈದ್ರಾಬಾದ ಸಂಸ್ಥಾನದ ಜನರೀಗ ಹಿಂದುಸ್ತಾನದ ಒಂದು ಭಾಗ, ಅದೇಕೆ ಹಿಂದುಸ್ಥಾನದ ಹೃದಯವೆನ್ನಬಹುದು. ಹಿಂದುಸ್ತಾನ ಒಡೆದು ಎರಡು ಹೋಳಾಯಿತು. ದ್ವಿರಾಷ್ಟ್ರ ವಾದಿಗಳಿಗೆ ಬೇಡಿದ್ದು ದೊರೆಯಿತು. ಅಂಥ ತತ್ವ ಪ್ರಚೋದಕರು ಈಗಲೂ ಇಲ್ಲಿ ಇದ್ದರೆ, ಅವರಿಗೆ ಇಲ್ಲಿ ಸ್ಥಾನವಿಲ್ಲ. ಪಾಕಿಸ್ತಾನಕ್ಕೆ ಅವರು ಹೋಗುವದೇ ಇಷ್ಟ. ಅವರು ಅಲ್ಲಿಗೆ ಹೋಗದೆ ಇಲ್ಲಿಯೆ ಇದ್ದುಕೊಂಡು ಅಂಥ ವಿಚಾರಗಳನ್ನು ಮೆಲುಕು ಹಾಕುತ್ತ ಕುಳಿತರೆ ಪಾಕಿಸ್ತಾನಕ್ಕೂ ಹಿಂದುಸ್ತಾನಕ್ಕೂ ಕೂಡಿಯೇ ಹಾನಿಯಾಗುವದು.

ಸಂಸ್ಥಾನದ ಪುನಾರಚನೆಯಲ್ಲಿ ಎಲ್ಲರೂ ಭಾಗಿಗಳಾಗಬೇಕು. ಇಲ್ಲಿಯ ಕಾಂಗ್ರೆಸ್ಸಿಗರು ಹಿಂದೀ ಕಾಂಗ್ರೆಸ್ಸಿನ ಹೆಸರಿಟ್ಟುಕೊಂಡಿದ್ದಾರೆ ಆದುದರಿಂದ ಆ ಹೆಸರಿಗೆ ಕಲಂಕ ತಟ್ಟದಂತೆ ಅವರು ವರ್ತಿಸಬೇಕು. ಹಿಂದಿನಂತೆ ಒಡಕು ಹುಟ್ಟದಂತೆ ನೋಡಿಕೊಳ್ಳಬೇಕು. ಈಗಿದ್ದ ಜೋಪಾಸನಾ ಸರಕಾರ ನೀವು ಅಧಿಕಾರ ವಹಿಸಿಕೊಳ್ಳುವ ವರೆಗೆ ಅಸ್ತಿತ್ವದಲ್ಲಿ ಉಳಿಯುತ್ತದೆ. ಸುಸ್ಥಿತಿಯಲ್ಲಿ ಅದನ್ನು ನಿಮಗೆ ಒಪ್ಪಿಸಿಕೊಡಬೇಕೆಂದು ನಮ್ಮ ಇಚ್ಛೆ ಇದೆ ಎಂದು ಮುಂತಾಗಿ ಹೇಳಿದರು. ಇಲ್ಲಿರುವ ಕಮ್ಯುನಿಸ್ಟರು ಸಾಮಾನ್ಯವಾಗಿ ಹೊರಗಿನವರು. ಅವರು ಹೊರಗೆ ಬೇಕಾದಲ್ಲಿಗೇ ಹೋಗಬಹುದು, ಹೋಗದಿದ್ದರೆ ಅವರು ಒಬ್ಬರಾದರೂ ಪ್ರಾಣದಿಂದ ಉಳಿಯುವಂತೆ ಬಿಡಲಾರೆ; ಏಕೆಂದರೆ ಅವರ ವಿಷ ಇಡೀ ಹಿಂದುಸ್ತಾನಕ್ಕೆ ವ್ಯಾಪಿಸುವದು ಎಂದೂ ಹೇಳಿದರು.

ಸಂಸ್ಥಾನ ಕಾಂಗ್ರೆಸ್ಸಿಗೆ ಭೆಟ್ಟಿಕೊಟ್ಟಾಗ ಕಾಂಗ್ರೆಸ ಕಾರ್ಯಕರ್ತರಿಗೆ ಕಾಂಗ್ರೆಸ್ಸನ್ನು ಬಲಪಡಿಸಲು ಕೇಳಿಕೊಂಡರು. ಅನಂತರ ಅವರು ಮುಸಲ್ಮಾನರ ಶಿಷ್ಟಮಂಡಳವೊಂದನ್ನು ಬರಮಾಡಿಕೊಂಡರು. ಮನೆಮಾರುಗಳನ್ನು ಕಳೆದುಕೊಂಡ ಮುಸಲ್ಮಾನ ನಿರಾಶ್ರಿತರ ಬಗ್ಗೆ ಅವರು ಮನವಿಯನ್ನು ಅರ್ಪಿಸಿದರು. ನಿರಾಶ್ರಿತರ ಕೊರತೆಗಳನ್ನೆಲ್ಲ ದೂರಮಾಡುವದಾಗಿ ಸರದಾರರು ಆಶ್ವಾಸಿಸಿದರೆಂದು ತಿಳಿಯುತ್ತದೆ. ದಲಿತ ವರ್ಗದ ಶಿಷ್ಟಮಂಡಲವೂ ಅವರನ್ನು ಕಂಡು ತಮ್ಮ ಬೇಡಿಕೆಗಳನ್ನು ತಿಳಿಸಿತು. ಕೂಲಿಕಾರರು ರಾಜಕಾರಣದಲ್ಲಿ ಸೇರಬಾರದೆಂದು ಸರದಾರರು ಹೇಳಿದರು.

ನಿಜಾಮರೊಡನೆ ಮಾತುಕತೆ

ನಿಜಾಮಸಾಹೇಬರು ೨೮ ನೆಯ ತಾರೀಕು ಮಧ್ಯಾಹ್ನ ಸರದಾರ ಪಟೇಲರನ್ನು ಕಂಡು ಅರ್ಧಗಂಟೆಯ ವರೆಗೆ ಅವರೊಡನೆ ಮಾತುಕತೆ ನಡೆಸಿದರು. ಅರ್ಧಗಂಟೆಯ ನಂತರ ಇಬ್ಬರೂ ಬಾಗಿಲಿನಲ್ಲಿ ನಿಂತು ಭಾವಚಿತ್ರ ತೆಗೆದುಕೊಳ್ಳುವವರಿಗೆ ಅವಕಾಶವಿತ್ತರು. ಹಿಂದುಸ್ತಾನದಲ್ಲಿ ಹೈದ್ರಾಬಾದ ಸೇರ್ಪಡೆಯ ಪ್ರಶ್ನೆಯ ಕುರಿತು ಈ ಭೆಟ್ಟಿಯಲ್ಲಿ ಚರ್ಚೆ ನಡೆಯಲಿಲ್ಲ. ಸಾಮಾನ್ಯ ವಿಷಯಗಳ ಬಗ್ಗೆ ಮಾತುಕತೆ ನಡೆದವು ಎಂದು ಮುಂತಾಗಿ ಸರದಾರರ ಪ್ರಯಾಣದ ನಂತರ ಮಿಲಿಟರಿ ಗವರ್ನರರು ಸುದ್ದಿಗಾರರ ಸಭೆಯಲ್ಲಿ ಹೇಳಿದರು.

ಕಾಂಗ್ರೆಸ್ಸಿನಲ್ಲಿ ಐಕ್ಯ

ಹೈದ್ರಾಬಾದದಲ್ಲಿಯ ಕಾಂಗ್ರೆಸ್ಸಿಗರಲ್ಲಿ ಆದ ಒಡಕು ಸರಿಪಡಿಸಲ್ಪಟ್ಟು ಎರಡೂ ಪಕ್ಷಗಳನ್ನುಳ್ಳ ಹೊಸ ಕಾರ್ಯಸಮಿತಿ ಈಗ ರಚಿತವಾಗಿದೆ. ಈ ಕಾಂಗ್ರೆಸ್ಸಿಗೆ ಸ್ವಾಮೀ ರಮಾನಂದರು ಅಧ್ಯಕ್ಷರು ಜಿ. ಕೆ. ಪ್ರಾಣೇಶಾಚಾರ್ಯರು ಕಾರ್ಯದರ್ಶಿಗಳು ಇರುವರು. ಬಿ. ರಾಮಕೃಷ್ಣರಾವ, ಜನಾರ್ದನರಾವ ದೇಸಾಯಿ, ಅಣ್ಣಾರಾವ, ವೆಂಕಟ ರಂಗರೆಡ್ಡಿ, ಡಾ. ಚೆನ್ನರೆಡ್ಡಿ, ಪಿ ಹನುಮಂತರಾವ, ದಿಗಂಬರರಾವ ಬಿಂದು, ಡಾ. ಮೇಲುಕೋಟೆ ಬಿ ಎಂ ಸರಾಫ, ಎಸ್. ಕೆ. ವೈಶಂಪಾಯನ ಭಿಡೆ; ಜಮಾಲಪುರಂ, ಕೇಶವರಾವ, ಜಗನ್ನಾಥರಾವ ಮತ್ತು ಶ್ರೀ. ವಿ. ನರಸಿಂಗರಾವ ಇವರು ಇರುವರು. ಇವರಲ್ಲಿ ಜನಾರ್ದನ ರಾಯರ ಪಕ್ಷದವರು ಕೇವಲ ೬ ಜನ ಪ್ರತಿನಿಧಿಗಳಿರುವರು.

ಅಜ್ಜಿಯ ಬಯಕೆ

ನನ್ನ ಅಜ್ಜಿಗೆ ನೂರು ವರುಷ
ತುಂಬುತ ಬಂತು
ಎಂದು ಸಾಯುವಳೆಂದು ಹೇಳಲೇತು?
ಅವಳ ಮಂಡೆಯಲೊಂದು ಬೊಕ್ಕೆ
ಮೂಡುತ್ತಿಹುದು
ಅದರ ಗುಣಕಾಗಿ ಇಂಗ್ಲಾಂಡಿನಲ್ಲೇ
ಮೂರು ತಿಂಗಳು ಇದ್ದು ಬರುವುದನು
ಬಯಸಿಹಳು
ಗುಣಪಡಿಸಬೇಕೆಂಬ ಮಾತು ಸುಳ್ಳೆ?
"ಈ ದೇಶದಲಿ ವೈದ್ಯರೊಬ್ಬರೂ ಸರಿಯಿಲ್ಲ
ಇಲ್ಲಿ ಆ ಬೊಕ್ಕೆ ಗುಣವಾಗದೆಂದೂ
ಇಲ್ಲಿಯೇ ಮದ್ದುಗಳ ಮಾಡಿಸುವೆವೆನ್ನುವಿರ?
ಬೇಡ. ಹುಗಿದೇ ಬಿಡಿರಿ ನನ್ನ ಕೊಂದು.
ಅಜ್ಜಿಯಲಿ ಮಮತೆಯಿದ್ದರೆ ಅಲ್ಲಿಗೊಯ್ದು
ಬದುಕಬೇಕೆಂದರೀ ಬೊಕ್ಕೆ ಕೊಯ್ದು
ಗುಣಪಡಿಸಿ, ಇಲ್ಲದಿರೆ ಕೊಂದು ಬಿಡಿರಿ
ಜೀವವಿರುವಾಗಲೇ ನನ್ನ ಸುಡಿರಿ."

ನನ್ನ ಅಜ್ಜಿಗೆ ನೂರು ವರುಷ
ತುಂಬುತ ಬಂತು
ನಾಳೆ ಸಾಯಳು ಎಂದು ಹೇಳಲೆಂತು?
ಅವಳ ಮಂಡೆಯ ಬೊಕ್ಕೆಗಾಗಿ
ಸಾವಿರಗಳನು
ಖರ್ಚು ಮಾಡುವುದೆಂಥ ಶುದ್ಧ ಮಳ್ಳು!
ಸಿಟ್ಟಿಗೆದ್ದಿಹ ಅಜ್ಜಿ ಶಾಪ ಸುರಿಯುತ್ತಿಹಳು
"ನಿಮ್ಮೆದೆಗೆ ಕರುಳಿಲ್ಲ. ಮಣ್ಣು ಕಲ್ಲು."
ಮುಟ್ಟಬಹುದೇ ನಮಗೆ ಅವಳ ಶಾಪ?
ತಟ್ಟಬಹುದೇ ಅವಳ ಕೊಂದ ಪಾಪ?
ಇಂಗ್ಲಾಂಡಿಗೊಯ್ಯದೇ ಅವಳ
ಕೊಂದಾ ಪಾಪ
ನಮಗೆ ತಟ್ಟಲಿ. ಪಾಪಕಿಂತ ಹೆಚ್ಚು
ಪುಣ್ಯಗಳಿಸಿಹೆವು ಮನೆಗಾಗಿ
ಸಾವಿರ-ಉಳಿಸಿ
ಹಿಡಿದಿಲ್ಲ ನಮಗೆ ಸಹ ಮುದಿಯ ಹುಚ್ಚು!

— ವಿ. ಜಿ. ಬಿ.

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯಲ್ಲಿ ಶಿವರಾತ್ರಿಯ ಕಾಲಕ್ಕೆ ಶ್ರೀ ಸಿದ್ಧಾರೂಢರ ರಥೋತ್ಸವವು ವಿಜೃಂಭಣೆಯಿಂದ ಸಾಂಗವಾಯಿತು. ಸಾವಿರಗಟ್ಲೆ ಜನ ಸಮ್ಮಿಲಿತರಾಗಿದ್ದರು. ಈ ಸಮಯದಲ್ಲಿ ಸ್ಥಳೀಯ ರೋಟರಿ ಕ್ಲಬ್ಬಿನವರು ಯಾತ್ರಿಕರಿಗೆ ಕುಡಿಯುವ ನೀರು ಪೂರಯಿಸಿದ್ದಲ್ಲದೆ ಪ್ರಥಮ ಚಿಕಿತ್ಸೆಯನ್ನೂ ಕೊಟ್ಟರು. ನೋಟು ಮುರಿಸುವವರಿಗೆ ಚಿಲ್ಲರ ಹಣ ಕೊಡುವದನ್ನೂ ಏರ್ಪಡಿಸಿದ್ದರು.

ಧಾರವಾಡ ಮತ್ತು ಗದಗಗಳಲ್ಲಿ ಇದೇ ಮಾರ್ಚ ೧ ರಿಂದ ಸೀದಾ ಪ್ರಾರಂಭವಾಗಿದೆ. ರಾಣೇಬಿನ್ನೂರುಮತ್ತು ಹಾವೇರಿಗಳಲ್ಲಿ ಇನ್ನು ಕೆಲ ದಿನಗಳಲ್ಲಿ ಪ್ರಾರಂಭವಾಗುವದು.

ಮಾಸಿಕ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಫೆಬ್ರುಅರಿ ೨೮ ನೇ ತಾರೀಕು ಧಾರವಾಡ ಜಿಲ್ಲಾ ಕಲೆಕ್ಟರರು ಜಿಲ್ಹೆಯಲ್ಲಿಯ ಆಹಾರ ಪರಿಸ್ಥಿತಿಯನ್ನು ವಿಮರ್ಶಿಸುತ್ತ ಅದು ಸಮಾಧಾನಕರವಿದೆಯೆಂದು ಹೇಳಿದರು. ಕಡ್ಲೆಬೇಳೆ ೯೦೦ ಟನ್ನ ಬಂದದ್ದು ಸೀದಾ ಅಂಗಡಿಗಳಲ್ಲಿ ಅದನ್ನು ಕೊಡಲಾಗುವದೆಂದೂ ಹೇಳಿದರು. ಜಿಲ್ಹೆಯಿಂದ ಈ ವರೆಗೆ ಒಂದು ಕಾಳು ಧಾನ್ಯ ಕೂಡ ಹೊರಗೆ ಹೋಗಿಲ್ಲೆಂದೂ ಗೋದಿಯನ್ನು ತರಿಸುವದಕ್ಕಾಗಿ ಅಕ್ಕಿಯನ್ನು ಕಳಿಸಬೇಕಾಗುವದೆಂದೂ ಹೇಳಿದರು. ಕಾಳು ಸ್ವಚ್ಛ ಮಾಡಿ ಕೊಡಲು ಗೋಡೌನ ವ್ಯವಸ್ಥಾಪಕರಿಗೆ ತಿಳಿಸಲಾಗಿದೆಯೆಂದೂ ಹೇಳಿದರು.

ಕುಲಕರ್ಣಿ, ತಲಾಟಿ ಮತ್ತು ಗೌಡರಿಗೆ ವಸೂಲಿ ಕೆಲಸದ ಸಂಬಂಧದಲ್ಲಿ ಪರಿಹಾರ ಕೊಡಬೇಕೆಂದು ಮುಂಬಯಿ ಸರಕಾರದವರು ನಿರ್ಧರಿಸಿದ್ದಾರೆ. ಕುಲಕರ್ಣಿಯರಿಗೆ ೧೯೪೬-೪೭ ರ ಬಗ್ಗೆ ಭೂಕಂದಾಯದ ೧/೨, ೧, ೧॥ ಮತ್ತು ೧೯೪೭-೪೮ ರ ಬಗ್ಗೆ ೧-೧॥, ೨ ರಷ್ಟು ಮತ್ತು ತಲಾಟಿ ಜನರಿಗೆ ಅವರ ತಿಂಗಳ ಸಂಬಳದಷ್ಟು ಅದರ ಒಂದೂವರೆ ಪಟ್ಟು ಮತ್ತು ಇಮ್ಮಡಿ ಹಾಗು ಗೌಡರಿಗೆ ೫೦, ೩೫, ೨೫ ಹೀಗೆ ಬಹುಮಾನಗಳನ್ನು ಅವರವರ ಕೆಲಸಗಳನ್ನನುಲಕ್ಷಿಸಿ ಕೊಡಲಾಗುವದೆಂದು ಪರಿಪತ್ರ ಹೊರಟಿದೆಯೆಂದು ತಿಳಿಯುತ್ತದೆ.

ಧಾರವಾಡ ಕಿಲ್ಲೆಯಲ್ಲಿ ಇರುವ ಲಮಾಣಿ ಫ್ರೀ ಬೋರ್ಡಿಂಗ ಹೌಸಿನಲ್ಲಿ ಪ್ರವೇಶಿಸಬಯಸುವವರು ಅರ್ಜಿ ಕಳಿಸಬೇಕು. ಯಾರ ವಾರ್ಷಿಕ ಉತ್ಪನ್ನ ೧೨೦೦ ರೂ. ಗಿಂತ ಕಡಮೆ ಇದೆಯೊ ಅಂಥ ಬಡ ವಿದ್ಯಾರ್ಥಿಗಳು ಮಾತ್ರ ಪ್ರವೇಶಕ್ಕಾಗಿ ಅರ್ಜಿ ಮಾಡಿಕೊಳ್ಳಬೇಕು. ಅರ್ಜಿ ಫಾರ್ಮಿಗಾಗಿ ೨ ಆಣೆ ಸ್ಟ್ಯಾಂಪು ಕಳಿಸಬೇಕೆಂದು ಮುಂತಾಗಿ ಸುಪರಿಂಟೆಂಡೆಂಟರು ಪ್ರಕಟಿಸುತ್ತಾರೆ.

ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯಲ್ಲಿ ಉಪಸಂಪಾದಕರಾಗಿದ್ದ ಶ್ರೀ ಮಧ್ವರಾವ ಚಿನ್ನಮುಳಗುಂದ ಇವರು ಕರ್ನಾಟಕ ಪ್ರಾದೇಶಿಕ ಪ್ರಸಿದ್ಧಿ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ಈ ಅಧಿಕಾರಿಗಳ ಮುಖ್ಯಸ್ಥಳ ಹುಬ್ಬಳ್ಳಿಯಾಗುವದು.

ಬೆಳಗಾವಿ

ಪಾಚ್ಛಾಪುರದಲ್ಲಿ ಮೊಮಿನಕೇರಿಯಲ್ಲಿ ಒಂದು ಮನೆಯಲ್ಲಿ ಬಹಿರಂಗವಾಗಿ ಜೂಜಾಡುತಿದ್ದ ೨೫ ಜನರನ್ನು ಬಂಧಿಸಲಾಗಿದೆ. ಇವರಲ್ಲಿ ಒಬ್ಬ ಹೆಣ್ಣುಮಗಳೂ ಇದ್ದಾಳೆ.

ಸಾಂಗಲಿ ವಿಲಿಂಗ್ಡನ್ ಕಾಲೇಜಿನ ವಿದ್ಯಾರ್ಥಿಗಳಾದ ಶ್ರೀ ಎ. ಟಿ. ಪಾಟೀಲ ಎಂ. ಎ. ಇವರು ಶ್ರೀ ಆರ್. ಎಸ್. ಪಂಚಮುಖಿಯವರ ಮಾರ್ಗದರ್ಶಿತ್ವದಲ್ಲಿ ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು ಎಂಬ ವಿಷಯದ ಮೇಲೆ ಬರೆದ ಪ್ರಬಂಧಕ್ಕಾಗಿ ಪಿ. ಎಚ್. ಡಿ. ಪದವಿಯನ್ನು ಸಂಪಾದಿಸಿದ್ದಾರೆ. ಕನ್ನಡದಲ್ಲಿ ಪಿ. ಎಚ್. ಡಿ. ಪದವಿಯನ್ನು ಪಡೆದವರಲ್ಲಿ ಇವರು ಮೊದಲಿಗರು.

ಕರ್ನಾಟಕ ಪ್ರೌಢ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀ ಹಣ್ಮಂತಪ್ಪ ಅಂಗಡಿಯವರು ಪ್ರಕಟನೆಯೊಂದನ್ನು ಹೊರಡಿಸಿ ನಿರಕ್ಷರತೆಯನ್ನ ನಿರ್ಮೂಲಗೊಳಿಸುವದಕ್ಕಾಗಿ ಸುಶಿಕ್ಷಿತರೆಲ್ಲ ನೆರವಾಗಬೇಕೆಂದು ಬಿನ್ನವಿಸಿಕೊಂಡಿದ್ದಾರೆ.

ಅಥಣಿ ತಾಲೂಕಿನಲ್ಲಿ ಪ್ರಸಿದ್ಧ ದರವಡೆಗಾರನೆಂಬು ಹೇಳಲಾಗುತಿದ್ದ ಹನುಮಂತಪ್ಪಾ ಮುಂಡಪ್ಪ ಬೆಳಗಲಿ ಇವನನ್ನು ಕುಲ್ಲಳ್ಳಿಯ ಹತ್ತರ ಬಂಧಿಸಲಾಗಿದೆ. ಇವನು ಒಂದು ಗ್ಯಾಂಗು ಕಟ್ಟಿಕೊಂಡು ಹಳ್ಳಿಗಳಲ್ಲೆಲ್ಲ ದರೋಡೆ ಹಾಕುತ್ತಿದ್ದನಂತೆ. ಪ್ರಸಿದ್ಧ ದರೋಡೆಖೋರನೆಂದು ಈ ಮೊದಲು ಸೆರೆ ಹಿಡಿಯಲ್ಪಟ್ಟಿರುವ ಯಮುನಪ್ಪಾ ಬೆಳಗಲಿ ಇವರ ತಮ್ಮ ಇವನು.

ವಿಜಾಪುರ

ಬಾಗಲಕೋಟೆ ನಗರಸಭೆಯ ಸಭೆ ಸೇರಿ ಉಪಸಮಿತಿಗಳ ಆಯ್ಕೆ ನಡೆದುವು. ಮ್ಯಾನೇಜಿಂಗ ಕಮೀಟಿಯ ಚೆಅರಮನ್‌ರೆಂದು ಅಮೀನಸಾಹೇಬ ಸೌದಾಗರ ಇವರು ಆರಿಸಲ್ಪಟ್ಟರು. ಅಮೀನಸಾಹೇಬ ಹುನುಗುಂದ ಇವರು ವರ್ಕ್ಸ ಕಮೀಟಿ ಚೆಅರಮನ್‌ರಾಗಿದ್ದಾರೆ. ಡಾ. ಕೊಪ್ಪ ಇವರನ್ನು ಆಸ್ಪತ್ರೆ ಸಮಿತಿಯ ಚೆಅರಮನ್‌ರನ್ನಾಗಿ ಆರಿಸಲಾಗಿದೆ.

ಕರ್ನಾಟಕ ಮಾಧ್ಯಮಿಕ ಶಿಕ್ಷಕರ ಪರಿಷತ್ತು ಕಳೆದವಾರ ವಿಜಾಪುರದಲ್ಲಿ ಶ್ರೀ ಹಣ್ಮಂತಪ್ಪ ಅಂಗಡಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಮುಂಬಯಿ ಪ್ರಾಂತದ ಶಿಕ್ಷಣ ಸಲಹೆಗಾರರಾದ ಶ್ರೀ ಸಯ್ಯದ್ದೀನರು ಪರಿಷತ್ತನ್ನು ಪ್ರಾರಂಭಿಸಿ ಶಿಕ್ಷಣದ ಬಗ್ಗೆ ಅಮೋಘ ವಿಚಾರಗಳನ್ನು ಹೇಳಿದರು. ಶಿಕ್ಷಣದ ಸಂಬಂಧದಲ್ಲಿ ಕೆಲ ಗೊತ್ತುವಳಿ ಸ್ವೀಕೃತವಾದವು.

ಕರ್ನಾಟಕ ಮಾಧ್ಯಮಿಕ ಶಿಕ್ಷಕರ ಸಂಘಕ್ಕೆ ಬರುವ ವರ್ಷಕ್ಕಾಗಿ ಶ್ರೀ ವಿ ಬಿ ನಾಯಕರು ಅಧ್ಯಕ್ಷರು, ಶ್ರೀ ಜಿ. ಎಸ್. ಮೊಕಾಶಿ ಕಾರ್ಯದರ್ಶಿ, ಎಂ. ಎಸ್. ವಕ್ಕುಂದ ಇವರು ಸಹಕಾರ್ಯದರ್ಶಿ ಎಸ್. ಜಿ. ದೇಸಾಯಿ ಇವರು ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟರು, ಶ್ರೀ ಜಿ ಬಿ ಕೊಪ್ಪಳ ಇವರು ಲೆಕ್ಕ ತಪಾಸಿಗರಾಗಿ ಆರಿಸಲ್ಪಟ್ಟರು. ಶ್ರೀ ವಿ. ಬಿ. ನಾಯಕರ ಅಧ್ಯಕ್ಷತೆಯಲ್ಲಿ ಮಾಧ್ಯಮಿಕ ಶಿಕ್ಷಣದ ಪುನರ್ಘಟನಾ ಸಮಿತಿಯು ಸ್ಥಾಪಿತವಾಯಿತು.

ಇದೇ ೧೮ ನೇ ತಾರೀಕಿನಿಂದ ವಿಜಾಪುರ ಜಿಲ್ಹೆಯಲ್ಲಿಯ ಎಲ್ಲ ಮೋಟರ ಬಸ್ಸುಗಳ ಓಡಾಟವನ್ನು ಸರಕಾರದವರು ವಶಪಡಿಸಿಕೊಂಡಿದ್ದಾರೆ. ಈಗಿದ್ದ ಮೋಟರಗಳನ್ನು ಮಾರಬಯಸುವವರಿಗೆ ಯೋಗ್ಯ ಬೆಲೆ ಕೊಟ್ಟು ಅವನ್ನು ಕೊಳ್ಳಲಾಗುವದು. ಜಿಲ್ಹೆಯಲ್ಲಿಯ ಮೋಟಾರ ಓಡಾಟದ ವ್ಯವಸ್ಥೆಯನ್ನು ನೋಡಿಕೊಳ್ಳುವದಕ್ಕಾಗಿ ಸರಕಾರದವರು ಒಬ್ಬ ಅಧಿಕಾರಿಯನ್ನು ನೇಮಿಸಿದ್ದಾರೆ.

ಕಟಗೇರಿ ಸ್ಟೇಶನದಿಂದ ಅಕ್ಕಲಕೋಟೆ, ಸಂಸ್ಥಾನದ ತಡವಲ ಸ್ಟೇಶನಕ್ಕೆ ಜಿಲ್ಹಾ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆಯದೆ ಕೈಮಗ್ಗದ ಬಟ್ಟೆಗಳನ್ನು ರೇಲ್ವೆ ಮೂಲಕ ಕಳಿಸಿದ್ದರ ಬಗ್ಗೆ ಅಕ್ಕಲಕೋಟೆಯ ವ್ಯಾಪಾರಿಗಳು, ಹುಂಡೇಕಾರ ಮತ್ತು ಆ ಕಾಲಕ್ಕೆ ಕಟಗೇರಿಯಲ್ಲಿ ಸ್ಟೇಶನ ಮಾಸ್ತರ ಆಗಿದ್ದ ಎಚ್. ಎಸ್. ವೆಂಕಟರಾವ ಇವರ ಮೇಲೆ ಬಾಗಲಕೋಟೆ ರೆಸಿಡೆಂಟ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದ ಖಟ್ಲೆಯಲ್ಲಿ ಆರೋಪಿಗಳೆಲ್ಲ ನಿರ್ದೋಷಿಗಳಾದರು.

ಬರುವ ಎಪ್ರಿಲ ೯ ಮತ್ತು ೧೦ ನೇ ದಿನಾಂಕ ಬಾಗಲಕೋಟೆಯಲ್ಲಿ ಕರ್ನಾಟಕ ಕಾಂಗ್ರೆಸ ಸೇವಾದಲದ ಸ್ವಯಂಸೇವಕರ ಪ್ರಾಂತೀಯ ಸಮ್ಮೇಲನವನ್ನು ಕರೆಯಬೇಕೆಂದು ನಿಶ್ಚಯಿಸಲಾಗಿದೆ. ಇದಕ್ಕಾಗಿ ಬರಲು ರಾಷ್ಟ್ರಾಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯನವರನ್ನು ಕೇಳಿಕೊಳ್ಳಲಾಗಿದೆ.

ಉತ್ತರ ಕನ್ನಡ

ಶರೆಯ ಕಳ್ಳ ಸಂಗ್ರಹದ ಹಾಗು ವಿಕ್ರಿಯ ಬಗ್ಗೆ ಪ್ರಸಿದ್ಧವಿದ್ದ ಕಾರವಾರದ ಹರಿಕಂತ್ರವಾಡೆಯಲ್ಲಿ ಮದ್ಯಪ್ರತಿಬಂಧಕ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಹಾ ಗ್ರಾಮೋದ್ಧಾರ ಮಂಡಳದ ಸದಸ್ಯರು ಮತ್ತು ಊರೊಳಗಿನ ಇತರ ಮಹನೀಯರು ಸಭೆಗಳನ್ನೇರ್ಪಡಿಸಿ ಪ್ರಯತ್ನಿಸುತಿರುವರು.

ಮುಂಬಯಿ ಪ್ರಾಂತದ ಪ್ರಾಥಮಿಕ ಶಿಕ್ಷಣ ಸಮಿತಿಯ ಸಭೆ ಶಿರ್ಶಿಯಲ್ಲಿ ೨೨ ಕ್ಕೆ ಸಮಿತಿಯ ಚೆಅರಮನರಾದ ಶ್ರೀ ಜಗತಾಪ ಇವರ ಅಧ್ಯಕ್ಷತೆಯಲ್ಲಿ ಸೇರಿ ಸ್ಥಾನಿಕ ಸಂಸ್ಥೆಗಳ ಸ್ಕೂಲಬೋರ್ಡುಗಳ ಶಾಲಾಕಟ್ಟಡ ಮತ್ತು ಇತರ ಸಲಕರಣೆಗಳನ್ನು ಒದಗಿಸುವ ಮತ್ತು ಇತರ ವಿಷಯಗಳ ಬಗ್ಗೆ ಚರ್ಚೆಯಾಯಿತು. ದಕ್ಷಿಣಭಾಗದ ಶಿಕ್ಷಣಾಧಿಕಾರಿಗಳಾದ ಶ್ರೀ ಸಾನೆ ಮತ್ತು ಈ ಭಾಗದ ಎಲ್ಲ ಜಿಲ್ಹೆಗಳ ಅಡ್ಮಿನಿಸ್ಟ್ರೇಟಿವ್ ಆಫೀಸರರು ಸಭೆಗೆ ಬಂದಿದ್ದರು.

ಅಖಿಲ ಮೈಸೂರು ಬ್ರಾಹ್ಮಣರ ಸಮ್ಮೇಲನವನ್ನು ಎಪ್ರಿಲ ಕೊನೆಯ ವಾರದಲ್ಲಿ ಹಾಸನದಲ್ಲಿ ಕರೆಯಬೇಕೆಂದು ಎಚ್. ಎನ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯಲ್ಲಿ ನಿರ್ಧರಿಸಲಾಯಿತು. ಸ್ವಾಗತ ಸಮಿತಿಯೊಂದನ್ನೂ ರಚಿಸಲಾಯಿತು.

ದಕ್ಷಿಣ ಕನ್ನಡ

ಮಂಗಳೂರಿನ ಕಂಕನಾಡಿಯಲ್ಲಿರುವ ಫಾದರ್ ಮುಲ್ಲರ್ ಕುಷ್ಟರೋಗಿ ಆಸ್ಪತ್ರೆಯ ವಿಸ್ತರಣದ ಶಂಕು ಸ್ಥಾಪನೆಯನ್ನು ದಿನಾಂಕ ೨೧ ರಂದು ಮದ್ರಾಸಿನ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಮಾಡಿದರು. ಈ ಕಟ್ಟಡಕ್ಕಾಗಿ ಮದ್ರಾಸ ಸರಕಾರವು ೪೯,೭೫೦ ರೂಪಾಯಿಗಳ ಸಹಾಯ ನೀಡಿರುವುದು.

ಭಾರತ ಸೇವಕ ಸಂಘದ ಹಿರಿಯ ಸದಸ್ಯರಾದ ಶ್ರೀ ಪಿ. ಕೋದಂಡರಾಯರು ತಮ್ಮ ಪತ್ನಿಯವರೊಂದಿಗೆ (ಅಮೇರಿಕನ್ ಮಹಿಳೆ) ಮಂಗಳೂರಿಗೆ ಬಂದಿದ್ದು ಇಲ್ಲಿನ ಹಲವು ಸಂಘ ಸಂಸ್ಥೆಗಳನ್ನು ಸಂದರ್ಶಿಸಿದರು.

ದಕ್ಷಿಣ ಭಾರತ ರೈಲ್ವೆ ಲೇಬರ್ ಯೂನಿಯನಿನ ಮಂಗಳೂರು ಶಾಖೆಯ ಅಧ್ಯಕ್ಷ ಎಂ. ಪಿ. ಪಿ. ಜಯಶೀಲನ್ ಕಾರ್ಯದರ್ಶಿ ಆರ್. ಶಿವದಾಸ ಕೋಶಾಧ್ಯಕ್ಷ ಎ. ಕೃಷ್ಣನ್ ಅಲ್ಲದೆ ಇನ್ನೊಬ್ಬ ಕೆಲಸಗಾರ ಎಂ. ಕೃಷ್ಣನ್ ಎಂಬವರನ್ನು ಬಂಧಿಸಲಾಗಿದೆ. ಇದರಂತೆ ಹೊಸದುರ್ಗದಲ್ಲೂ ಚಾಕು, ಕುಞರಾಮನ್, ರಾಘವನ್ ಎಂಬವರನ್ನು ಕೈದುಮಾಡಿರುತ್ತಾರೆ.

ದಕ್ಷಿಣ ಕನ್ನಡ ಬೋಯ್ಸ್ ಸ್ಕೌಟು ಸಂಘದ ರಜತ ಮಹೋತ್ಸವವು ದಿನಾಂಕ ೨೬ ರಂದು ಮೈಸೂರಿನ ಸ್ಕೌಟು ಕಮಿಶನರ್ ಮೇಜರ್ ಮೈ. ವಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ವೇಳೆಯಲ್ಲಿ ನಗರದ ಹಾಗೂ ನೆರೆಕೆರೆಯ ಸ್ಕೌಟುಗಳ ಸಮ್ಮೇಳನವೂ ನೆರೆಯಿತು.

ಇಂಡಿಯಾ ಸರಕಾರದಿಂದ ನೇಮಕಗೊಂಡ ಮಾರ್ಕೆಟಿಂಗ್ ಅಫೀಸರರಾದ ಕೆ. ಶಾಮಣ್ಣ ಬಿ. ಎ, ಬಿ. 'ಎಲ್'ರವರು ಮಂಗಳೂರಿಗೆ ಬಂದಿದ್ದು ದಿನಾಂಕ ೨೬ ರಂದು ವಾಣಿಜ್ಯ ಸಂಘದವರನ್ನು ಕಂಡು ಮಾತನಾಡಿದರು. ೨೭ ರಂದು ಅವರನ್ನು ಅಡಿಕೆ ವ್ಯವಸಾಯ ಸಂಘದವರು ಕರೆಯಿಸಿ ತಮ್ಮದೊಂದು ಮನವಿಯನ್ನು ಅರ್ಪಿಸಿದರು. ಮನವಿಯಲ್ಲಿ ಅಡಿಕೆ ವ್ಯವಸಾಯಗಾರರ ಕಷ್ಟಗಳನ್ನೂ ನಿವಾರಣೋಪಾಯವನ್ನೂ ಸೂಚಿಸಲಾಗಿತ್ತು. ಶ್ರೀ ಶಾಮಣ್ಣನವರು ಅಡಿಕೆ ವ್ಯವಸಾಯದ ಕುರಿತು ಕೇಂದ್ರ ಸರಕಾರ ಕೈಕೊಳ್ಳಬಹುದಾದ ಕಾರ್ಯವನ್ನು ವಿವರಿಸಿದರು.

ಕಾರ್ಕಳದಲ್ಲಿ ದಿನಾಂಕ ೧೯ ಮತ್ತು ೨೦ ರಂದು ಜಿಲ್ಲಾ ಪ್ರಥಮ ಆರೋಗ್ಯ ಸಮ್ಮೇಳನವು ಡಾ॥ ಯು. ಪಿ. ಮಲ್ಯ ಎಂ. ಎಲ್. ಎ ಯವರ ಅಧ್ಯಕ್ಷತೆಯಲ್ಲಿ ಜರುಗಿತು. ೧೯ ರಂದು ಬೆಳಿಗ್ಗೆ ಶ್ರೀ ಭಂಡಾರಕೇರಿಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಸ್ವಾಮಿಯವರು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಬಳಿಕ ಸ್ವಾಗತಾಧ್ಯಕ್ಷ ಶ್ರೀ ಎಚ್. ಹುಸೇನ ಸಾಹೇಬರ ಸ್ವಾಗತ ಭಾಷಣವಾದ ಮೇಲೆ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರು ಸಮ್ಮೇಳನದ ಉದ್ಘಾಟನೆಮಾಡಿದರು. ಸಮ್ಮೇಳನದ ಅಂಗವಾದ ಆರೋಗ್ಯ ಪ್ರದರ್ಶನವನ್ನು ಡಾ॥ ಆರ್. ಎಂ. ಮೇಥ್ಯೂ [ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್]ರವರು ತೆರೆದರು. ಈ ಸಂದರ್ಭದಲ್ಲಿ ಡಾ॥ ಕೆ. ವಾಸುದೇವರಾವ್, ಡಾಕ್ಟರ್ ಕೊಯ್ಲೋ ಡಾ॥ ಸಿ. ಸುಬ್ಬರಾವ್ ಮೊದಲಾದವರು ಆರೋಗ್ಯ ವಿಚಾರದಲ್ಲಿ ಬೋಧಪ್ರದವಾದ ಭಾಷಣ ಮಾಡಿದರು. ಸಮ್ಮೇಳನವು ಹಲವು ಗೊತ್ತುವಳಿಗಳನ್ನು ಸ್ವೀಕರಿಸಿತು.

ಸಿರಿಯಾ ನದಿಯ ಮೂಲಕ ಕಳ್ಳಸಂತೆಗೆ ಹೋಗುತ್ತಿರುವ ೨೫ ಮುಡಿ ಭತ್ತವನ್ನು ಕುಂಬಳೆ ಫಿರ್ಕಾ ಸಪ್ಲೈ ಆಫೀಸರರು ಹಿಡಿದು ದಿನಾಂಕ ೧೬ ರಂದು ಕುಂಬಳೆಯ ಡಿಪೋವಿಗೆ ಕಳುಹಿಸಿರುವರು.

ಮೈಸೂರಿನಲ್ಲಿ ಡಾ. ಮೋದಿಯವರು ೩೦೦ ಜನರ ಕಣ್ಣಿನ ಮೇಲೆ ಶಸ್ತ್ರಕ್ರಿಯೆ ಮಾಡಿದ್ದಲ್ಲದೆ ೪೦೦೦ ಜನರ ಕಣ್ಣುಗಳಿಗೆ ಚಿಕಿತ್ಸೆ ಮಾಡಿದರು. ಮೈಸೂರಿನ ಹಿಂದಿನ ಮಹಾರಾಣಿಯವರು ರೋಗಿಗಳಿಗೆಲ್ಲ ಪುಕ್ಕಟೆ, ಆಹಾರ ಹಾಲು ಮತ್ತು ಹಣ್ಣುಗಳನ್ನು ಒದಗಿಸಿದರು. ಮೈಸೂರಿನ ಹಿಂದಿನ ಮಹಾರಾಣಿಯವರನ್ನೊಳಗೊಂಡು ಅನೇಕ ಮಹನೀಯರು ಆಸ್ಪತ್ರೆಯನ್ನು ಸಂದರ್ಶಿಸಿದರು.

ಮೈಸೂರು ಪ್ರಗತಿಪರ ಸಂಸ್ಥಾನ

ಸರದಾರರ ಪ್ರಶಂಸೋದ್ಗಾರ

ಮೈಸೂರಲ್ಲಿ ಎರಡು ದಿನ ಸಂಚರಿಸಿ ಹಿಂದುಸ್ಥಾನ ಸರಕಾರದ ಉಪಮುಖ್ಯಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಸಂಸ್ಥಾನದ ಅರಸರನ್ನೂ ಆಡಳಿತೆಯನ್ನೂ ಬಾಯ್ತುಂಬ ಹೊಗಳಿದ್ದಾರೆ. ಮೊದಲು ಅವರು ತಮಗಿತ್ತ ಆದರದ ಸಂಭ್ರಮದ ಸ್ವಾಗತ, ಆದರ ಆತಿಥ್ಯಗಳಿಗಾಗಿ ಅರಸರನ್ನೂ ಪ್ರಜೆಗಳನ್ನೂ ಅಭಿನಂದಿಸಿ ೧೨ ವರ್ಷಗಳ ನಂತರ ಆ ಸಂಸ್ಥಾನಕ್ಕೆ ಭೆಟ್ಟಿ ಕೊಟ್ಟಾಗ ಕಂಡ ಜನತೆಯ ಆಸೆ ಆಕಾಂಕ್ಷೆ ಪೂರಯಿಸಲ್ಪಟ್ಟು ಸುಖ ಸಮೃದ್ಧಿಗಳಲ್ಲಿ ಅವರು ಇರುವದನ್ನು ನೋಡಿ ಸಂತೋಷವೆನಿಸಿದೆಯೆಂದು ಬರೆದಿರುವರು. ಶ್ರೇಷ್ಠ ಪ್ರಗತಿಪರ ಸಂಸ್ಥಾನ[...] ಸ್ಥಾನಮಾನಗಳನ್ನು ಯೋಗ್ಯರೀತಿಯಿಂ[...] ಕಾಯ್ದುಕೊಳ್ಳಲಾಗಿದೆಯೆಂದು ಅಭಿಪ್ರಾಯ[...] ಪಟ್ಟು ಅಚ್ಚುಕಟ್ಟಾದ ವ್ಯವಸ್ಥೆಯನ್ನಿಟ್ಟ ಬಗ್ಗೆ ಪೋಲೀಸರನ್ನೂ ಅಧಿಕಾರಿಗಳನ್ನೂ ಪ್ರ[...] ಗಳನ್ನೂ ಅಭಿನಂದಿಸಿದ್ದಾರೆ. ಮೈಸೂರಿನ [...] ಸಂದರ್ಶನವು ತಮಗೆ ಸವಿ ನೆನಪಾಗಿ ಉ[...] ಯುವದೆಂದೂ ಅವರು ಕೊನೆಯಲ್ಲಿ ಅ[...] ಪ್ರಾಯಪಟ್ಟಿದ್ದಾರೆ.

ಮಂಗಳೂರಲ್ಲಿ ಅಮೇರಿಕದ ಹಡಗು

ಯುರೋಪಿಯನ್ ಕ್ಯಾಪ್ಟನನ ಕೈದು

ದಿನಾಂಕ ೧೩ ರಿಂದ ಮಂಗಳೂರು ಬಂದರದಲ್ಲಿ ಅಮೇರಿಕದ "ಸೀ ಇಂಡಿಯಾ" ಎಂಬ ಸ್ಪೀಡ್ ಬೋಟಿನ ಯುರೋಪಿಯನ್ ಕೇಪ್ಟನ್ ರಾಲ್ಫ ನೋರ್ವನ್ ರಿಚಾರ್ಡಸ್ ಲಿವರ್ ವರ್ತ್ ಎಂಬಾತನನ್ನು ಇಲ್ಲಿಯ ದಕ್ಷಿಣ ಪೋಲೀಸ್ ಸ್ಟೇಶನಿನ ಸಬ್ ಇನ್ಸಪೆಕ್ಟರ್ ಶ್ರೀ ಕೇಶವನ್ ಕುಟ್ಟಿ ನಾಯರರು ದಿನಾಂಕ ೨೪ ರಂದು ಬೆಳಿಗ್ಗೆ ಕೈದು ಮಾಡಿದರು. ಅವರನ್ನು ಸಬ್ ಜೇಲಿನಲ್ಲಿ ಇರಿಸಿದ್ದು "ಸೀ ಇಂಡಿಯಾ"ವು ಮಂಗಳೂರು ಬಂದರದಲ್ಲಿದೆ.

ಈ ಕ್ಯಾಪ್ಟನನಾದ ಲಿವರ್ ವರ್ತನು ರೂ. ೨೫ ಸಾವಿರಗಳ ಬೆಲೆಬಾಳುವ ಪದಾರ್ಥಗಳ ಮಟ್ಟಿಗೆ ವಿಶ್ವಾಸವಂಚನೆ ಮಾಡಿರುವನೆಂಬ ದೂರೊಂದು ಕೊಲೊಂಬೋ ಪೋಲೀಸ್ ಠಾಣ್ಯದಲ್ಲಿದೆಯೆಂದು ಹೇಳಲಾಗಿದೆ. ಇವನ ವಯಸ್ಸು ಸುಮಾರು ೩೮ ವರ್ಷಗಳಿರಬಹುದೆಂದೂ ಇವನ ಜನ್ಮಭೂಮಿಯು ಆಸ್ಟ್ರೇಲಿಯಾ ಎಂದೂ ತಿಳಿದುಬಂದಿದೆ.

ಹೈದ್ರಾಬಾದ ಸಂಸ್ಥಾನದಲ್ಲಿಯ ಖಾಸಗಿ ಹೊಲಗಳು

ಸರಕಾರ ವಶಕ್ಕೆ ಬರಲಿವೆ

ನಿಜಾಮ ಸಾಹೇಬರು ತಮ್ಮ ಎಲ್ಲ ಹೊಲಗಳನ್ನು ಸರಕಾರದ ವಶಕ್ಕೆ ಬಿಟ್ಟುಗೊಟ್ಟಿದ್ದು ಇನ್ನುಳಿದ ಜಾಗಿರದಾರರೂ ಅದೇ ದಾರಿಯಲ್ಲಿ ಇರುವರೆಂದು ತಿಳಿಯುತ್ತದೆ. ಹೈದರಾಬಾದ ಸಂಸ್ಥಾನದಲ್ಲಿ ಒಟ್ಟಿಗೆ ಇರುವ ೮೩ ಸಾವಿರ ಚೌರಸ ಕ್ಷೇತ್ರದಲ್ಲಿ ೨೩ ಸಾವಿರ ಹಳ್ಳಿಗಳಿದ್ದು ಅವುಗಳಲ್ಲಿ ಸಂಸ್ಥಾನದ ಪ್ರತ್ಯಕ್ಷ ಆಡಳಿತೆಯಲ್ಲಿ ೫೦ ಸಾವಿರ ಚಚ್ಚೌಕು ಮೈಲು ಅಂದರೆ ೧೪ ಸಾವಿರ ಹಳ್ಳಿಗಳು, ನಿಜಾಮರ ಖಾಸಗಿ ಆಸ್ತಿ ೭ ಸಾವಿರ ಚಚ್ಚೌಕು ಮೈಲು ಅಂದರೆ ೨ ಸಾವಿರ ಹಳ್ಳಿಗಳು ಉಳಿದ ಜಾಗಿರದಾರರ ಆಸ್ತಿ ಮೂರು ಸಾವಿರ ಚಚ್ಚೌಕು ಮೈಲು ಅಂದರೆ ಒಂದು ಸಾವಿರ ಹಳ್ಳಿಗಳಿವೆ. ಒಟ್ಟಾರೆ ಜಾಗಿರಿಗಳು ಮತ್ತು ಸಂಸ್ಥಾನಿಕರ ಸೊತ್ತುಕೂಡಿ ೨೩ ಸಾವಿರ ಚಚ್ಚೌಕು ಮೈಲು ಅಂದರೆ ೬ ಸಾವಿರ ಹಳ್ಳಿಗಳಿವೆ. ಇದರ ಅರ್ಥವೆಂದರೆ ಈ ಜಾಗೀರುಗಳಲ್ಲಿಯ ಸುಮಾರು ೪೦ ಲಕ್ಷ ಜನರು ವಾಸಿಸುತ್ತಾರೆ. ಇದೆಲ್ಲ ಜನ ಒಂದು ಬಗೆಯಿಂದ ಈ ಜಾಗಿರದಾರರ ನಿಯಂತ್ರಣದಲ್ಲಿಯೆ ಇದ್ದರು. ಇದೆಲ್ಲ ಆಸ್ತಿ ಸರಕಾರ ವಶಕ್ಕೆ ಬಂದರೆ ಮಹತ್ವದ ಘಟನೆ ಸಂಭವಿಸಿದಂತಾಗುವದು.

ಮಂಗಳೂರಿನಲ್ಲಿ ೨೬ ನೇ ತಾರೀಕು ಸಾಯಂಕಾಲ ೬ ಗಂಟೆಗೆ ಸರಿಯಾಗಿ ಭಾರತ ಸೇವಾಸಂಘದ ಹಿರಿಯಸದಸ್ಯರಾದ ಶ್ರೀ. ಪಿ. ಕೋದಂಡರಾಯರು ದಕ್ಷಿಣ ಕನ್ನಡ ಅಧ್ಯಾಪಕ ಸಂಘದ ನೇತೃತ್ವದಲ್ಲಿ ಅಮೇರಿಕದ ಶಾಲೆಗಳ ಕುರಿತದ ತಮ್ಮ ಅನುಭವಗಳನ್ನು ತಿಳಿಸಿದರು.

ಹಿಂದುಸ್ತಾನ

ಮುಂಬಯಿ

ಮುಂಬಯಿ ಪ್ರಾಂತದಲ್ಲಿ ವಿದ್ಯುತ್ಶಕ್ತಿಯ ಪೂರಯಿಕೆಯನ್ನು ಹೆಚ್ಚಿಸುವದಕ್ಕಾಗಿ ಸರಕಾರದವರು ಒಟ್ಟು ೫೯ ಕೋಟಿ ೬೯ ಲಕ್ಷ ರೂಪಾಯಿಗಳ ವೆಚ್ಚದ ಯೋಜನೆಯನ್ನು ಮಾಡಿದ್ದು ಇದು ಪೂರ್ಣ ಮುಗಿಯಬೇಕಾದರೆ ೧೫ ವರುಷ ಹಿಡಿಯುವದೆಂದೂ ಇದರ ಪರಿಣಾಮವಾಗಿ ೮೫.೬೦೦೦ ಕಿಲೋವ್ಯಾಟ ಶಕ್ತಿಯು ದೊರೆಯುವದೆಂದೂ ವಿದ್ಯುತ್ಶಕ್ತಿ ಕಮೀಶನರರಾದ ಶ್ರೀ ಪಿ. ಬಿ. ಅಡವಾನಿಯವರು ಒಂದು ಭಾಷಣದಲ್ಲಿ ಹೇಳಿದರು. ಕೋಯನಾ ಯೋಜನೆ ಪೂರ್ಣವಾದರೆ ವಿಜಾಪುರ, ಸಾತಾರಾ, ರತ್ನಾಗಿರಿ ಮತ್ತು ಪುಣೆ ಜಿಲ್ಹೆಗಳಿಗೆ ವಿದ್ಯುತ್ಶಕ್ತಿ ಸಿಕ್ಕುವದು. ಕಾಳೀನದಿ ಹಾಗು ಸುಪಾ ಯೋಜನೆಗಳಿಂದ ಇಡೀ ಜಗತ್ತಿನಲ್ಲಿ ಇಲ್ಲದಷ್ಟು ಕಡಮೆ ಬೆಲೆಗೆ ಈ ಪ್ರಾಂತದ ಹಳ್ಳಿ ಪಟ್ಟಣಗಳಿಗೆ ವಿದ್ಯುತ್ತನ್ನು ಪೂರಯಿಸಲಾಗುವದು.

ರೇಲ್ವೆ ಸಂಘಗಳ ಮಹದಾರ ಸಂಘದಿಂದ ಆರಿಸಲ್ಪಟ್ಟ ಮುಂಬಯಿ ಶಾಸನ ಸಭಾ ಸದಸ್ಯರಾದ ಶ್ರೀ ಆರ್. ಎಂ. ಬೇಡಗೀಕರರು ಕಾಂಗ್ರೆಸ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ ಪಾರ್ಲಮೆಂಟರಿ ಪಕ್ಷದ ಧುರೀಣರು ಕೇಳಿದ್ದಾರೆಂದು ತಿಳಿಯುತ್ತದೆ.

ಕರ್ನಾಟಕ ಪ್ರಾಂತವು ಪ್ರತ್ಯೇಕವಾಗುವವರೆಗೆ ವತನ ಖಾಲಸಾ ಮಸೂದೆಯನ್ನಾದರೂ ಮುಂದೂಡಬೇಕು ಇಲ್ಲವೆ ಕುಲಕರ್ಣಿಯರಿಗೆ ಏನಾದರೂ ಪರಿಹಾರ ಕೊಡಬೇಕು ಎಂಬಾಶಯದ ಮನವಿಯನ್ನು ಮುಂಬಯಿ ಶಾಸನ ಸಭೆಯಲ್ಲಿಯ ಕರ್ನಾಟಕದ ಸದಸ್ಯರು ಸರಕಾರಕ್ಕೆ ಒಪ್ಪಿಸಲಿರುವರೆಂದು ತಿಳಿಯುತ್ತದೆ. ಶಿಷ್ಟಮಂಡಳವೊಂದು ಮುಖ್ಯ ಮಂತ್ರಿ ಮತ್ತು ಕಂದಾಯಮಂತ್ರಿಗಳನ್ನು ಕಾಣುವದೆಂದು ತಿಳಿಯುತ್ತದೆ.

ಮಾಧ್ಯಮಿಕ ಸಾಲೆಗಳಲ್ಲಿ ಆಂಗ್ಲಭಾಷೆಯನ್ನು ತೆಗೆದು ಹಾಕಿದ್ದರಿಂದ ಮುಂಬಯಿ ಸರಕಾರದವರು ವರ್ಗಗಳನ್ನೆಲ್ಲ ಪುನರ್ಘಟಿಸಿದ್ದಾರೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಸಾಲೆಗಳನ್ನು ಕೂಡಿಸಿ ಒಟ್ಟಿಗೆ ಹನ್ನೊಂದು ವರ್ಗಗಳೆಂದು ಪರಿಗಣಿಸಲಾಗುವದು. ಈಗ ಮಾಧ್ಯಮಿಕ ಸಾಲೆಗಳಲ್ಲಿ ಇದ್ದ ೧ ರಿಂದ ೭ ವರ್ಗಗಳನ್ನು ೫ ರಿಂದ ೧೧ ವರ್ಗಗಳೆಂದು ಹೆಸರಿಸಲಾಗುವದು– ಯುರೋಪಿಯನ ವರ್ಗಗಳಲ್ಲಿ ಇದೇ ರೀತಿ ವರ್ಗೀಕರಣ ಮಾಡಲಾಗುವದು.

ಇದೇ ಫೆಬ್ರುಆರಿ ೨೭ ರಿಂದ ಅಹಮ್ಮದನಗರದಲ್ಲಿ ಸೀದಾ ಪದ್ಧತಿಯನ್ನು ಪ್ರಾರಂಭಿಸಲಾಗಿದೆ.

ಮುಂಬಯಿ ಕೌನ್ಸಿಲ್ ಭವನದಲ್ಲಿ ಸೇರಿದ್ದ ಸಮಾಜ ಸೇವಕರ ಸಮ್ಮೇಳನವನ್ನು ಉದ್ಘಾಟಿಸುತ್ತ ಗೃಹಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿ ಇವರು, ನಾವೆಲ್ಲ ಗಾಂಧೀಜಿ ತೋರಿಸಿದ ಸರ್ವೋದಯ ಮಾರ್ಗವನ್ನು ಒಪ್ಪಿಕೊಳ್ಳುತ್ತೇವೆ. ಅದಕ್ಕನುಸಾರವಾಗಿ ನಾವೆಲ್ಲ ನಡೆಯಲಿಕ್ಕೆ ಬೇಕು. ಪ್ರತಿ ಜಿಲ್ಹೆಯಲ್ಲಿ ಅದಕ್ಕಾಗಿ ಆವಶ್ಯಕ ಕಾರ್ಯಕರ್ತರನ್ನು ಸಂಘಟಿಸಬೇಕು ಎಂದು ಮುಂತಾಗಿ ಹೇಳಿದರು. ಅನಂತರ ಮುಖ್ಯ ಮಂತ್ರಿ ಶ್ರೀ ಬಾಳಾಸಾಹೇಬ ಖೇರರು ಭಾಷಣ ಮಾಡಿ ಸಮಾಜ ಸೇವಕರ ಕಾರ್ಯವನ್ನು ಬಣ್ಣಿಸಿದರು.

ಸಾತಾರಾ ಜಿಲ್ಹೆಯಲ್ಲಿ ಮಾನ್ಯ ಪಾಟೀಲ ಮಲ್ಲನಗೌಡರು ಧಾನ್ಯ ಎತ್ತುವಳಿ ಕಾರ್ಯವನ್ನು ಕೈಕೊಂಡಿದ್ದಾರೆ. ರೈತರು ಮೆರವಣಿಗೆಯಿಂದ ಬಂದು ಧಾನ್ಯಗಳನ್ನು ಕೊಡುತಿರುವರು. ವಾಳವಾ ಒಂದು ತಾಲೂಕಿನಲ್ಲಿಯೆ ೩೦ ಸಾವಿರ ಚೀಲ ಧಾನ್ಯ ಕೊಡಲಾಯಿತು.

ನಗರಗಳಲ್ಲಿಯ ಗೊಬ್ಬರದ ಉಪಯೋಗವನ್ನು ರೈತರ ಹೊಲಗಳಲ್ಲಿಯೆ ಮಾಡಿ ತೋರಿಸಲು ಭಡೋಚ, ಸುರತ, ಅಹಮ್ಮದನಗರ ಮತ್ತು ಸೊಲ್ಲಾಪುರಗಳಲ್ಲಿ ಮುಂಬಯಿ ಸರಕಾರದವರು ಪ್ರಯೋಗ ನಡೆಸಲಿರುವರು. ಈ ಗೊಬ್ಬರದಿಂದ ಜೋಳದ ಪೈರು ಬಹಳ ಹೆಚ್ಚಿಗೆ ಬರಲಿದೆಯೆಂದು ತಜ್ಞರ ಅಭಿಪ್ರಾಯ.

೧೯೫೦ ನೇ ಎಪ್ರಿಲ ಒಂದರೊಳಗಾಗಿ ಪ್ರಾಂತದಲ್ಲಿ ಸಂಪೂರ್ಣ ಮದ್ಯಪಾನ ಪ್ರತಿಬಂಧವನ್ನು ಮಾಡಲಾಗುವದೆಂಬಾಶಯದ ಮದ್ಯಪಾನ ಪ್ರತಿಬಂಧಕ ಮಸೂದೆಯು ಮುಂಬಯಿ ಶಾಸನ ಸಭೆಯಲ್ಲಿ ಸ್ವೀಕೃತವಾಯಿತು.

ಹೊರನಾಡ ಕನ್ನಡಿಗರ ಸಾಹಿತ್ಯ ಸಮ್ಮೇಳನವನ್ನು ಬರುವ ಎಪ್ರಿಲದಲ್ಲಿ ಕೊಲ್ಹಾಪುರದಲ್ಲಿ ಕೂಡಿಸುವ ಬಗ್ಗೆ ಸಿದ್ಧತೆಗಳು ನಡೆದಿವೆಯೆಂದು ತಿಳಿಯುತ್ತದೆ.

ಮದರಾಸು

ಬಳ್ಳಾರಿ ಜಿಲ್ಹೆಯಲ್ಲಿ ಭೈರವನತಿಪ್ಪ ನೀರಾವರೆ ಯೋಜನೆಯನ್ನು ೧೯೪೯ ೫೦ ರಲ್ಲಿ ಕೈಕೊಳ್ಳಲಾಗುವದೆಂದೂ ಇದಕ್ಕೆ ೬೦ ಲಕ್ಷ ರೂ.ಗಳ ವೆಚ್ಚ ಬರುವದೆಂದೂ ಇದರಿಂದ ಬಳ್ಳಾರಿ ಹಾಗು ಅನಂತಪುರ ಜಿಲ್ಹೆಗಳಲ್ಲಿ ಹತ್ತುಸಾವಿರ ಎಕರೆ ಭೂಮಿಯನ್ನು ಸಾಗು ಮಾಡಲಾಗುವದೆಂದೂ ಇದರಿಂದ ಮೈಸೂರು ಸಂಸ್ಥಾನಕ್ಕೂ ಲಾಭವಾಗುವದರಿಂದ ಅದರೊಡನೆ ಒಡಂಬಡಿಕೆ ಮಾಡಿಕೊಳ್ಳಲಾಗುವದೆಂದೂ ಲೋಕೋಪಯೋಗಿ ಶಾಖೆಯ ಮಂತ್ರಿ ಶ್ರೀ ಭಕ್ತವತ್ಸಲಂ ಇವರು ಶಾಸನ ಸಭೆಯಲ್ಲಿ ನಿವೇದಿಸಿದರು.

ಯೋಗ್ಯ ಸಮಯ ಪ್ರಾಪ್ತವಾದ ಕೂಡಲೆ ಸಾಮ್ಯವಾದ ತತ್ತ್ವಕ್ಕನುಸಾರವಾಗಿ ರಾಷ್ಟ್ರದ ಪುನರ್ಘಟನೆಯನ್ನು ಕೈಕೊಳ್ಳುವಂಥ ಬಲಿಷ್ಠ ಪಕ್ಷವೊಂದು ಬೇಕೆಂದು ಸಾಮ್ಯವಾದಿ ಪಕ್ಷದ ಧುರೀಣರಾದ ಅಶೋಕ ಮೇಥಾರು ಮದರಾಸಿನಲ್ಲಿ ಸಾಮ್ಯವಾದಿ ತರುಣರ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಹೇಳಿದರು. ಇನ್ನು ಎರಡು ಮೂರು ವರುಷಗಳಲ್ಲಿ ಸಾಮ್ಯವಾದಿಗಳ ಕೈಯಲ್ಲಿ ಆಡಳಿತೆಯ ಅಧಿಕಾರ ಸಿಕ್ಕುವದೆಂದೂ ಅವರು ಅಭಿಪ್ರಾಯಪಟ್ಟರು.

ಟೆಲಿಫೋನು ಮತ್ತು ತಂತಿ ಕಚೇರಿಗಳಲ್ಲಿ ಮತ್ತು ಅದರಂತೆಯೇ ರೇಲ್ವೆ ಮಾರ್ಗಗಳ ಮೇಲಿರುವ ಮಹತ್ವದ ಸೇತುವೆಗಳ ಮೇಲೆ ಹಾಯ್ದು ಹೋಗುವದಕ್ಕಾಗಿ ಮೊದಲು ಅಪ್ಪಣೆ ಪಡೆಯಬೇಕು ಎಂದು ಮದರಾಸ ಸರಕಾರವು ವಿಧಿಸಿದೆ. ಕಿಡಿಗೇಡಿಗಳಿಂದ ಅಘಾತವಾಗಬಾರದೆಂದು ಈ ಮುಂಜಾಗ್ರತೆ ವಹಿಸಲಾಗಿದೆ.

ಮದ್ರಾಸ ಪ್ರಾಂತದಲ್ಲಿಯ ವಿದ್ಯುತ್ಕಂಪನಿಗಳನ್ನೆಲ್ಲ ರಾಷ್ಟ್ರೀಕರಿಸಬೇಕೆಂದಿದ್ದು ಈ ವಿಷಯದಲ್ಲಿ ಮದರಾಸ ಸರಕಾರವು ಕೇಂದ್ರ ಸರಕಾರದ ಮನ್ನಣೆಯನ್ನು ಕೋರಿದೆ.

ಮದರಾಸ ಶಾಸನ ಸಭೆಯಲ್ಲಿ ಅರ್ಥಮಂತ್ರಿ ಬಿ. ಗೋಪಾಳರೆಡ್ಡಿಯವರು ೧೯೪೯-೫೦ ರ ಮುಂಗಡ ಪತ್ರವನ್ನು ಮಂಡಿಸಿದರು. ಬರುವ ವರ್ಷದ ಆದಾಯ ೫೧ ಕೋಟಿ ೭೫ ಲಕ್ಷ ರೂಪಾಯಿ ವೆಚ್ಚವು ೫೫ ಕೋಟಿ ೬೬ ಲಕ್ಷ ರೂಪಾಯಿ ಇದ್ದು ೩ ಕೋಟಿ ೯೧ ಲಕ್ಷ ರೂಪಾಯಿ ಕೊರತೆಯಿದೆ. ಹೊಸ ಕರಗಳನ್ನು ಹೇರಿ ಕೊರತೆಯನ್ನು ತುಂಬಿಕೊಳ್ಳಲಾಗುವದೆಂದು ಮಂತ್ರಿಗಳು ಹೇಳಿದರು.

ಉಡುಪಿ ಬೋರ್ಡ ಹೈಸ್ಕೂಲಿನ ಶ್ರೀ ಕೆ. ವಿಠ್ಠಲಶೆಟ್ಟಿ ಇವರು ಬರೆದ ವಿಜ್ಞಾನ ವಿಚಿತ್ರಗಳು ಎಂಬ ಕನ್ನಡ ಗ್ರಂಥಕ್ಕೆ ಮದ್ರಾಸ ಸರಕಾರದವರು ೨೫೦ ರೂಗಳ ಹಾಗು ಮದ್ರಾಸ ಪಠ್ಯಪುಸ್ತಕ ಸಂಸ್ಥೆಯವರು ೫೦ ರೂಪಾಯಿಗಳ ಬಹುಮಾನ ಕೊಟ್ಟಿದ್ದಾರೆ.

ಧಾರವಾಡದ ಪ್ರೊ ಎನ್. ಆರ್ ಕುಲಕರ್ಣಿಯವರು ಬರೆದ ಮನೋವಿಶ್ಲೇಷಣ ಎಂಬ ಪುಸ್ತಕಕ್ಕೆ ಮದ್ರಾಸ ಪಠ್ಯಪುಸ್ತಕ ಸಮಿತಿಯವರು ೫೦ ರೂಪಾಯಿ ಕೊಟ್ಟರು.

ಯುಕ್ತ ಪ್ರಾಂತ

ಕಮಲಾ ನೆಹರು ಇವರು ಕಣ್ಮರೆಯಾಗಿದ್ದರೂ ಅವರ ಆತ್ಮವು ಈ ಆಸ್ಪತ್ರೆಯಲ್ಲಿ ವಾಸವಾಗಿದೆ; ಈ ಆಸ್ಪತ್ರೆಯಲ್ಲಿ ಬೇಗಂ ಆಜಾದ ಭಾಗವೆಂಬ ಹೊಸ ವಿಭಾಗದ ಆರಂಭೋತ್ಸವವನ್ನು ಮಾಡಲು ನನಗೆ ಸಂತೋಷವೆನಿಸುತ್ತದೆ ಎಂದು ಗವರ್ನರ ಜನರಲ್‌ರಾದ ಮಾನ್ಯ ರಾಜಗೋಪಾಳಾಚಾರ್ಯರು ಅಲಹಾಬಾದದಲ್ಲಿಯ ಕಮಲಾ ನೆಹರೂ ಆಸ್ಪತ್ರೆಯ ಬೇಗಂ ಆಝಾದ ವಿಭಾಗದ ಉದ್ಘಾಟನೆ ಮಾಡುತ್ತ ಹೇಳಿದರು. ಯುಕ್ತ ಪ್ರಾಂತ ಸರಕಾರವು ಒಂದು ಲಕ್ಷ ರೂಪಾಯಿ ಇದಕ್ಕೆ ದಾನ ಕೊಟ್ಟಿದ್ದು ೬೦ ಸಾವಿರ ರೂಪಾಯಿಗಳ ವಾರ್ಷಿಕ ಗ್ರ್ಯಾಂಟನ್ನು ಕೊಟ್ಟಿರುವದು.

ತರುಣರು ಅಡ್ಡದಾರಿಹಿಡಿಯದೆ ಸ್ವಾತಂತ್ರ್ಯ ಸಿಕ್ಕಿರುವದರ ಸದುಪಯೋಗ ಮಾಡಿಕೊಳ್ಳಬೇಕೆಂದು ಸರದಾರ ವಲ್ಲಭಭಾಯಿ ಪಟೇಲರು ಬೆಂಗಳೂರಿನಲ್ಲಿಯ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ರಾಷ್ಟ್ರದ ಪ್ರಗತಿಗೆ ಶಾಂತಿ ಅವಶ್ಯವಾಗಿದ್ದುದರಿಂದ ಎಲ್ಲರೂ ಶಾಂತಿಯನ್ನು ಕಾಯಲು ಪ್ರಯತ್ನಿಸಬೇಕೆಂದೂ ಅವರು ಹೇಳಿದರು.

ಹೊಸದಿಲ್ಲಿ

ಓರಿಸಾ ಸರಕಾರದವರು ಖಾಸಗಿ ಬಂಡವಲದಾರರ ಸಹಾಯ್ಯದಿಂದ ಓರಿಸಾದಲ್ಲಿ ಟ್ರ್ಯಾಕ್ಟರ ಕಾರಖಾನೆಯನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಿದ್ದು ಈ ಯೋಜನೆಯಲ್ಲಿ ಭಾಗವಹಿಸಬೇಕೆಂದು ಕೇಂದ್ರ ಸರಕಾರಕ್ಕೆ ಭಿನ್ನವಿಸಿಕೊಂಡಿದ್ದಾರೆ ಎಂದು ಭಾರತದ ಉದ್ಯಮ ಮಂತ್ರಿ ಡಾ. ಮುಕರ್ಜಿಯವರು ಹಿರಿಯೋಲಗದಲ್ಲಿಯ ಒಂದು ಪ್ರಶ್ನೆಗೆ ಉತ್ತರಿಸುತ್ತ ತಿಳಿಸಿದರು. ಕಲಕತ್ತೆಯಲ್ಲಿಯೂ ಒಂದು ಖಾಸಗಿ ಕಂಪನಿಯು ಇಂಥ ಕಾರಖಾನೆಯನ್ನು ತೆರೆಯಲು ಕೇಳಿಕೊಂಡಿದೆಂದೂ ಮಂತ್ರಿಗಳು ಹೇಳಿದರು.

ಹಿಂದುಸ್ತಾನದಲ್ಲಿಯ ಸಿಮೆಂಟಿನ ಉತ್ಪಾದನೆಯು ೧೯೫೫ ರೊಳಗಾಗಿ ೨೦ ಲಕ್ಷ ಟನ್ನಗಳಷ್ಟು ಹೆಚ್ಚಾಗುವದೆಂದು ನಿರೀಕ್ಷಿಸಲಾಗಿದೆಯೆಂದು ಉದ್ಯಮ ಮಂತ್ರಿ ಮುಕರ್ಜಿಯವರು ಹೇಳಿದರು.

ಹಿಂದುಸ್ತಾನದಲ್ಲಿ ವ್ಯಾಪಾರ ಸಂಬಂಧವನ್ನು ಬೆಳೆಸಬೇಕೆಂದು ಇಟಲಿಯ ಅರ್ಥಿಕ ಶಿಷ್ಟಮಂಡಳದ ಪ್ರತಿನಿಧಿಗಳು ಹಿಂದುಸ್ತಾನದ ಪ್ರತಿನಿಧಿಗಳನ್ನು ಕಂಡು ಮಾತುಕತೆಯಾಡಿದರು. ಅವರು ಹಿಂದುಸ್ತಾನದಲ್ಲಿಯ ಔದ್ಯಮಿಕ ಕೇಂದ್ರಗಳನ್ನು ಸಂದರ್ಶಿಸಲು ಸಂಚಾರ ಕೈಕೊಳ್ಳಲಿದ್ದಾರೆ.

ಅಖಿಲಭಾರತ ಎಂಟನೆ ದನಗಳ ಪ್ರದರ್ಶನವು ಹೊಸದಿಲ್ಲಿಯಲ್ಲಿ ೨೭ ನೇ ತಾರೀಕಿನಿಂದ ತೆರೆದಿದೆ. ಒಕ್ಕಲತನ ಮಂತ್ರಿಗಳಾದ ಮಾನ್ಯ ಜಯರಾಮದಾಸ ದೌಲತರಾಮರು ಅದನ್ನು ಪ್ರಾರಂಭಿಸುತ್ತ ದನಗಳ ಪೀಳಿಗೆಯನ್ನು ಸುಧಾರಿಸುವದಕ್ಕಾಗಿ ಈ ಸಮಿತಿಯವರು ಕಳೆದ ಹತ್ತುವರುಷಗಳಿಂದ ಮಾಡಿದ ಪ್ರಯತ್ನವನ್ನು ಕೊಂಡಾಡಿದರು. ಸಮಿತಿಯ ಉಪಾಧ್ಯಕ್ಷ ಸರದಾರ ದಾತಾರಸಿಂಗರು. ಮಂತ್ರಿಗಳನ್ನು ಸ್ವಾಗತಿಸುತ್ತ ದನಗಳ ಪೀಳಿಗೆ ಸುಧಾರಿಸುವ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ಹಿಂದುಸ್ತಾನ ಸರಕಾರದವರು ಪ್ರಕಟನೆಯೊಂದನ್ನು ಹೊರಡಿಸಿ ಪತ್ರಿಕಾಕರ್ತರು, ಚಲಚಿತ್ರ ತಯಾರಿಸುವವರು ಮತ್ತು ಪುಸ್ತಕ ಪ್ರಕಾಶಕರು ಹಿಂದುಸ್ತಾನ ಪಾಕಿಸ್ತಾನಗಳ ನಡುವೆ ಆದ ಅಂತರ್ವಸಾಹತು ಒಪ್ಪಂದವನ್ನು ಕೃತಿಯಲ್ಲಿ ಇಳಿಸಲು ಸಂಪೂರ್ಣ ಸಹಕಾರ ನೀಡಬೇಕೆಂದು ಕೇಳಿಕೊಂಡಿದ್ದಾರೆ– ಈ ಒಪ್ಪಂದದಂತೆ ಎರಡೂ ವಸಾಹತುಗಳಲ್ಲಿ ಶಾಂತಿ ಸೌಹಾರ್ದ ನೆಲೆಗೊಳ್ಳುವಂತೆ ಪತ್ರಿಕಾಕರ್ತರು ಎಲ್ಲ ವಿಧದಿಂದಲೂ ಪ್ರಯತ್ನಿಸುವದಾಗಿ ಪತ್ರಿಕಾ ಸಂಪಾದಕ ಪರಿಷತ್ತಿನ ಅಧ್ಯಕ್ಷರಾದ ಶ್ರೀ ದೇವದಾಸ ಗಾಂಧಿಯವರು ಅಶ್ವಾಸಿಸಿದ್ದಾರೆ.

ರೇಲ್ವೆ ಕೆಲಸಗಾರ ಮಹಾಮಂಡಳದ ಆದೇಶವನ್ನು ಮನ್ನಿಸಿ ಜಿ. ಆಯ. ಪಿ. ಮತ್ತು ಎಸ್. ಆಯ. ರೇಲ್ವೆಗಳ ಕೆಲಸಗಾರರು ಸಂಪು ಹೂಡಬಾರದೆಂದು ನಿರ್ಧರಿಸಿದ್ದಾರೆ.

ಪಾಕಿಸ್ತಾನ

ಪಾಕಿಸ್ತಾನದ ಅರ್ಥ ಸಚಿವರಾದ ಗುಲಾಮ ಮಹಮ್ಮದರು ೧೯೪೯-೫೦ ನೇ ವರುಷದ ಮುಂಗಡ ಪತ್ರಿಕೆಯನ್ನು ಮಂಡಿಸಿದರು. ಆದಾಯ ೧೦೫ ಕೋಟಿ ೧೯ ಲಕ್ಷ ರೂಪಾಯಿ ಇದ್ದು ವೆಚ್ಚವು ೧೦೭ ಕೋಟಿ ೨೦ ಲಕ್ಷ ರೂಪಾಯಿ ಆಗುವದು ಇದರಿಂದ ೯೯ ಲಕ್ಷ ರೂಪಾಯಿ ಕೊರತೆಯಾಗುವದೆಂದು ಅಂದಾಜಿದೆ. ಇದರಲ್ಲಿ ಸಂರಕ್ಷಣ ಶಾಖೆಗೆ ೪೭ ಕೋಟಿ ರೂಪಾಯಿ ವೆಚ್ಚಮಾಡಲಾಗುವದು.

ಡಾ. ಸೀತಾರಾಮ ಇವರನ್ನು ಪಾಕಿಸ್ತಾನದಲ್ಲಿ ಹಿಂದದ ಹಾಯಕಮೀಶನರರನ್ನಾಗಿ ನೇಮಿಸಲಾಗಿದೆ. ಈ ಮೊದಲು ಹೈಕಮೀಶನರರಾಗಿದ್ದ ಶ್ರೀಪ್ರಕಾಶರು ಆಸಾಮದ ಗವರ್ನರರಾಗಿರುವರು. ಡಾ. ಸೀತಾರಾಮರು ಯುಕ್ತ ಪ್ರಾಂತದಲ್ಲಿಯ ಕಾಂಗ್ರೆಸ್ಸಿಗರು ಮತ್ತು ಶಿಕ್ಷಣ ತಜ್ಞರು.

ಸಿಂಧದ ಹಿಂದಿನ ಮುಖ್ಯ ಮಂತ್ರಿ ಖುರ್ರೊ ಇವರಿಗೆ ಎರಡು ವರುಷ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ದಂಡ ವಿಧಿಸಲಾಯಿತು. ಈ ಶಿಕ್ಷೆಯ ವಿರುದ್ಧ ಅವರು ಅಪೀಲು ಮಾಡಿಕೊಂಡದ್ದರಿಂದ ಹತ್ತುಸಾವಿರ ರೂ. ಜಾಮೀನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ.

ಕೊಲ್ಹಾಪುರ ಸಂಸ್ಥಾನ ಮುಂಬೈಯಲ್ಲಿ ಲೀನವಾಯಿತು

ಭೂಕಂದಾಯದಲ್ಲಿ ೧೦ ರಷ್ಟು ಸೂಟು

೩೨೩೦ ಚೌರಸ ಮೈಲು ವಿಸ್ತಾರವುಳ್ಳ ಹಾಗು ೧೨ ಲಕ್ಷ ಜನಸಂಖ್ಯೆಯುಳ್ಳ ಕೊಲ್ಹಾಪುರ ಸಂಸ್ಥಾನವು ಮಾರ್ಚ ೧ ನೇ ತಾರೀಕಿನ ದಿನ ಮುಂಬಯಿ ಪ್ರಾಂತದಲ್ಲಿ ವಿಲೀನವಾಯಿತು. ಪ್ರಾಂತದ ಮುಖ್ಯ ಮಂತ್ರಿಗಳಾದ ಶ್ರೀ ಖೇರರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಜಾಗೀರಿಗಳ ಸಹಿತಗೊಂಡ ಇಡೀ ಸಂಸ್ಥಾನವು ಮುಂಬಯಿ ಪ್ರಾಂತದ ವಶಕ್ಕೆ ಬಂದಿತು. ಈ ಅಜ್ಞೆಯನ್ವಯ ಶ್ರೀ. ನಂಜಪ್ಪನವರು ಮುಖ್ಯ ಆಡಳಿತಗಾರರಾಗಿಯೂ ಶ್ರೀ ದಿ. ಬ. ಪಾಟೀಲ ಮತ್ತು ಗುಲಾಬರಾವ ದೇಶಮುಖರು ಆಡಳಿತೆಗಾರರಾಗಿಯೂ ನೇಮಿಸಲ್ಪಟ್ಟಿರುವರು. ಈ ಸಂಸ್ಥಾನದ ಉತ್ಪನ್ನ ೧ ಕೋಟಿ ೨೮ ಲಕ್ಷ ರೂಪಾಯಿಗಳಷ್ಟಿದೆ. ಇಂದಿನಿಂದ ಹಿಂದೀ ಒಕ್ಕೂಟದಲ್ಲಿಯ ಎಲ್ಲ ನಾಗರಿಕರಿಗೆ ಇದ್ದ ಹಕ್ಕು ಬಾಧ್ಯತೆಗಳೆಲ್ಲ ಕೊಲ್ಹಾಪುರ ಸಂಸ್ಥಾನ ಪ್ರಜೆಗಳಿಗೆ ದೊರೆತವು ಎಂದು ಮುಖ್ಯ ಮಂತ್ರಿ ಖೇರರು ತಮ್ಮ ಭಾಷಣದಲ್ಲಿ ಹೇಳಿದರು. ಸಂಸ್ಥಾನ ಸರಕಾರವು ತೆಗೆದುಕೊಂಡಿದ್ದ ನೀರಾವರಿ ಮತ್ತು ವಿದ್ಯುತ್ ಯೋಜನೆಗಳನ್ನು ಬೇಗ ಪೂರ್ತಿಗೊಳಿಸಲಾಗುವದೆಂದೂ ಶ್ರೀ. ಖೇರರು ಹೇಳಿದರು. ಈ ಸಂಸ್ಥಾನ ಪ್ರಾಂತದಲ್ಲಿ ವಿಲೀನ ಹೊಂದಿದ್ದರ ನೆನಪಿಗಾಗಿ ಭೂಕಂದಾಯದಲ್ಲಿ ೧೦೦ ಕ್ಕೆ ೧೦ ರಷ್ಟು ಹಣವನ್ನು ಮಾಫ ಮಾಡಲಾಗುವದೆಂದೂ ಕೆಲವು ಕೈದಿಗಳ ಶಿಕ್ಷೆಯನ್ನು ಕಡಮೆ ಮಾಡಲಾಗಿದೆಂದೂ ಹೇಳಿದರು. ಕೊಲ್ಹಾಪುರದ ಮಹಾರಾಜರು ಇಂದು ಊರಲ್ಲಿರಲಿಲ್ಲ. ಮಹಾರಾಜರಿಗೆ ಹತ್ತುಲಕ್ಷ ರೂಪಾಯಿ ವರ್ಷಾಶನ ಗೊತ್ತುಪಡಿಸಿದ್ದು ಕೆಲ ಖಾಸಗಿ ಆಸ್ತಿಯನ್ನು ಬಿಡಲಾಗುವದು.

ಪಶ್ಚಿಮ ಬಂಗಾಲ

ವೃತ್ತಪತ್ರಗಳು ನಿಜವಾದ ಮತ್ತು ವಸ್ತುನಿಷ್ಠವಾದ ಸುದ್ದಿಗಳನ್ನು ಕೊಡುವದಕ್ಕೆ ಹೆಚ್ಚು ಮಹತ್ವಕೊಡಬೇಕು. ಸುದ್ದಿಗಳ ಪ್ರಕಟನೆಯಲ್ಲಿ ವೈವಿಧ್ಯವಿರಬೇಕಲ್ಲದೆ ಪತ್ರವ್ಯವಹಾರದ ಪದ್ಧತಿಯನ್ನು ಪುನರ್ಘಟಿಸಬೇಕೆಂದು ಮುಂತಾಗಿ ಬಂಗಾಲದ ಗವರ್ನರರಾದ ಡಾ. ಕೈಲಾಸನಾಥ ಕಟಜೂ ಇವರು ಅವರ ಗೌರವಾರ್ಥ ಏರ್ಪಡಿಸಿದ ಸತ್ಕಾರ ಸಮಾರಂಭವೊಂದರಲ್ಲಿ ಅಭಿಪ್ರಾಯಪಟ್ಟರು.

ಬಾಂಬುಗಳಿಂದ ಸುಸಜ್ಜಿತವಾದ ಯುವಕರ ತಂಡವೊಂದು ೨೬ ನೇ ತಾರೀಕು ಮುಂಜಾನೆ ಕಲಕತ್ತೆಯ ಹತ್ತಿರದ ಡಮಡಮ ವಿಮಾನ ನಿಲ್ದಾಣದ ಮೇಲೆ ದಾಳಿ ಮಾಡಿ ಕಾವಲುಗಾರರು ಮತ್ತು ಓರ್ವ ಕಸಗೂಡಿಸುವವನ ಮೇಲೆ ಬಾಂಬು ತೂರಿ ತೀವ್ರ ಗಾಯಗೊಳಿಸಿದರು. ರಾಯಫಲುಗಳನ್ನು ಅಪಹರಿಸಿಕೊಂಡು ಹೋಗಿರುವರು. ವಿಮಾನ ನಿಲ್ದಾಣದ ಎದುರಿಗಿರುವ ಎಂಜಿನಿಯರಿಂಗ ಕಾರಖಾನೆಯ ಮೇಲೆಯೂ ದಾಳಿ ಮಾಡಲಾಯಿತು. ಅದೇ ರೀತಿ ಮದ್ದಿನ ಕಾರಖಾನೆಯ ಮೇಲೂ ದಾಳಿಯಿತ್ತರು. ಈರ್ವರು ದಾಳಿಗಾರರನ್ನು ಬಂಧಿಸಿದ್ದಾರೆ.

ಡಮ ಡಮ ವಿಮಾನ ನಿಲ್ದಾಣ ಮತ್ತು ಇನ್ನಿತರ ಸ್ಥಳಗಳ ಮೇಲೆ ಆದ ದಾಳಿಯ ಸಂಬಂಧದಲ್ಲಿ ಕಲಕತ್ತೆಯಿಂದ ೪೦ ಮೈಲುಗಳ ಮೇಲೆ ಇರುವ ಇಸ್ಲಾಂದಾಘಾಟದಲ್ಲಿ ೧೫ ಜನರನ್ನು ಸೆರೆಹಿಡಿಯಲಾಗಿದೆ. ನಾಲ್ಕು ಟ್ಯಾಕ್ಸಿಗಳನ್ನು ಮತ್ತು ಕೆಲ ಶಸ್ತ್ರಾಸ್ತ್ರಗಳನ್ನು ಪೋಲೀಸರು ವಶಪಡಿಸಿಕೊಂಡಿರುವರು. ಎಲ್ಲ ದಾಳಿಗಾರರೂ ಬಂಧಿಸಲ್ಪಟ್ಟರೆಂದು ಇದೀಗ ಸುದ್ದಿ ಬಂದಿದೆ.

ಹೌರಾ ಜಿಲ್ಹೆಯ ಗ್ರಾಮವೊಂದರಲ್ಲಿ ಕಮ್ಯುನಿಸ್ಟರೆಂದು ಹೇಳಿಕೊಳ್ಳುವ ಕೆಲ ಜನರಲ್ಲಿ ಮತ್ತು ಪೋಲೀಸರಲ್ಲಿ ತಿಕ್ಕಾಟವಾಗಿ ೫ ಜನ ಕೊಲ್ಲಲ್ಪಟ್ಟರು ಮೂವರು ಗಾಯಗೊಂಡರೆಂದು ಸುದ್ದಿಬಂದಿದೆ. ಗ್ರಾಮದಲ್ಲಿ ತೊಂದರೆಯುಂಟಾಗಿದೆಯೆಂದು ಸುದ್ದಿ ಬಂದಕೂಡಲೆ ಪೋಲೀಸರು ಅಲ್ಲಿಗೆ ಹೋಗಿ ಶಾಂತಿಯನ್ನು ಪ್ರಸ್ಥಾಪಿಸಿದರು.

ತೀರ್ಥಹಳ್ಳಿ ತಾಲೂಕಿನ ಹುಲುಕೋಡು ಹಳ್ಳಿಯ ಎಚ್. ಯಜ್ಞನಾರಾಯಣಭಟ್ಟ ಎಂಬವನು ತನ್ನ ತಾಯಿಯನ್ನು ಕುಡುಗೋಲಿನಿಂದ ಕೊಲೆಮಾಡಿರುವನಾಗಿ ಗೊತ್ತಾಗುತ್ತದೆ. ಪೋಲೀಸರು ಅವನನ್ನು ರಿಪ್ಪನ ಪೇಟೆಯಲ್ಲಿ ಬಂಧಿಸಿದ್ದು ಮುಂದಿನ ವಿಚಾರಣೆ ನಡೆಯುತ್ತದೆ.

ವಾರದ ಭವಿಷ್ಯ

ಜ್ಯೋತಿಷಿ.. ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಅಫೀಸ ಖಡೇಬಝಾರ, ಬೆಳಗಾವಿ

ಮಾರ್ಚ ೭ ರಿಂದ ೧೩ ರ ವರೆಗೆ

ಮೇಷ

ಆರೋಗ್ಯ ಭಾಗ್ಯ ಮತ್ತು ಪ್ರಾಪಂಚಿಕ ಸುಖವನ್ನು ನೀವೀ ವಾರ ಧಾರಾಳವಾಗಿ ಅನುಭವಿಸುವಿರಿ. ಮಾತಿನ ಮಲ್ಲರ ಸಹವಾಸ ಗಂಟು ಬೀಳುವದು. ಒಂದು ಧರ್ಮಕೃತ್ಯ ನಿಮ್ಮ ಕೈಯಿಂದಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಗೆ ಕುಂದು ತರುವ ಒಂದು ಸಂಗತಿ ಜರಗಬಹುದು. ಉಳಿದುದು ನೆಟ್ಟಗೆ. ಮಕ್ಕಳ ಸ್ವಲ್ಪ ವಿರೋಧವೂ ಸೋತ ಶತ್ರುಗಳ ಕಿರುಕುಳಗಳೂ ಮಿತ್ರರಲ್ಲೊಬ್ಬನಿಗೆ ಬರಬಹುದಾದ ವಿಪತ್ತೂ ನಿಮ್ಮನ್ನು ತುಸು ವಿಷಣ್ಣರಾಗಿ ಮಾಡಬಹುದು. ಪ್ರವಾಸ ಪತ್ರವ್ಯವಹಾರ ಲೇಸು, ಭೆಟ್ಟಿ ಬೇಡ. ಅಶ್ವಿನಿಯ ೪ನೆ ಮತ್ತು ಭರಣಿಯ ಮೊದಲ ಮೂರು ಚರಣಗಳಿಗೆ ಅಶುಭ ಫಲಗಳ ಭಯ ಕಡಿಮೆ. ತಾ.೭, ೮, ೯ ಮತ್ತು ೧೦ ಅನುಕೂಲ,

ವೃಷಭ

ಪ್ರಕೃತಿ ಚನ್ನಾಗಿದ್ದರೂ ಪ್ರಾಪಂಚಿಕ ಸುಖದಲ್ಲಿ ಕೊರತೆ. ತಂದೆ ತಾಯಿಗಳು ನ್ಯಾಯವಾಗಿಯೆ ಆದರೂ ತುಂಬ ಜರೆಯುವರು. ಉದ್ಯೋಗದಲ್ಲಿ ಲಾಭ ಪ್ರತಿಷ್ಠಾದಿಗಳು ಚನ್ನಾಗಿದ್ದರೂ ಕೈಕೆಳಗಿನ ಜನರು ನಿಮ್ಮನ್ನು ಮಣಿಸಲು ಪ್ರಯತ್ನಿಸುವರು. ದೇಹಶ್ರಮದ ಕಾರ್ಯಗಳಿಗಿಂತಲೂ ಬೌದ್ಧಿಕ ಕಾರ್ಯಗಳಲ್ಲಿ ನಿಮಗೆ ಹೆಚ್ಚಿನ ಗೆಲವು ದೊರೆಯುವದು. ಅಲ್ಪ ಸ್ವಲ್ಪ ಅನಿರೀಕ್ಷಿತ ಲಾಭದ ಯೋಗವೂ ಇದೆ. ವಾದ ಸ್ಪರ್ಧೆಗಳಲ್ಲಿ ವಿಜಯ. ಪತ್ರವ್ಯವಹಾರದಿಂದ ಕಾರ್ಯಸಿದ್ಧಿಯಾಗಬಹುದು. ಕೃತ್ತಿಕೆಯ ೪ನೆ ಮತ್ತು ರೋಹಿಣಿಯ ಮೊದಲಿನ ೩ ಚರಣಗಳಿಗೆ ತೊಂದರೆಯಿಲ್ಲದೆ ಯಶವಿಲ್ಲ. ತಾ. ೭, ೮, ೧೧ ಮತ್ತು ೧೨ ಅನುಕೂಲ.

ಮಿಥುನ

ನಿಮ್ಮ ಹಾಗು ಹೆಂಡತಿಯ ಪ್ರಕೃತಿ ಅಷ್ಟು ಚನ್ನಾಗಿರದಿದ್ದರೂ ಪ್ರಾಪಂಚಿಕ ಸುಖಕ್ಕೆ ಕಡಿಮೆಯಿಲ್ಲ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಗೆ ಗ್ರಹಣ ಹಿಡಿಯುವದು. ವೆಚ್ಚ ತುಂಬ, ಆದರೆ ಇಷ್ಟಸಿದ್ಧಿ- ದಾಯಾದ್ಯರ ವಿರೋಧ. ವಾದ ಸ್ಪರ್ಧೆಗಳಲ್ಲಿ ನಿಮಗೇನು ಅಷ್ಟು ಲಾಭವಿಲ್ಲದಿದ್ದರೂ ಶತ್ರುವಿಗೆ ಸಾಕುಸಾಕಾಗಿ ಹೋಗುವದು. ಸ್ಥಾವರದಲ್ಲಿ ಸ್ವಲ್ಪ ಸುಧಾರಣೆ. ಪ್ರವಾಸವೇ ಪತ್ರವ್ಯವಹಾರಕ್ಕಿಂತ ಲೇಸು. ಮೃಗಶೀರ್ಷದ ೪ನೆ ಮತ್ತು ಆರ್ದ್ರೆಯ ಮೊದಲ ೩ ಚರಣಗಳಿಗೆ ವಿಶೇಷ ತೊಂದರೆ. ತಾ. ೯, ೧೦, ಮತ್ತು ೧೧ ಹಿತ.

ಕರ್ಕ

ಹೆಂಡತಿ ಮಕ್ಕಳ ಪ್ರಕೃತಿ ಕೆಡುವದಲ್ಲದೆ ಗೃಹ ಕಲಹಗಳ ಸಿಡುಗು, ಸಾಲದ್ದಕ್ಕೆ ಅತಿಥಿಗಳ ಕಾಟ. ಉದ್ಯೋಗದಲ್ಲಿ ಲಾಭವಿದ್ದರೂ ಪ್ರತಿಷ್ಠಾಹಾನಿ. ಆದರೆ ಅನಿರೀಕ್ಷಿತವಾಗಿ ದ್ರವ್ಯ ಮತ್ತು ಬೆಲೆಬಾಳುವ ವಸ್ತುಗಳು ನಿಮಗೆ ಲಭ್ಯವಾಗುವ ಯೋಗವುಂಟು. ನಿಮ್ಮ ಕಣ್ಣುಗಳ ಬಗ್ಗೆ ವಿಶೇಷ ಎಚ್ಚರಿಕೆಯಿರಲಿ. ವಾದ ಸ್ಪರ್ಧೆಗಳಲ್ಲಿ ಅಷ್ಟು ಯಶ ದೊರೆಯದು. ಭೆಟ್ಟಿಯಿಂದ ಸುಖವಿಲ್ಲ, ಪತ್ರವ್ಯವಹಾರವೇ ಅನುಕೂಲ. ಪುಷ್ಯದ ಕೊನೆಯ ಮತ್ತು ಆಶ್ಲೇಷೆಯ ಮೊದಲ ೩ ಚರಣಗಳು ಹೆದರಬೇಕಿಲ್ಲ. ತಾ. ೭, ೮, ೧೨ ಮತ್ತು ೧೩ ಅನುಕೂಲ.

ಸಿಂಹ

ಈ ವಾರ ನಿಮಗೆ ಪ್ರಾಪಂಚಿಕಸುಖ ಕಡಿಮೆ. ಇಲಿಯನ್ನು ಹುಲಿ ಮಾಡಿ ಗಂಡ ಹೆಂಡಿರು ಜಗಳಾಡುವಿರಿ. ಮಕ್ಕಳು ಮನೆಗೆ ಮಾರಿ ಆದರೆ ಪರೋಪಕಾರಿಗಳಾಗುವರು. ಮಿತ್ರರು ತಿರುಗಿ ಬೀಳುವರು. ಉದ್ಯೋಗದಲ್ಲಿ ಒಣ ಪ್ರತಿಷ್ಠೆಯಲ್ಲದೆ ಲಾಭ ಶೂನ್ಯ. ಶತ್ರುಗಳ ಮೇಲ್ಗೈ. ಧರ್ಮದ ಬಗ್ಗೆಯೆ ಅಶ್ರದ್ಧೆಯುಂಟಾಗುವಂಥ ಮಾತುಗಳು ನಿಮ್ಮ ಕಣ್ಣಿಗೆ ಬೀಳುವವು. ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಮಘೆಯ ೪ನೆ ಮತ್ತು ಪೂರ್ವದ ಮೊದಲ ೩ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೭, ೮, ಮತ್ತು ೯ ಹಿತ.

ಕನ್ಯಾ

ಆರೋಗ್ಯವಿದ್ದರೂ ಸುಖವಿಲ್ಲ, ಪ್ರತಿಷ್ಠೆ ಲಾಭಗಳಿದ್ದರೂ ಅಸಾಧ್ಯ ವೆಚ್ಚಗಳಿಂದ ಜೇಬು ಖಾಲಿ. ಶತ್ರುವನ್ನು ಸೋಲಿಸಿಯೂ ಲಾಭ ಶೂನ್ಯ. ಮೇಲಾಗಿ ಸ್ವಲ್ಪ ರಾಜಕೀಯ ಉಪದ್ರವವೂ ಕಾಡಬಹುದು. ನಿಮ್ಮ ಕೈಯಿಂದ ಒಂದು ಧರ್ಮಕೃತ್ಯವಾಗುವ ಸಂಭವ. ಪ್ರವಾಸ, ಭೆಟ್ಟಿಗಿಂತ ಪತ್ರವ್ಯವಹಾರವೇ ಹಿತ. ಉತ್ತರೆಯ ೪ನೇ ಮತ್ತು ಸ್ವಾತಿಯ ಮೊದಲ ೩ ಚರಣಗಳಿಗೆ ಅಶುಭ ಫಲಗಳ ಕೋಟಲೆ ವಿಶೇಷ ಇಲ್ಲ. ತಾ. ೭, ೮, ಮತ್ತು ೧೧ ಅನುಕೂಲ.

ತುಲಾ

ಪ್ರಕೃತಿ ಚನ್ನಾಗಿದ್ದರೂ ಮಕ್ಕಳು ಉನ್ನತಿಗೇರುತಿದ್ದರೂ ಅವರ ರೀತಿನೀತಿಗಳಿಂದ ಮನ ಕೆರಳುವದು. ಉದ್ಯೋಗದಲ್ಲಿ ಲಾಭ ಸರಿಯಾಗಿದ್ದರೂ ಪ್ರತಿಷ್ಠೆಗೆ ಮೋಡ ಮುಸುಕುವದು. ವಾದ ಸ್ಪರ್ಧೆಗಳಲ್ಲಿ ಅತ್ತೂ ಇಲ್ಲ ಇತ್ತೂ ಇಲ್ಲ ಎಂದಾಗುವದು. ವಾಹನದಿಂದ ಅಪಘಾತ ಇಲ್ಲವೆ ಹಾನಿಯಾಗುವ ಸಂಭವದ ಬಗ್ಗೆ ಎಚ್ಚರ ವಹಿಸಿರಿ. ಪತ್ರವ್ಯವಹಾರದಿಂದಲೇ ಕಾರ್ಯಸಿದ್ಧಿ. ಚಿತ್ರೆಯ ೪ನೇ ಮತ್ತು ಸ್ವಾತಿಯ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೯, ೧೦, ೧೧ ಮತ್ತು ೧೨ ಅನುಕೂಲ.

ವೃಶ್ಚಿಕ

ನಿಮಗಿಂತ ನಿಮ್ಮ ಹೆಂಡತಿಯ ಪ್ರಕೃತಿ ಸೌಖ್ಯ. ಮಕ್ಕಳ ಉನ್ನತಿ, ಪ್ರಾಪಂಚಿಕ ಸುಖ ಉತ್ತಮ. ಆದರೆ ಉಳಿದ ಆಪ್ತರೊಡನೆ ವೈಮನಸ್ಯ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚೆನ್ನಾಗಿದ್ದರೂ ಸ್ಥಾವರದಲ್ಲಿ ಹಾನಿಯಾಗಬಹುದು. ವಾದ ಸ್ಪರ್ಧೆಗಳಲ್ಲಿ ನೀವೆ ಗೆದ್ದರೂ ಶತ್ರು ಇನ್ನೂ ಕೈ ಕೋರಿಸುತ್ತಲೆ ಇರುವನು. ಪತ್ರವ್ಯವಹಾರ ಒಳ್ಳೇದು. ಅನುರಾಧೆಯ ೪ನೆ ಮತ್ತು ಜ್ಯೇಷ್ಠದ ಮೊದಲ ೩ ಚರಣಗಳಿಗೆ ತೊಂದರೆಯಿಲ್ಲ. ತಾ. ೭, ೧೧, ೧೨ ಮತ್ತು ೧೩ ಅನುಕೂಲ.

ಧನು

ಹೆಂಡತಿ ಮಕ್ಕಳ ಪ್ರಕೃತಿಗೆ ಪೀಡೆ. ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಅನೇಕ ತೊಂದರೆಗಳ ನಂತರ ಯಶ ದೊರೆತು ಲಾಭ ಪ್ರತಿಷ್ಠೆಗಳಿಗೆ ಭಾಗಿಯಾಗುವಿರಿ. ವಾದ ಸ್ಪರ್ಧೆಗಳಲ್ಲಿ ಗೆಲವು. ಒಂದೆರಡು ಶುಭಕೃತ್ಯಗಳಾಗಬಹುದು. ಭೆಟ್ಟಿ ಪತ್ರವ್ಯವಹಾರಗಳು ಫಲಕಾರಿಯಾಗುವವು. ಮೂಲದ ೪ನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳು ಚಿಂತಿಸಬೇಕಿಲ್ಲ. ತಾ. ೯, ೧[illegible] ಮತ್ತು ೧೩ ಅನುಕೂಲ.

ಮಕರ

ನಿಮ್ಮ ಪ್ರಕೃತಿಯ ಕಡೆ ಗಮನಿಸಬೇಕು. ಉಳಿದ ಪ್ರಾಪಂಚಿಕ ಸುಖ ಮಧ್ಯಮ. ಪ್ರಿಯಜನರ ಸಹವಾಸಯೋಗವಿದ್ದರೂ ಅವರಲ್ಲೊಬ್ಬರೊಡನೆ ತಿಕ್ಕಾಟ ಬರಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚನ್ನಾಗಿದ್ದರೂ ಅ[illegible]ಯರು ಗುಪ್ತ ದ್ವೇಷದಿಂದ ಅಡ್ಡಗಾಲು ಹಾಕಲೆತ್ನಿಸುವರು. ವಾದ ಸ್ಪರ್ಧೆಗಳಲ್ಲಿ ಗೆಲವು. ಧರ್ಮಬುದ್ಧಿ, ಪ್ರವಾಸಾದಿ ಕಾರ್ಯ ಒಳ್ಳೇದು. ಉತ್ತರಾಷಾಢದ ೪ನೆ ಮತ್ತು ಶ್ರವಣದ ಮೊದಲ ೩ ಚರಣಗಳಿಗೆ ತುಂಬ ತೊಂದರೆಯು [illegible] ಇಷ್ಟಸಿದ್ಧಿ. ತಾ. ೭, ೮ ೧೧, ಮತ್ತು ೧೨ ಅನುಕೂಲ.

ಕುಂಭ

ದಂಪತಿಗಳಲ್ಲಿಬ್ಬರ ಆರೋಗ್ಯವೂ ಸರಿಯಾಗಿದ್ದರೂ ಕ್ಷಣ ಮಾತ್ರವೂ ಅನ್ಯೋನ್ಯ ಉಳಿಯದು. ಪ್ರತಿಷ್ಠೆಯಿದ್ದರೂ ಲಾಭಕ್ಕಿಂತ ವೆಚ್ಚ ಹೆಚ್ಚು. ಮಕ್ಕಳ ಅಪ್ರಿಯ ವರ್ತನೆ. ಮಿತ್ರವಿರೋಧ. ಅಪವಾದ ಭಯ. ವಾದ ಸ್ಪರ್ಧೆಗಳಲ್ಲಿ ಸೋಲು. ಪತ್ರವ್ಯವಹಾರಕ್ಕಿಂತ ಭೆಟ್ಟಿ ಒಳಿತು. ಧನಿಷ್ಠೆಯ ೪ನೆ ಮತ್ತು ಶತತಾರೆಯ ಮೊದಲ ೩ ಚರಣಗಳಿಗಂತೂ ತುಂಬ ಅನಿಷ್ಟ. ತಾ. ೯, ೧೦ ಮತ್ತು ೧೩ ಒಳಿತು.

ಮೀನ

ಸ್ತ್ರೀಸುಖದಲ್ಲಿ ವ್ಯತ್ಯಯ. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭವಿಲ್ಲ. ಸಿಕ್ಕಾಬಟ್ಟೆ ವೆಚ್ಚ. ವಾದ ಸ್ಪರ್ಧೆಗಳಲ್ಲಿ ಬಹಳ ಖರ್ಚು. ಶ್ರಮಪಟ್ಟ ನಂತರ ವಿಜಯಲಕ್ಷ್ಮಿ ನಿಮಗೊಲಿಯುವ ಲಕ್ಷಣ ಕಾಣುವದು. ಒಬ್ಬ ಮಿತ್ರನಿಂದ ತುಂಬ ಸುಖ ದೊರೆತರೆ ಇನ್ನೊಬ್ಬನಿಂದ ತುಂಬ ಕಾಟ. ದುಃಸ್ವಪ್ನಗಳು ಬಹಳ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ಅನುಕೂಲ. ಉತ್ತರಾಭಾದ್ರದ ೪ನೆ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ಅಷ್ಟು ಅಹಿತವಿಲ್ಲ. ತಾ. ೭, ೧೧ ಮತ್ತು ೧೨ ಅನುಕೂಲ.

ಮುಂಬಯಿ ಸರಕಾರವು ೨೫೦ ರೂಪಾಯಿ ಮಿಕ್ಕದಷ್ಟು ಸಂಬಳವುಳ್ಳ ಸರಕಾರಿ ನಾನ್ ಗೆಜೆಟೆಡ್ ಮತ್ತೂ ವಿವಾಹಿತ ಗೆಜೆಟೆಡ್ ನೌಕರರ ತುಟ್ಟಿಭತ್ತೆಯ ಪ್ರಮಾಣಗಳಲ್ಲಿ ೧೦ ರೂಪಾಯಿ ಏರಿಸಿದೆ. ಮುಂಬಯಿ ಪ್ರಾಂತದಲ್ಲಿ ಲೀನವಾದ ಹಾಗು ಸೇರ್ಪಡೆ ಹೊಂದಿದ ಸಂಸ್ಥಾನಗಳ ಪೂರ್ಣಾವಧಿ ನೌಕರರಿಗೂ ಈ ಹೆಚ್ಚಳ ಅನ್ವಯಿಸುವದು.

Reg. No. B. 3148

LICENCE No. 3
Licensed to Post without Prepayment

KARMAVEER 7-3-49

ಪುಸ್ತಕ ಪರಿಚಯ

[ಕಿವಾಗೆ ಬಂದ ಎಲ್ಲ ಪುಸ್ತಕಗಳನ್ನು ಸಾಭಾರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ -ಸಂ]

ಧ್ರುವ ನಕ್ಷತ್ರ

ಲೇಖಕರು: ಅಕ್ಕಿಕ ತೊಂಕಟೇಶ ಪ್ರಕಾಶಕರು: ಎಚ್. ಎಸ್. ರಾವ ಬ್ರದರ್ಸ ಚಿಕ್ಕಪೇಟೆ, ಬೆಂಗಳೂರು ನಗರ. ಪುಟಗಳು ೮೮. ಬೆಲೆ ೧ ರೂ.

ಅಕ್ಕಿಕ ಸಾಹಿತ್ಯದ ಮೊದಲನೆಯ ಗ್ರಂಥ ವಿದು. ಪ್ರಗತಿಶೀಲ ಲೇಖಕರಾದ ಶ್ರೀ ... ತೊಂಕಟೇಶರವರು ತಮ್ಮ ಸಾಹಿತ್ಯ ... ಕನ್ನಡಿಗರಿಗೆ ಒದಗಿಸುವದಕ್ಕಾಗಿ ಏರ್ಪ ಡಿಸಿದ ಮಾಲೆಯ ಮುಖಾಂತರ ಆರು ಕತೆಗಳ ಕಟ್ಟುಳ್ಳಗೊಂಡ ಈ ಗ್ರಂಥವನ್ನು ಪ್ರಕಟಿಸಿ ದ್ದಾರೆ. ಈ ಗ್ರಂಥದಲ್ಲಿ ಧ್ರುವ ನಕ್ಷತ್ರ, ನನ್ನ ನರಕ, ನಂದಿದ ದೀಪ, ಸಾವು ಬದುಕು, ಶುಕ್ರ ಸಾರ ಮುತ್ತು ಅಭಿನೇತ್ರಿ" ಎಂಬ ಆರು ಕತೆ ಗಳಿವೆ. ಈ ಕತೆಗಳಲ್ಲಿ ಹೇಳಲಾದ ವಿಷಯಗಳು ಲೇಖಕರು ಆಯ್ಕೆಯಲ್ಲಿ ಪಾತ್ರವು ಹೊಂದಿದ ವರಾದುವರೆಂಬುದನ್ನು ಸೂಚಿಸುತ್ತವೆ. ಆದರೆ ಅವೇ ವಿಷಯಗಳನ್ನು ಮನಮುಟ್ಟುವಂತೆ ಲೇಖಕರು ಹೇಳಿಲ್ಲ. ಅತಿರಂಜಿತ ವರ್ಣನೆ ಗಳಿಂದ ಕಥೆಗಳಲ್ಲಿಯ ಸ್ವಾರಸ್ಯ ಹದಗೆಟ್ಟಿದೆ. ಇದಕ್ಕಿಂತಲೂ ಹೆಚ್ಚಿನದೆಂದರೆ ಲೇಖಕರ ವ್ಯಾಕರಣ ಜ್ಞಾನದ ಬಗ್ಗೆ ಕೆಲ ಮಾತುಗಳನ್ನು ವಿಷಾದದಿಂದ ಬರೆಯಬೇಕಾಗಿದೆ. ಧ್ರುವ ಶಬ್ದವನ್ನು ಧ್ರುವ ಎಂದು ಉಚ್ಚರಿಸುವದೂ ಒಂದು ಪ್ರಗತಿಶೀಲತೆಯ ಲಕ್ಷಣವೆ ಅದಂ ತಾಗಿದೆ. ವಿದ್ಯಾರ್ಥಿಗಳು ಈ ಉಚ್ಚಾರವನ್ನು ಅನುಸರಿಸಿದರೆ ಅದರ ಹೊಣೆ ಯಾರದು? ಲೇಖಕರು ಇವೆಲ್ಲವುಗಳನ್ನು ಗಮನಿಸಬೇಕು. ಇನ್ನು ಮುಂದಾದರೂ ಲೇಖಕರು ಇಂತಹ ದೋಷಗಳಾಗದಂತೆ ಜಾಗ್ರತೆ ವಹಿಸುವರೆಂದು ಆಶಿಸಬಹುದೆ?

ಮಹೇಂದ್ರಜಾಲ

ಲೇಖಕರು: ಶ್ರೀ ನವಗಿರಿನಂದ; ೩೩೪ ಪುಟ ರೂ. ೪/೮

ಸೈತಾನ್

ಲೇಖಕರು: ಶ್ರೀ ಎ. ವಿ. ಪೈ, ೯೪ ಪುಟ ರೂ. ೧/೪

ಕರ್ಣ ಪಿಶಾಚಿ

ಲೇಖಕರು: ಶ್ರೀ ಮುರಲಿ, ೧೫೦ ಪುಟ ರೂ. ೨/೪

ಮೇಲಿನ ಮೂರೂ ಪುಸ್ತಕಗಳ ಪ್ರಕಾಶ ಕರು: ಬಿ. ಪಿ. ಕಾಳೆ, ತೇಜಾಚಲ ಪ್ರೆಸ್, ದುರಿಹಾಳ, ಧಾರವಾಡ

ಹುಟ್ಟಿದವನ ಖೂನಿ

ಲೇಖಕರು: ಶ್ರೀ ತಲಚೇರಿ ರಂಗ ರಾಯರು. ಪ್ರಕಾಶಕರು: ಪರ್ಣಕುಟಿ ಗ್ರಂಥಮಾಲೆ, ಧಾರವಾಡ. ೭೬ ಪುಟ ೧ ರೂಪಾಯಿ

ಪತ್ತೇದಾರಿ ಸಾಹಿತ್ಯ ಕನ್ನಡಕ್ಕೆ ಬರತೊಡಗಿ ಮೂರು ದಶಕಗಳು ಕಳೆದು ಹೋಗಿವೆ. ಈ ಅವಧಿಯಲ್ಲಿ ಅದು ಸಾಧಿಸಿದ ಪ್ರಗತಿಯನ್ನು ಸಿಂಹಾವಲೋಕನ ಮಾಡಿದರೆ ಕೇವಲ ನಿರಾ ಶೆಯೇ ಆಗುವದು. ಮೇಲ್ಕಾಣಿಸಿದ ಪುಸ್ತಕ ಗಳಲ್ಲಿ ಮೊದಲನೆ ಮೂರನ್ನು ಪ್ರಸಿದ್ಧಿಸಿರುವ ಶ್ರೀ ಬಿ. ಪಿ. ಕಾಳೆಯವರೇ ಕನ್ನಡದಲ್ಲಿ ಪತ್ತೇ ದಾರಿ ಸಾಹಿತ್ಯದ ಗುತ್ತಿಗೆದಾರರೆಂದು ನಿರ್ಭ ಯವಾಗಿ ಹೇಳಬಹುದು. ಬಿ. ವೆಂಕಟಾ ಚಾರ್ಯರೇ ಮೊದಲಾದ ಕೆಲ ವೈಸೂರಿಗರು ಬಂಗಾಲಿಯಿಂದ ಅನುವಾದಿಸಿ ಪ್ರಕಟಿಸಿದ ಕೆಲವು ಪುಸ್ತಕಗಳನ್ನು ಬಿಟ್ಟರೆ ಶ್ರೀ ಕಾಳೆ ಯವರೇ ಎಲ್ಲ ಪತ್ತೇದಾರಿ ಕತೆಗಳನ್ನು ಪ್ರಕಟ ಸಿದವರು. ಆದರೆ ಸ್ವತಃ ಅವರ ಪ್ರಕಾಶನಗಳ ಯೋಗ್ಯತೆಯೆ ಇಂದು ಕೆಳ ಮಟ್ಟಕ್ಕಿಳಿಯು ತಿದೆ ಹೊರತು ಏಳ್ಗೆ ಹೊಂದುತ್ತಿಲ್ಲ. ಅವರೇ ಬರೆದು ಪ್ರಕಟಿಸಿದ ಭಗವಾನ್‌ದಾಸ ಮೊದ ಲಾದ ಕೆಲ ಉತ್ತಮ ಕತೆಗಳು ಪರಭಾಷೆ ಗಳಿಂದ ರೂಪಾಂತರಿಸಿಕೊಂಡವುಗಳಾಗಿ ದ್ದರೂ ಅವುಗಳಲ್ಲಿ ಸ್ವಲ್ಪ ಸ್ವಾರಸ್ಯ, ನೈಸರ್ಗ ಕತೆಗಳನ್ನು ಕಾಣಬಹುದಾಗಿತ್ತು. ಸೂಕ್ಷ್ಮ ಬುದ್ಧಿಯವರಿಗೂ ಅವೊಂದು ಬಗೆಯ ಮನೋ ರಂಜನೆಯನ್ನು ಕೊಡುತಿದ್ದವು. ಆದರೆ ಈಗ ಅವರು ಪ್ರಕಟಿಸಿದ ಪುಸ್ತಕಗಳು ಬುದ್ಧಿಶಕ್ತಿ, ಲೋಕಾನುಭವಗಳ ದಿವಾಳಿಯನ್ನು ಪ್ರದರ್ಶಿ ಸುತ್ತವೆ.

ದಕ್ಷಿಣ ಕನ್ನಡದವರಂತೆ ತೋರುವ "ಮಹೇಂದ್ರಜಾಲ"ದ ನವಗಿರಿ ನಂದರಾಗಲಿ, "ಸೈತಾನ"ದ ಎ. ವಿ. ಪೈಯವರಾಗಲಿ ಗುಹೆ, ಪಾಳುಮನೆ, ಟೀಪೂ ಸುಲ್ತಾನನ ಕಾಲದ ನೆಲಮಾಳಿಗೆಗಳಿಲ್ಲದೆ ತಮ್ಮ ಕಳ್ಳ ಕೊಲೆಗಡಕ ರನ್ನು ಇಡಲು ಬೇರೆ ಸ್ಥಳವನ್ನೇ ಕಾಣಲಾರದ ವರಾಗಿದ್ದಾರೆ. ಯವನಯಾಮಿನಿಯ ಅಲಿ ಬಾಬಾ ಮತ್ತು ನಾಲ್ವತ್ತು ಕಳ್ಳರ ಕಥೆ ಯಾದರೂ ಪ್ರೌಢ ಬುದ್ಧಿಗೆ ಇವುಗಳಿಗಿಂತ ಹೆಚ್ಚು ನಂಬಿಗೆ ಹುಟ್ಟಿಸಬಲ್ಲದೆಂದು ಹೇಳಬಹುದು. ಪುರಾಣದ ಕತೆಗಳನ್ನು ಕೂಡ ಅಕ್ಷರಶಃ ನಂಬುವ ಜನರು ಸಾಕಷ್ಟಿರುವ ಈ ದೇಶದಲ್ಲಿ ಇವುಗಳನ್ನು ಓದುವವರೂ ಇರ ಬಹುದು. ಆದರೆ ಇವು ಓದುವವರಿಗಿಂತ ಬರೆ ದವರ ಬುದ್ಧಿಗೆ ಅಪಮಾನಕಾರಿಗಳು.

"ಕರ್ಣಪಿಶಾಚಿ" ಉಳಿದೆರಡು ಪುಸ್ತಕಗಳಿ ಗಿಂತ ತುಸು ಏರಿಕೆಯ ಮಟ್ಟದ್ದು. ವಿದ್ಯು ದ್ವಿಜ್ಞಾನಿಯೊಬ್ಬನು ಸಾಧಿಸಿದ ಅದ್ಭುತ ಕುಟಿಲ ಯಂತ್ರಗಳು ಕತೆಯ ವಸ್ತು. ಆದರೆ ಎಚ್. ಜಿ. ವೆಲ್ಸರ ಫ್ಯಾಂಟಸಿ ಮಾದರಿಯ ಕತೆಯನ್ನು ಬರೆಯ ಹೊರಟ ಪ್ರಸ್ತುತ ಲೇಖ ಕರಿಗೆ ಅದಕ್ಕೆ ಬೇಕಾದ ವೈಜ್ಞಾನಿಕ ಜ್ಞಾನ ತೀರ ಕಡಿಮೆಯಾಗಿರುವದರಿಂದ ಮತ್ತೆ ಅವರು ಶತಮಾನ ಹಳೆಯ ಕಾನನ್‌ಡಾಯ್ಲರ ಶರ್ಲಕ್ ಹೋಮ್ಸ್-ವಾಟ್ಸನ್ ರೀತಿಗಿಳಿಯು ತ್ತಾರೆ. ಮೂರೂ ಕತೆಗಳು ವಾಸ್ತವತೆಗೆ ಹರ ದಾರಿ ದೂರವಾಗಿವೆ. "ಮಹೇಂದ್ರಜಾಲ" ದಲ್ಲಂತೂ ಕಾಯಿದೆಯ ಅಜ್ಞಾನದ ಹುಚ್ಚು ಕುಣಿತ ಕಾಣುತ್ತದೆ.

ಶ್ರೀ ತಲಚೇರಿ ರಂಗರಾಯರು ಮಂಗ ಳೂರಿನ ಪ್ರಸಿದ್ಧ ಕ್ರಿಮಿನಲ್ ವಕೀಲರು. ಅವರು ಬಯಸಿದ್ದರೆ ಪ್ರಸ್ತುತ ಪುಸ್ತಕದಲ್ಲಿಯ ೫ ಕತೆಗಳನ್ನು ಹೆಚ್ಚು ಆಕರ್ಷಕವಾಗಿ ಮಾಡ ಬಹುದಾಗಿತ್ತು. ಆದರೆ ಗಾಸ್ಪೇರಿ ನಜರೇತರ ದಂಡನೀತಿಗೆ ಮಾರುಹೋದ ಅವರು ಕತೆಯ ಕಲಾತ್ಮಕ ಅವಶ್ಯಕತೆಗಳಿಗೆ ಮಹತ್ವ ಕೊಡ ಲಿಲ್ಲ. ನಿಜವಾಗಿ ಅವರು ಬರೆದಿರುವುದು ಪತ್ತೇ ದಾರಿ ಕತೆಗಳಲ್ಲ. ಕೆಲ ಕ್ರಿಮಿನಲ್ ದಾವೆಗಳ ಇತಿಹಾಸ, ಬ್ರಿಟಿಶ ಅಪರಾಧ ದಂಡ ತತ್ವಜ್ಞಾ ನದ ಬಗ್ಗೆ ತಿರಸ್ಕಾರವನ್ನು ತಳೆದಿದ್ದ ನಜ ರೇತರು ಸೃಷ್ಟಿಸಿದ ಕೃತಕ ಪುರಾವೆಗಳ ಕೌಶ ಲದ ವರ್ಣನೆ. ಭೂಮಿಯ ಮೇಲೆ ಹುಟ್ಟದೆಯೆ ಇದ್ದ ಒಬ್ಬಾತನನ್ನು ಕೊಂದನೆಂದಾರೋಪಿಸಿ ಖಿಲಾಡಿ ಕೊಲೆಗಡಕನೊಬ್ಬನನ್ನು ಹಿಡಿದು ಕೃತ ಕ ಪುರಾವೆಗಳಿಂದ ಅವನನ್ನು ಗಲ್ಲಿಗೇರಿಸಿದ ನಜ ರೇತರ ನೀತಿಯ ಗುಣಗಳೇನೇ ಇರಲಿ, ಅದು ಪೋಲೀಸರಿಗೆ ನಾವಿಂದು ಹೇಳಿಕೊಡಬೇಕಾದ ಪಾಠವಂತೂ ಖಂಡಿತವಾಗಿ ಅಲ್ಲ. ಶ್ರೀ ರಂಗ ರಾಯರು ತಮ್ಮ ಅನುಭವದ ಅನೇಕ ಪ್ರಕ ರಣಗಳನ್ನು ಕಲೆಯ ಅವಶ್ಯಕತೆಗಳಿಗೆ– ನಜ ರೇತಿಜಂಗಲ್ಲ– ಹೆಚ್ಚು ಗಮನವಿತ್ತು ಬರೆದರೆ ಅವು ಖಂಡಿತವಾಗಿ ಎಲ್ಲರಿಗೂ ಮೆಚ್ಚಿಗೆ ಯಾದಾವು.

ತಿದ್ದುಪಡಿ

ಕಳೆದ ವಾರದ ಸಂಚಿಕೆಯಲ್ಲಿ ವಿಮರ್ಶಿ ಸಲ್ಪಟ್ಟ "ಸವಿಗನಸು" ಪುಸ್ತಕದ ಪ್ರಕಾಶ ಕರು ಶ್ರೀ ಇದಿನಬ್ಬರಾಗಿರದೆ ಎಚ್. ಎಸ್. ರಾವ್ ಬ್ರದರ್ಸ ಚಿಕ್ಕಪೇಟೆ ಬೆಂಗಳೂರು– ಇವರಾಗಿದ್ದಾರೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೋಹರೆಯವರು ಮುದ್ರಿಸಿಪ್ರಕಟಿಸಿದರು.